ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಡಾ: ಜಿ. ಪರಮೇಶ್ವರ್, ಉನ್ನತ ಶಿಕ್ಷಣ ಸಚಿವರು, ಇವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, 2000ದ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** II

ಈಗ ವಿರೋಧ ಪಕ್ಷದ ನಾಯಕರು ವೀರಪ್ಪನ್ ವಿಷಯದ ಬಗ್ಗೆ ಚರ್ಚೆಯನ್ನು ಮುಂದುವರಿಸಬೇಕು.

9. ನಿಯಮ 69ರ ಮೇರೆಗೆ ಚರ್ಚೆ

ಡಾ: ರಾಜ್‌ಕುಮಾರ್‌ರವರನ್ನು ಅಪಹರಿಸಿ ಬಿಡುಗಡೆ ಮಾಡಿದ್ದು, ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಕಾರ್ಯಾಚರಣೆ ಮಾಡಿ ಕಾಡುಗಳ್ಳ ವೀರಪ್ಪನನ್ನು ಹಿಡಿಯುವುದರ ಬಗ್ಗೆ ಚರ್ಚೆ

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ವಿಷಯಗಳು ವೀರಪ್ಪನ್ ವಿಚಾರದಲ್ಲಿ ಪ್ರಸ್ತಾಪವಾಗಿದೆ. ಈಗ ಒಂದು ಹಂತಕ್ಕೆ ಬಂದಿದ್ದೇವೆ. ನಾನು ಆಗಲೇ ಹೇಳಿದ ಹಾಗೆ ಮುಖ್ಯವಾಗಿ ಗ್ರಾನೈಟ್ ಲಾಬಿಯ ಬಗ್ಗೆ ನನಗೆ ಬಂದ ಮಾಹಿತಿ ಪ್ರಕಾರ ಹೇಳಬೇಕೆಂದರೆ ಎಂ.ಎಂ. ಹಿಲ್ ಸುತ್ತಮುತ್ತಲಿನ ಕಾಡು ಹಾಗೂ ಅದಕ್ಕೆ ಹೊಂದಿಕೊಂಡಂತೆ ಎಳಂದೂರು ಕಾಡು ಇದೆ. ಈ ಸ್ಥಳಗಳ ಮಧ್ಯದಲ್ಲಿ ಇರುವ ಕೆರೆಗೆ ಹೊಂದಿಕೊಂಡಂತೆ ಇರುವ ಪ್ರದೇಶದಲ್ಲಿ ಗ್ರಾನೈಟ್ ಉದ್ದಿಮೆ ನಡೆಯುತ್ತಿದೆ. ಈ ವರ್ಷದ ಜುಲೈನಿಂದ ಆ ಗ್ರಾನೈಟ್ ಉದ್ದಿಮೆ ಮತ್ತೆ ಪ್ರಾರಂಭವಾಯಿತು. ಅಲ್ಲಿಯವರೆವಿಗೂ ಕೂಡ ಆ ಉದ್ದಿಮೆ ಪ್ರಾರಂಭವಾಗಿರಲಿಲ್ಲ. ಇಲ್ಲಿ ಡಾ: ಬಾನು ಹಾಗೂ ಕೆಲವು ಪ್ರಮುಖರು ಅಲ್ಲಿ ಗ್ರಾನೈಟ್ ಉದ್ದಿಮೆ ನಡೆಸುತ್ತಿದ್ದಾರೆ. ಡಾ: ಬಾನು ಬಗ್ಗೆ ಪತ್ರಿಕೆಯಲ್ಲಿ ಈಗಾಗಲೇ ಸುದ್ದಿಗಳು ಬರುತ್ತಿವೆ. ಕೆಲವೊಂದು ಕೇಸ್ ಅವರ ಮೇಲೆ ಬಿದ್ದಿರುವಂತಾದ್ದು. ಗ್ರಾನೈಟ್ ಎಕ್ಸ್‌ಪೋರ್ಟ್ ಮಾಡುವಂಥಾದ್ದು ಇದೆ. ಇದಕ್ಕೆಲ್ಲಾ ಕೆಲವೊಂದು ಹಿನ್ನೆಲೆ ಇದೆ. ಇದರಲ್ಲಿ ದೊಡ್ಡ ಲಾಬಿ ನಡೆಯುತ್ತಿದೆ. ಇಲ್ಲಿ ಪ್ರಮುಖವಾಗಿ ನಾನು ಹೇಳುವುದೇನೆಂದರೆ, ಇವತ್ತು ವೀರಪ್ಪನ್ ಆ ಕಾಡಿನಲ್ಲಿ ಬೆಳೆಯುವುದಕ್ಕೆ ಆ ತಾಣಗಳ ಹಿಂದೆ ಹಿನ್ನೆಲೆ ಏನಿದೆ ಎಂದು ನಾವು ತಿಳಿದುಕೊಳ್ಳಬೇಕು. ಏಕೆಂದರೆ ಇವತ್ತು ಅಲ್ಲಿರುವಂತಹ ಸ್ಥಳೀಯ ಜನರ ವಿಶ್ವಾಸವನ್ನು ತೆಗೆದುಕೊಳ್ಳದೆ ಇದ್ದರೆ ಬಹುಶಃ ನಾವು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲಿ ಸುತ್ತಮುತ್ತಲೂ ಸಾಕಷ್ಟು

ಹಳ್ಳಿಗಳು ಇವೆ. ಇಲ್ಲಿಯವರೆಗೆ ಏನಾಗಿದೆ ಎಂದರೆ ಆ ಪ್ರದೇಶದಲ್ಲಿ ಇರುವಂತಹ ಗ್ರಾಮೀಣ ಪ್ರದೇಶಗಳು ಯಾವುದೇ ಅಭಿವೃದ್ಧಿಯಾಗಿಲ್ಲ. ರಸ್ತೆಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆಗಳಿಲ್ಲ. ಕಾಡು ಎಂದರೆ ಕಾಡಿನಲ್ಲೇ ಇರುವ ಜನ ಇದ್ದಾರೆ. ಯಾವ ಸರ್ಕಾರ ಕೂಡ ಅಲ್ಲಿನ ಅಭಿವೃದ್ಧಿ ಬಗ್ಗೆ ಕಾಳಜಿ ಮಾಡಲಿಲ್ಲ. ಹೀಗಾಗಿ ಅಲ್ಲಿರುವಂತಹ ಜನರಿಗೆ ನಾವು ಅನಾಥರು, ನಾವು ಯಾವುದೋ ಒಂದು ಬೇರೆ ದೇಶದಲ್ಲಿದ್ದೇವೆ ಎನ್ನುವ ಭಾವನೆ ಇದೆ. ಅಲ್ಲಿರುವಂತಹ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಕೆಲಸ ಯಾವತ್ತು ಆಗಿಲ್ಲ. ಆದುದರಿಂದ, ಎಲ್ಲಿಯವರೆಗೆ ನಾವು ಸ್ಥಳೀಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಅಲ್ಲಿಯವರೆಗೆ ನಾವು ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಆದಕ್ಕಾಗಿ ಸರ್ಕಾರ ಮೊಟ್ಟಮೊದಲನೆಯದಾಗಿ ಕಾರ್ಯಾಚರಣೆ ಜೊತೆ ಜೊತೆಗೆ ಅಲ್ಲಿನ ಸ್ಥಳೀಯ ಜನರ ವಿಶ್ವಾಸವನ್ನು ತೆಗೆದುಕೊಳ್ಳುವಂತಹ ಹಾಗೂ ಅಭಿವೃದ್ಧಿ ಚಟುವಟಿಕೆ ಕೆಲಸ ಮಾಡುವಂತಹ ಕೆಲಸವಾಗಬೇಕು. ಈ ಗ್ರಾನೈಟ್ ಉದ್ಯಮ ಚಟುವಟಿಕೆಯನ್ನು ತಕ್ಷಣ ಬಂದ್ ಮಾಡಬೇಕು. ಮತ್ತು ಅಲ್ಲಿ ಇರುವಂತಹ ಜನರ ವಿಶ್ವಾಸ ತೆಗೆದುಕೊಂಡು ಕಾರ್ಯಾಚರಣೆ ಮಾಡಬೇಕು. ಮತ್ತು ಅಲ್ಲಿ ಎಸ್‌ಟಿಎಫ್ ಏನಿದೆ ಅದರಿಂದ ಹೆರಾಸ್‌ಮೆಂಟ್, ಅಟ್ರಾಸಿಟೀಸ್ ಆಗಿದ್ದನ್ನು ನಾವು ನೋಡುತ್ತಿದ್ದೇವೆ. ಇವತ್ತು ವೀರಪ್ಪನ್ ಅಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ರಾಬಿನ್‌ಹುಡ್ ಆಗಿದ್ದಾನೆ. ಏಕೆಂದರೆ ಸರ್ಕಾರ ಮತ್ತು ಅಧಿಕಾರಿಗಳು ಅವರ ಹತ್ತಿರ ಹೋಗುವುದಿಲ್ಲ. ಏಕೆಂದರೆ ಅಲ್ಲಿ ಜನರನ್ನು ಸಾಕುವ ಸಲುವಾಗಿ ಸಾಕಷ್ಟು ಹಣವನ್ನು ಕೊಡುವಂತಹ ವ್ಯವಸ್ಥೆ ಮಾಡುವುದೇ ವೀರಪ್ಪನ್. ಹೀಗಾಗಿ ಅಲ್ಲಿ ವೀರಪ್ಪನ್ ರಾಬಿನ್‌ಹುಡ್ ಆಗಿ ಆ ಒಂದು ಪ್ರದೇಶದಲ್ಲಿ ಬೆಳೆದಿದ್ದಾನೆ. ಆದುದರಿಂದ ನಮಗೆ ಅಲ್ಲಿನ ಜನರಿಂದ ಯಾವುದೂ ಮಾಹಿತಿ ಸಿಗುವುದಿಲ್ಲ. ಅಲ್ಲಿ ದಟ್ಟವಾದ ಅರಣ್ಯ ಇರುವುದರಿಂದ, ಜನ ಎಲ್ಲಿ ಹೋಗುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಆದುದರಿಂದ ಆ ಸ್ಥಳೀಯ ಜನರಿಂದ ನಮ್ಮ ಇಂಟಲಿಜೆನ್ಸ್‌ಗೆ ಮಾಹಿತಿ ಸಿಗದೇ ಇದ್ದರೆ ಬಹಳ ಕಷ್ಟದ ಕೆಲಸ. ಆದುದರಿಂದ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ಬೆಂಗಳೂರಿನಲ್ಲಿ ಉಗ್ರಗಾಮಿಗಳ ಹಾವಳಿ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಅದಕ್ಕಿಂತ ಮೊದಲು ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿ ಹಿಂದೆ ನಡೆದಂತಹ ಸರ್ವಪಕ್ಷದ ಸಭೆಯಲ್ಲಿ ಸರ್ಕಾರ ಕೆಲವು ವಿಷಯಗಳನ್ನು ಡಿಸ್‌ಕ್ಲೋಜ್ ಮಾಡುವುದಕ್ಕೆ ಆಗುವುದಿಲ್ಲ. ಕೆಲವೊಂದು ಕಾನ್ಫಿಡೆನ್ಸ್ ವಿಚಾರಗಳು ಇರುತ್ತವೆ. ಕಾರ್ಯಾಚರಣೆ ಮಾಡುವಂತಹ ಸಂದರ್ಭದಲ್ಲಿ ನಾವು ಪ್ರಮುಖವಾಗಿ ಸರ್ಕಾರದ ಜೊತೆ ಸಮಾಲೋಚನೆ ಮಾಡುವಂತಹ ಸಂದರ್ಭದಲ್ಲಿ ಯಾವುದೇ ವಿಷಯಗಳ ಬಗ್ಗೆ ಡಿಸ್‌ಕ್ಲೋಜ್ ಮಾಡುವುದಕ್ಕೆ ನಾವು ಇನ್‌ಸಿಸ್ಟ್ ಮಾಡುತ್ತಿರಲಿಲ್ಲ. ಏಕೆಂದರೆ ಅದು ಸರ್ಕಾರಕ್ಕೆ ಬಿಟ್ಟ ವಿಷಯ. ಕೆಲವೊಂದು ವಿಚಾರಗಳಲ್ಲಿ ಸರ್ಕಾರ ಗೋಪ್ಯತೆಯನ್ನು ಕಾಪಾಡಿಕೊಳ್ಳಬೇಕು. ಅದಕ್ಕೋಸ್ಕರ ನಾವು ಕೆಲವು ವಿಚಾರಗಳ ಬಗ್ಗೆ ಡಿಸ್‌ಕ್ಲೋಜ್

ಮಾಡುವುದಕ್ಕೆ ಇನ್‌ಸಿಸ್ಟ್ ಮಾಡಲಿಲ್ಲ. ಕೋ-ಆಪರೇಟ್ ಮಾಡಿಕೊಂಡು ಬಂದಿದ್ದೇವೆ. ಕೆಲವು ಕ್ಯಾಸೆಟ್ಟುಗಳು ಬಂದವು, ವೀರಪ್ಪನ್ ಕಳುಹಿಸುತ್ತಿದ್ದ, ಅದನ್ನು ಗೋಪಾಲನ್ ತೆಗೆದುಕೊಂಡು ಬರುತ್ತಿದ್ದ. ಡಾ: ರಾಜ್‌ಕುಮಾರ್ ಕುಟುಂಬಕ್ಕೂ ಕ್ಯಾಸೆಟ್ಟು ಬಂತು. ಆ ಕ್ಯಾಸೆಟ್ಟುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಇರಬಹುದು, ಗೃಹ ಸಚಿವರಿಗೆ ಇರಬಹುದು ನಾವು ಯಾವುದೇ ಸಮಯದಲ್ಲಿ ಆ ಕ್ಯಾಸೆಟ್‌ನಲ್ಲಿ ಏನು ಮಾಹಿತಿ ಇದೆಯೆಂದು ಇನ್‌ಸಿಸ್ಟ್ ಮಾಡುವುದಕ್ಕೆ ಹೋಗಲಿಲ್ಲ. ಆದರೆ ಇವತ್ತು ಡಾ ರಾಜ್‌ಕುಮಾರ್‌ರವರು ಸುರಕ್ಷಿತವಾಗಿ ಬಂದಿದ್ದಾರೆ. ಆದರೆ ಆ ಕ್ಯಾಸೆಟ್‌ನಲ್ಲಿ ಏನಿದೆ ಎನ್ನುವುದನ್ನು ನೋಡುವುದಕ್ಕೆ ಅದರಲ್ಲಿ ಏನಾದರೂ ಕಾನ್ಫಿಡೆನ್ಸ್ ಇದ್ದರೆ ಸದನದಲ್ಲಿ ಇಡುವುದು ಸಾಧ್ಯವಾಗದೇ ಇದ್ದರೆ, ನೀವೇನು ಪ್ರಮುಖ ನಾಯಕರ ಸಭೆ ಕರೆದು ಮಾತನಾಡುತ್ತೀರಿ ಅಂತಹ ಸಂದರ್ಭದಲ್ಲಿ ಆ ಕ್ಯಾಸೆಟ್‌ನಲ್ಲಿ ಏನಿದೆ ಎನ್ನುವುದನ್ನು ತಾವು ಪ್ರಕಟ ಮಾಡಿದರೆ ನಮಗೂ ಒಂದು ಕಾನ್ಷಿಯಸ್ ಬರುತ್ತದೆ. ಈ ವಿಚಾರವಾಗಿ ಏನು ನಡೆಯುತ್ತಿದೆ, ಅವನು ಯಾವ ಕಂಡೀಷನ್ಸ್ ಹಾಕಿದ್ದ, ವಿಚಾರ ಏನು ಎನ್ನುವುದು ತಿಳಿಯುತ್ತದೆ. ಆದುದರಿಂದ ಆ ಕ್ಯಾಸೆಟ್ಟುಗಳ ಬಗ್ಗೆ ಸರ್ಕಾರ ಏನಾದರೂ ಒಂದು ನಿರ್ದಿಷ್ಟವಾದಂತಹ ನಿಲುವು ತೆಗೆದುಕೊಳ್ಳುವಂತಹ ಅವಶ್ಯಕತೆ ಇದೆ. ನಮಗೆಲ್ಲಾ ಗುರುತಾದರೆ ಅದರ ಬಗ್ಗೆ ನಾವು ಸಹ ಹೆಚ್ಚಿನ ಒಂದು ಚಿಂತನೆ ಮಾಡುವಂತಹ ಅವಶ್ಯಕತೆ ಇದೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮತ್ತು ಇಲ್ಲಿ ಬಹಳ ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಪಾತ್ರದ ಬಗ್ಗೆ ಹೇಳಿದ್ದಾರೆ. ಆ ಕಡೆ ತಮಿಳುನಾಡು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ಎರಡು ರಾಜ್ಯ ಸರ್ಕಾರಗಳು ಕಾರ್ಯಾಚರಣೆಗೆ ಒಪ್ಪಿಕೊಂಡಿದ್ದಾರೆ. ನಾನು ಆಗಲೇ ಹೇಳಿದ ಪ್ರಕಾರ ಮೊದಲು ವೀರಪ್ಪನ್ ಆ ಜಾಗದಲ್ಲಿ ಇದ್ದಾನೆಯೇ ಎಂದು ನೋಡಿಕೊಳ್ಳಿ. ನಂತರ ಕಾರ್ಯಾಚರಣೆ ಮಾಡಿ ಎನ್ನುವುದು ನನ್ನ ಮೊದಲನೆಯ ಡಿಮ್ಯಾಂಡ್ ಮತ್ತು ಇದಕ್ಕೆ ಕೇಂದ್ರ ಸರ್ಕಾರದ ನೆರವನ್ನು ತೆಗೆದುಕೊಳ್ಳಲೇಬೇಕು ನಾವು ಹಿಂದಿನ ಹತ್ತು ವರ್ಷಗಳ ಹಿಸ್ಟರಿ ನೋಡಿದರೆ ಈಗ ನಮ್ಮ ಕರ್ನಾಟಕದ ಜ್ಯೂರಿಸ್‌ಡಿಕ್ಷನ್‌ನಲ್ಲಿ ವೀರಪ್ಪನ್ ಇದ್ದಾನೆಂದು ನಮ್ಮ ಪೊಲೀಸ್ ವರ್ಗ, ನಮ್ಮ ಎಸ್‌ಟಿಎಫ್ ಕಾರ್ಯಾಚರಣೆಗೆ ಹೋಗಿ ಅಟ್ಯಾಕ್ ಮಾಡಿದಾಗ, ಅವು ತಮಿಳುನಾಡು ಕಡೆ ಹೋಗಿದ್ದು ನೋಡಿದ್ದೇವೆ. ತಮಿಳುನಾಡು ಸರ್ಕಾರದವರ ಕೋ-ಆಪರೇಷನ್ ಇಲ್ಲದಾಗ ಬಹಳಷ್ಟು ಬಾರಿ ವೀರಪ್ಪನ್ ತಪ್ಪಿಸಿಕೊಂಡು ಹೋಗಿರುವುದನ್ನು ನೋಡಿದ್ದೇವೆ. ಅದಕ್ಕೆ ಈ ರೀತಿ ಪುನರಾವರ್ತನೆಯಾಗಬಾರದು. ಅವರು ಇವರ ಮೇಲೆ, ಇವರು ಅವರ ಮೇಲೆ ಹಾಕುವ ಕೆಲಸವಾಗಬಾರದು. ಅದಕ್ಕೋಸ್ಕರ ಕೇಂದ್ರ ಸರ್ಕಾರದ ನೆರವು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಇದನ್ನು ಕಾನೂನಿನ ಚೌಕಟ್ಟಿನ ಪ್ರಕಾರ ವಿಚಾರ ಮಾಡೋಣ. ನನ್ನ ಸಲಹೆ ಏನೆಂದರೆ ಎಂಟೈರ್ ಫಾರೆಸ್ಟ್ ಏನಿದೆ ಅದನ್ನು ಡಿಸ್ಟರ್ಬ್ ಏರಿಯಾ ಎಂದು ಡಿಕ್ಲೇರ್ ಮಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಕಾರ್ಯಾಚರಣೆ ಮಾಡಿ

ಅಲ್ಲಿ ವೀರಪ್ಪನ್‌ಅನ್ನು ಅರೆಸ್ಟ್ ಮಾಡಬೇಕೆಂದು ಒಂದು ಪ್ರಪ್ರೋಸಲ್ ಇದೆ. ಅದನ್ನು ದಯವಿಟ್ಟು ಕನ್ಸಿಡರೇಷನ್ ಮಾಡಿ. ಅದನ್ನು ಡಿಸ್ಟರ್ಬ್ಡ್ ಏರಿಯಾ ಎಂದು ಮಾಡಿ ಕೇಂದ್ರ ಸರ್ಕಾರದ ವಶಕ್ಕೆ ಕೊಟ್ಟರೆ ಒಳ್ಳೆಯದಾಗಿತ್ತದೆ. ಆದುದರಿಂದ ಈ ದಿಸೆಯಲ್ಲಿ ಚಿಂತನೆಯಾಗಬೇಕಾಗಿದೆ. ಇವತ್ತು ನಮ್ಮ ಮುಖ್ಯ ಗುರಿ ವೀರಪ್ಪನ್ ಅರೆಸ್ಟ್ ಮಾಡುವುದಾಗಿದೆ. ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡರೂ ಅದಕ್ಕೆ ಎಲ್ಲರ ಸಹಕಾರ ಬೇಕಾಗುತ್ತದೆ. ಆ ದಿಸೆಯಲ್ಲಿ ಚಿಂತನೆಯಾಗಲಿ ಎಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯಲ್ಲಿ, ಮಾನ್ಯ ಪ್ರಧಾನ ಮಂತ್ರಿಯವರಿಗೆ ಹತ್ತನೆ ತಿಂಗಳಲ್ಲಿ ಪತ್ರ ಬರೆದಿದ್ದು, ಅದಕ್ಕೆ ಪ್ರಧಾನಿಯವರು ಉತ್ತರ ಕೊಟ್ಟಿದ್ದನ್ನೆಲ್ಲಾ ಹೇಳಿದರು. ಹಾಗೂ ಗೃಹಮಂತ್ರಿಗಳಾದಂತಹ ಅಡ್ವಾಣಿಯವರು ಕೇಂದ್ರದ ನೆರವು ಕೊಡುವುದಕ್ಕೆ ತಯಾರಿದ್ದಾರೆಂದು ಸಹ ಹೇಳಿದರು. ಹಾಗೂ ಕೇಂದ್ರ ಸರ್ಕಾರದ ಸಹಕಾರದ ಬಗ್ಗೆ ಒಳ್ಳೆಯ ಮಾತುಗಳನ್ನು ಸಹ ಹೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಹಂತದಲ್ಲೂ ಕೂಡ ವಿರೋಧ ಪಕ್ಷದವರೆಲ್ಲರನ್ನು ಕರೆದು ಈ ಸಮಸ್ಯೆ ಕೇವಲ ಸರ್ಕಾರದ ಸಮಸ್ಯೆ ಅಲ್ಲ, ಇಡೀ ಕರ್ನಾಟಕದ ಕ್ರೈಸಿಸ್ ಸಮಸ್ಯೆ ಎನ್ನುವ ರೀತಿಯಲ್ಲಿ ಎಲ್ಲಾ ಪ್ರತಿಪಕ್ಷದವರ ವಿಶ್ವಾಸತೆಗೆದುಕೊಂಡು ನಮ್ಮ ಸಲಹೆ ಸೂಚನೆಗಳನ್ನು ಕೇಳಿ ಮಾಡಿದಂತಹ ನಡವಳಿಕೆ ಏನಿದೆ ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಖ್ಯವಾಗಿ ನಮಗೆ ಇಲ್ಲಿ ಬೇಕಾಗಿರುವುದು ಕರ್ನಾಟಕ ಅಥವಾ ಬೆಂಗಳೂರು ಕ್ರೈಮ್ ಸ್ಟೇಟ್ ಅಥವಾ ಸಿಟಿ ಆಗಬಾರದು. ಅದು ನಮ್ಮ ಕಾಳಜಿ. ಈಗಾಗಲೇ ಸಾಕಷ್ಟು ಅವಾಂತರ ನಡೆಯುತ್ತಿದೆ. ಚರ್ಚ್‌ಗಳಲ್ಲಿ ಬಾಂಬ್ ಬ್ಲಾಸ್ಟ್, ನಗರದಲ್ಲಿ ಮರ್ಡರ್, ಬೇರೆ ಬೇರೆ ಕ್ರೈಮ್ ಮತ್ತು ದರೋಡೆ, ಉಗ್ರಗಾಮಿಗಳ ಚಟುವಟಿಕೆ ನಡೆಯುವುದು ಇದೆಲ್ಲಾದಕ್ಕೆ ಸೆಂಟರ್ ಆಗಬಾರದು. ಆದುದರಿಂದ ಇದನ್ನೆಲ್ಲಾ ಅವಾಯ್ಡ್ ಮಾಡುವುದಕ್ಕೆ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುತ್ತದೆ? ಇಲ್ಲದೇ ಇದ್ದರೆ, ಇದನ್ನು ಹೀಗೆ ಬಿಟ್ಟರೆ, ವೀರಪ್ಪನ್ ಅನ್ನು ಉಗ್ರಗಾಮಿಗಳನ್ನು ನಿಗ್ರಹಿಸದಿದ್ದರೆ, ನಮ್ಮ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವುದಕ್ಕೆ ಸಾಧ್ಯವಿಲ್ಲ. ಇದರಿಂದ ರಾಜ್ಯ ಸರ್ಕಾರಕ್ಕೆ ಆದುದರಿಂದ ಇದರ ಬಗ್ಗೆ ಸಂಪೂರ್ಣವಾದ ಕಾಳಜಿ ಮತ್ತು ಎಚ್ಚರಿಕೆಯನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ನಾನು ಈ ಒಂದು ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಎರಡು ಬೇಡಿಕೆಗಳನ್ನು ಇಡುತ್ತಿದ್ದೇನೆ. ಈಗಾಗಲೇ ಲೇಟಾಗಿದೆ. ತಕ್ಷಣ ವೀರಪ್ಪನ್ ಅನ್ನು ಅರೆಸ್ಟ್ ಮಾಡುವುದಕ್ಕೆ ಯಾವಾಗ ಕಾರ್ಯಾಚರಣೆ ಮಾಡಬೇಕು ಹಾಗೂ ಕೇಂದ್ರದ ನೆರವು ತೆಗೆದುಕೊಂಡು ಕಾರ್ಯಾಚರಣೆ ಮಾಡಿ ಅವನನ್ನು ಬಂಧಿಸಬೇಕು ಮತ್ತು ಆತನಿಗೆ ಶಿಕ್ಷೆ ವಿಧಿಸಬೇಕು. ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಕೆಲವೊಂದು ಕಾರ್ನರ್‌ಗಳಲ್ಲಿ ಡಿಸ್ಕಷನ್ ನಡೆಯುತ್ತಿದೆ. ಅದೇನೆಂದರೆ ವೀರಪ್ಪನ್‌ಗೆ ಕ್ಷಮಾದಾನ ಕೊಡಬೇಕು ಎನ್ನುವ ಮಾತು ಕೇಳಿ ಬರುತ್ತಿದೆ. ಇದು ಬಹಳ ದೊಡ್ಡ ತಪ್ಪು. ಯಾರು ನೂರಾರು

ಜನರನ್ನು ಕೊಂದಿದ್ದಾನೆ, ಸಾವಿರಾರು ಆನೆಗಳನ್ನು ಕೊಂದಿದ್ದಾನೆ, ಗಂಧದ ಮರಗಳನ್ನು ಕಡಿದು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಲುಕ್ಸಾನು ಮಾಡಿದ್ದಾನೆ, ಆ ವೀರಪ್ಪನ್‌ಗೆ ಕ್ಷಮಾದಾನ ಮಾಡುವುದು ಎಂದೂ ಸಾಧ್ಯವಿಲ್ಲ. ಆದರ ಬಗ್ಗೆ ವಿಚಾರ ಮಾಡಬಾರದು. ಆದುದರಿಂದ ಈ ಕ್ಷಮಾದಾನ ಎನ್ನುವುದು ಯಾವುದೇ ಕಾರ್ನರ್‌ನಲ್ಲಿ ಚರ್ಚೆಗೂ ಬರಬಾರದು. ಆದುದರಿಂದ ಮೊದಲನೆ ಆದ್ಯತೆಯಲ್ಲಿ ವೀರಪ್ಪನ್‌ನನ್ನು ಯಾವುದೇ ಬೆಲೆ ತೆತ್ತಾದರೂ ಯಾವುದೇ ಫೋರ್ಸ್ ಉಪಯೋಗ ಮಾಡಿ, ಯಾವುದೇ ಟ್ಯಾಕ್ಟಿಕ್ಸ್ ಉಪಯೋಗ ಮಾಡಿ ಕೇಂದ್ರದ ನೆರವು ತೆಗೆದುಕೊಂಡು ವೀರಪ್ಪನ್‌ನನ್ನು ಅರೆಸ್ಟ್ ಮಾಡಬೇಕು. ತಕ್ಷಣ ಕಾರ್ಯಾಚರಣೆ ಪ್ರಾರಂಭ ಮಾಡಬೇಕು. ಇನ್ನೊಂದು ನಾನು ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡುವಂಥಾದ್ದು ಏನೆಂದರೆ ಈಗಾಗಲೇ ಉಗ್ರಗಾಮಿಗಳ ಚಟುವಟಿಕೆಗಳು ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಬರುತ್ತಿವೆ. ಅವರ ನೆಲೆ ಇಲ್ಲಿ ಕಾಣುತ್ತಿವೆ, ನಾವು ಬಹಳ ಚಿಂತನೆ ಮಾಡುವಂಥಾದ್ದು, ಈ ಬೆಂಗಳೂರು ನಗರ ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ. ಇದು ಕನ್ನಡ ಭಾಷಿಕರ ರಾಜಧಾನಿ ಬೆಂಗಳೂರು ಆಗಿದೆ, ಇಲ್ಲಿ ಕನ್ನಡಿಗರ ಸಂಖ್ಯೆ ಶೇ. 35ರಷ್ಟು ಮಾತ್ರ ಇದೆ. ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕು. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದನ್ನು ಚಿಂತನೆ ಮಾಡಬೇಕು. ಅದೇ ರೀತಿ ಬೆಂಗಳೂರು ಕ್ರೈಮ್ ಸಿಟಿಯಾಗಬಾರದು, ಉಗ್ರಗಾಮಿಗಳ ನೆಲೆಯಾಗಬಾರದು. ಇವತ್ತು ಡಾ: ರಾಜ್‌ಕುಮಾರ್‌ರವರನ್ನು ಉಪಾಯದಿಂದಾಗಲಿ, ಅಥವಾ ಬೇರೆ ಮಾರ್ಗದಲ್ಲಿ ಯಾರು ಬಿಡಿಸಿಕೊಂಡು ಬಂದರು, ಅವರ ಹಿನ್ನಲೆಗಳು, ಮತ್ತೆ ಎಲ್ಲೆಲ್ಲಿ ಲ್ಯಾಪ್ಸ್ ಆಗಿದೆ, ಎಲ್ಲೆಲ್ಲಿ ಏನೇನು ನಡೆಯಿತು, ಇದರ ಹಿನ್ನೆಲೆಯಲ್ಲಿ ಇವತ್ತು ರಾಜ್ಯ ಸರ್ಕಾರ, ಹೈಕೋರ್ಟ್ ಜಡ್ಜ್ ಇರಲಿ, ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಇರಲಿ, ಅವರಿಂದ ತೀವ್ರವಾದ ಇನ್‌ವೆಸ್ಟಿಗೇಷನ್ ಆಗುವ ರೀತಿಯಲ್ಲಿ ನ್ಯಾಯಾಂಗ ವಿಚಾರಣೆಗೆ ಆಯೋಗವನ್ನು ನೇಮಿಸಬೇಕು. ಇದರಿಂದ ಸ್ಟಡಿ ಮಾಡಿದಾಗ ಏನಾದರೂ ಪರಿಹಾರ ಸಿಗುವುದಕ್ಕೆ ಸಾಧ್ಯವಿದೆ, ಇಲ್ಲದಿದ್ದರೆ ಇಂತಹ ಘಟನೆಗಳು ಪುನರಾವರ್ತನೆಯಾಗಿ ನಡೆಯುತ್ತಿರುತ್ತವೆ. ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ ಲಾ-ಅಂಡ್-ಆರ್ಡರ್ ಪ್ರಾಬ್ಲಂ ಆಗುವಂಥಾದ್ದು ಆಗುತ್ತದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಈ ಕಾರ್ಯಾಚರಣೆಯನ್ನು ಮೊದಲು ಮಾಡಲಿ. ಇದರ ಜೊತೆಗೆ ಇವತ್ತು ಏನೇನು ಲ್ಯಾಪ್ಸ್ ಆಗಿದೆ, ಈಗ ಸುಪ್ರೀಂ ಕೋರ್ಟ್‌ನ ಅಬ್ಸರ್ವೇಷನ್ ನೋಡಿದ್ದೇವೆ, ಹಿಂದೆ ಹತ್ತು ವರ್ಷಗಳಿಂದ ಸರ್ಕಾರಗಳು ಇದರ ಬಗ್ಗೆ ಏನು ಅಬ್ಸರ್ವೇಷನ್ ಮಾಡಿವೆ, ವೈಫಲ್ಯತೆ ಏನು ಇದೆ ಅದನ್ನು ನೋಡಿದ್ದೇವೆ. ಇನ್ನು ಒಂದೆರಡು ವರ್ಷಗಳನ್ನು ಬಿಟ್ಟು ಮತ್ತೆ ಯಾವುದೇ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿ ಅಬ್ಸರ್ವೇಷನ್ಸ್ ಮಾಡುವಂಥಾದ್ದು, ರಿಪಿಟೇಷನ್ ಆಗಬಾರದು. ಅದಕ್ಕಾಗಿ ನಾನು ಇವತ್ತು ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ತಾವು ತಕ್ಷಣವೇ ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿ. ಇನ್ನು ಎರಡನೆಯದಾಗಿ, ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ

ಉಗ್ರಗಾಮಿಗಳ ಚಟುವಟಿಕೆಗಳ ಬಗ್ಗೆ, ಈ ಬೆಂಗಳೂರು ಕ್ರೈಮ್ ಸಿಟಿಯಾಗುವಂಥಾದ್ದನ್ನು ತಡೆಯುವಂಥಾದಕ್ಕೆ, ಇದರ ಹಿನ್ನೆಲೆಯಲ್ಲಿರುವಂತಹ ಲ್ಯಾಪ್ಸಸ್ ಏನು ಇದೆ, ಇದಕ್ಕೆ ಎನ್‌ಕರೇಜ್‌ಮೆಂಟ್‌ಗೆ ಅವಕಾಶ ಕೊಟ್ಟಂತಹ ವ್ಯಕ್ತಿಗಳು, ಇನ್‌ವಾಲ್ವ್‌ಮೆಂಟ್, ಇದೆಲ್ಲವನ್ನು ವರದಿ ತೆಗೆದುಕೊಳ್ಳುವುದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ನೇಮಕ ಮಾಡಬೇಕು. ತಾವು ಜ್ಯುಡಿಷಿಯಲ್ ಎನ್‌ಕ್ವೈರಿಯ ಸಲುವಾಗಿ ಆರ್ಡರ್ ಮಾಡಬೇಕು. ನಿರ್ಣಯ ಕೈಗೊಳ್ಳಬೇಕು ಎಂದು ಒತ್ತಾಯ ಮಾಡುತ್ತೇನೆ. ಈ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮತ್ತು ಈ ಎಲ್ಲಾ ವಿಷಯಗಳ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಿ ಕ್ರಮ ಕೈಕೊಳ್ಳಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೆ, ನಾನು ಈ ಚರ್ಚೆಯಲ್ಲಿ ಭಾಗವಹಿಸಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮತ್ತು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ರಾಜ್ಯದಲ್ಲಿ ಡಾ: ರಾಜ್‌ಕುಮಾರ್‌ರವರ ಅಪಹರಣದ ಹಿನ್ನಲೆಯಲ್ಲಿ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮತ್ತೆ ಆಡಳಿತದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿದೆಯೆಂಬ ಬಗ್ಗೆ ಕೆಲವು ವಿಚಾರಗಳನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ರೀತಿ ವೀರಪ್ಪನ್ ಬಹುಶಃ ನಮ್ಮ ಇಂಡಿಯಾ ದೇಶದ ಪ್ರಧಾನಮಂತ್ರಿಯವರ ಹೆಸರು ಸಹ ಅಷ್ಟು ಕೀರ್ತಿಯಾಗಲಿಲ್ಲವೋ ಏನೋ, ಅಷ್ಟೊಂದು ಚಿರಪರಿಚಿತವಾಗಲಿಲ್ಲವೋ ಏನೋ, ಆ ರೀತಿಯಲ್ಲಿ ಹೆಸರುವಾಸಿಯಾಗಿದ್ದಾನೆ. ಇವನು ಸಣ್ಣ ಮಗುವಿನಿಂದ ಕುಖ್ಯಾತ ವೀರಪ್ಪನ್, ದಂತಚೋರ ವೀರಪ್ಪನ್ ನರಹಂತಕ ವೀರಪ್ಪನ್ ಎಂದು ಮನೆ ಮನೆಯ ಮಾತು ಆಗಿರುವಂಥಾದ್ದು ಆಗಿದೆ. ಇಂತಹ ವ್ಯಕ್ತಿಯನ್ನು ಸುಮಾರು ವರ್ಷಗಳಿಂದ ಯಾವುದೇ ಸರ್ಕಾರಗಳು ಹಿಡಿಯದೇ ಅವನು ಇಷ್ಟೊಂದು ಬೃಹದಾಕಾರವಾಗಿ ಬೆಳೆಯುವಂಥಾದ್ದಕ್ಕೆ ನಾವೆಲ್ಲರೂ ಕಾರಣಕರ್ತರು, ಇದರ ಬಗ್ಗೆ ನಾವೆಲ್ಲರೂ ನಾಚಿಕೆ ಪಡುವಂಥ ವಿಚಾರವೂ ಆಗಿದೆ, ಎಂದು ಹೇಳುತ್ತೇನೆ. ಈ ವೀರಪ್ಪನ್ ಸಾಧಾರಣ ಮನುಷ್ಯನಲ್ಲ, ತನ್ನ 10ನೇ ವಯಸ್ಸಿನಲ್ಲೇ ಒಂದು ಆನೆಯನ್ನು ಕೊಂದಿದ್ದಾನೆಂದರೆ ಬಾಲ್ಯಾವಸ್ಥೆಯಲ್ಲಿಯೇ ಅವನ ಗುಣಗಳು ಎದ್ದು ಕಾಣುತಿತ್ತು. ಇದನ್ನು ನಾವು ಓದಿದ್ದೇವೆ, ಈ ಚಿಕ್ಕ ವಯಸ್ಸಿನಲ್ಲೆ ಅರಣ್ಯವನ್ನು ಪ್ರವೇಶ ಮಾಡಿ ಆನೆಗಳನ್ನು ಕೊಲ್ಲುವಂಥಾದ್ದು, ದಂತಗಳನ್ನು ಕಳವು ಮಾಡುವುದು, ಗಂಧದ ಮರಗಳನ್ನು ಕದ್ದು ಬೇರೆ ಬೇರೆ ರಾಜ್ಯಗಳಿಗೆ, ದೇಶಗಳಿಗೆ ಮಾರಾಟ ಮಾಡುವಂತಹ ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿ ಹೋಗಿದ್ದಾನೆ. ಇವನ ವ್ಯಾಪ್ತಿ ಸುಮಾರು ಕರ್ನಾಟಕ ರಾಜ್ಯ, ತಮಿಳುನಾಡು, ಮತ್ತು ಕೇರಳದ ಸ್ವಲ್ಪ ಭಾಗ ಬರುತ್ತದೆ, ಸುಮಾರು ಆರು ಸಾವಿರ ಚದರ ಕಿ.ಮೀ. ದೂರದವರೆಗೂ ಇವನು ಅಧಿಪತಿಯಾಗಿರುತ್ತಾನೆ. ಇದುವರೆಗೂ 113 ಜನರನ್ನು ಕೊಂದಿದ್ದಾನೆ, ಅದರಲ್ಲಿ 30-31

ಪೊಲೀಸ್ ಅಧಿಕಾರಿಗಳು, ಸುಮಾರು ಎರಡು ಸಾವಿರ ಆನೆಗಳನ್ನು ಕೊಂದಿದ್ದಾನೆ, ಸುಮಾರು ನಲವತ್ತು ಸಾವಿರ ಕೆ.ಜಿ. ಆನೆ ದಂತಗಳನ್ನು ಮಾರಿದ್ದಾನೆ, ಸುಮಾರು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆಯ ಗಂಧದ ಮರಗಳನ್ನು ಮಾರಿರುವಂಥಾದನ್ನು ನೋಡಿದ್ದೇವೆ. ನಮ್ಮ ರಾಜ್ಯದಲ್ಲಿ ಇವ ಚಟುವಟಿಕೆಗಳು ಬಹಳ ತಳಮಳವನ್ನು ಮೂಡಿಸಿರುವಂಥಾದ್ದು ನಮಗೆಲ್ಲರಿಗೂ ಗೊತ್ತಿದೆ. 1989 ರಿಂದ 1993ರವರೆಗೆ ಇಷ್ಟು ವರ್ಷಗಳೊಳಗೆ ಒಬ್ಬ ಪೋಲೀಸ್ ಸೂಪರಿಂಟೆಂಡೆಂಟರವರನ್ನು ಒಬ್ಬ ಡಿ.ಸಿ.ಎಫ್, (ಡೆಪ್ಯೂಟಿ ಕನ್‌ಸರ್ವೇಟಿವ್ ಆಫ್ ಫಾರೆಸ್ಟ್ ಅವರನ್ನು ಕೊಂದಿದ್ದು, ಅವರ ತಲೆ ಸಿಕ್ಕಿಲ್ಲ, ಮುಂಡ ಮಾತ್ರ ಸಿಕ್ಕಿದೆ. ಇವರು ವೀರಪ್ಪನ್ ತಮ್ಮನಾದ ಅರ್ಜುನ್‌ನನ್ನು ಅರೆಸ್ಟ್ ಮಾಡಿದರು. 1985 ರಲ್ಲಿ ಬೆಂಗಳೂರಿನಲ್ಲಿ ಸಾರ್ಕ್ ಸಮ್ಮೇಳನ ನಡೆಯಿತು. ಆಗ ವೀರಪ್ಪನ್ ಆಯುಧಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರ ಬಂದಾಗ ಇವನ್ನು ಸಿಕ್ಕಿದ್ದಾನೆ. ಆಗ ಮಾನ್ಯ ರಾಚಯ್ಯನವರು ಗೃಹ ಮಂತ್ರಿಗಳಾಗಿದ್ದರು. ಅವನನ್ನು ಹಿಡಿದಾಗ ನಾನು ಕಳ್ಳತನ ಮಾಡುವುದಕ್ಕೆ ಬಂದಿಲ್ಲ, ನಾನು ದಂತಚೋರ, ಕಾಡಿನಲ್ಲಿ ಗಂಧದ ಮರಗಳನ್ನು ಕಡಿದು ಮಾರುತ್ತೇನೆಂದು ಒಪ್ಪಿಕೊಳ್ಳುತ್ತಾನೆ. ಆಗ ನಮ್ಮ ಅಂದಿನ ಸರ್ಕಾರ ಇವನನ್ನು ಫಾರೆಸ್ಟ್ ಗೆಸ್ಟ್ ಹೌಸ್‌ನಲ್ಲಿ ಬಂಧಿಸಿಟ್ಟಿತ್ತು. ಅವನು ಅಲ್ಲಿಂದ ಹೇಗೆ ತಪ್ಪಿಸಿಕೊಂಡು ಹೋದನೋ ಗೊತ್ತಿಲ್ಲ. ನಮ್ಮ ಪೋಲೀಸ್ ಅಧಿಕಾರಿಗಳು ಅವನು ತಪ್ಪಿಸಿಕೊಂಡು ಹೋಗಿದ್ದಾನೆಂದು ಹೇಳುತ್ತಾರೆ. ಆದರೆ ಅರ್ಜುನ್ ಅಧಿಕಾರಿಗಳಿಗೆ ಹಣವನ್ನು ಕೊಟ್ಟು ಬಿಡಿಸಿಕೊಂಡು ಬಂದಿದ್ದಾನೆಂದು ಹೇಳಿಕೆ ಕೊಟ್ಟಿದ್ದಾನೆ. ಆ ಸಂದರ್ಭದಲ್ಲಿ ಶ್ರೀ ಶ್ರೀನಿವಾಸ್ ಎನ್ನುವವರು ಆ ಪ್ರದೇಶದ ಡಿ.ಎಫ್. ಆಗಿದ್ದರು. ಅವರಿಂದ ಈ ಹೇಳಿಕೆ ಬಂದಾಗ, ನನ್ನ ಮೇಲೆ ಅಪಪ್ರಚಾರವಾಗುತ್ತಿದೆ, ನಾನು ಇದನ್ನು ಪ್ರೂವ್ ಮಾಡಬೇಕೆಂದು ಎಸ್.ಟಿ.ಎಫ್. ನೇಮಕ ಮಾಡಿಸಿಕೊಂಡು ಈ ಒಂದು ಅಪಾದನೆ ಏನು ಬಂದಿದೆ, ಅದನ್ನು ತೆಗೆದುಹಾಕಬೇಕೆಂದು ಎಸ್.ಟಿ.ಎಫ್.ಗೆ ಅಧಿಕಾರಿಯಾಗಿ ಬಂದರು. ಆಗ ಅರ್ಜುನನ್, ನಮ್ಮ ಅಣ್ಣನನ್ನು ನೀವು ಬಿಡುವುದಾದರೆ, ನಿಮ್ಮನ್ನು ಭೇಟಿ ಮಾಡಬೇಕೆಂದು ಅವನು ಇಷ್ಟಪಡುತ್ತಾನೆಂದು ನಂಬಿಸಿ, ಇವರ ಮನ ಒಲಿಸಿ ಶಿರಚ್ಛೇದ ಮಾಡಿದ್ದಾನೆಂದು ಕತೆ ಇದೆ. ಇದಾದ ಮೇಲೆ ಒಬ್ಬ ಶಕೀಲ್ ಅಹಮದ್ ಎಂದು ಎಸ್.ಐ. ಅವರನ್ನು ಮತ್ತು ಅನೇಕ ಪೊಲೀಸ್ ಪೇದೆಗಳನ್ನು ಕೊಂದು ತಳಮಳವನ್ನು ಮೂಡಿಸಿರುವಂತಹ ವ್ಯಕ್ತಿಯಾಗಿದ್ದಾನೆ. ಮಾನ್ಯ ಮುಖ್ಯಮಂತ್ರಿಯವರ ಬಳಿ ನಮ್ಮ ಒಂದು ಬೇಡಿಕೆಯನ್ನಿಡುವಾಗ, ನಿಮ್ಮ ಸರ್ಕಾರದಿಂದ 1997ರಲ್ಲಿ ಏನು ಮಾಡಿದ್ದೀರಿ, ಅದನ್ನು ಸೇರಿಸಿಕೊಂಡು ಮಾತನಾಡಬೇಕಾಗುತ್ತದೆಂದು ಹೇಳಿದರು. ನಮ್ಮ ಸರ್ಕಾರವಿದ್ದಾಗ ವೀರಪ್ಪನ್‌ಗೆ ಯಾವುದೇ ವಿಧವಾದಂತಹ ಆಶ್ವಾಸನೆಗಳನ್ನು ಕೊಟ್ಟಿರಲಿಲ್ಲ, ಯಾವುದೇ ಒಂದು ಷರತ್ತುಗಳನ್ನು ಒಪ್ಪಿಕೊಂಡಿರಲಿಲ್ಲ. 1997ರಲ್ಲಿ ಶ್ರೀ ಕೃಪಾಕರ್ ಮತ್ತು ಸೇನಾನಿ ಎಂಬ ಛಾಯಾಚಿತ್ರಕಾರರು ಕಾಡಿನಲ್ಲಿ ದೃಶ್ಯಗಳನ್ನು ತೆಗೆಯಬೇಕೆಂಬ ಉದ್ದೇಶದಿಂದ

3.50 ಪಿ.ಎಂ.

ಹೋದರು. ಆದರೆ ಅವರನ್ನು ವೀರಪ್ಪನ್ ಒತ್ತೆಯಾಳುಗಳಾಗಿ ಹಿಡಿದಿಟ್ಟುಕೊಳ್ಳುತ್ತಾನೆ. ಇದು 1997ರ ನಮ್ಮ ಕಾಲದಲ್ಲಾಗಿದೆ. ಅವರನ್ನು 8-10 ದಿವಸಗಳ ಕಾಲ ಇಟ್ಟುಕೊಂಡು ಇವರಿಂದ ಏನು ಉಪಯೋಗವಾಗುವುದಿಲ್ಲವೆಂದು ತಿಳಿದು ವೀರಪ್ಪನ್ ಮತ್ತೆ ಬಿಡುಗಡೆ ಮಾಡುತ್ತಾನೆ. ಆ ಸಂದರ್ಭದಲ್ಲಿ ವೀರಪ್ಪನ್ ಯಾವುದೇ ಷರತ್ತನ್ನು ನಮ್ಮ ಸರ್ಕಾರಕ್ಕೆ ಹಾಕಿರುವುದಿಲ್ಲ, ಕೃಪಾಕರ್ ಹಾಗೂ ಸೇನಾನಿಯನ್ನು ವೀರಪ್ಪನ್ ತಾನೇ ಇಟ್ಟುಕೊಂಡು, ತಾನೇ ಬಿಡುಗಡೆ ಮಾಡಿರುತ್ತಾನೆ. ಅದರಲ್ಲಿ ನಾವೇನು ಅಪರಾಧ ಮಾಡಿಲ್ಲ, ನಾವೇನಾದರೂ ಮಾಡಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ತರಬಹುದು. 1997 ರಲ್ಲಿ ತಮಿಳುನಾಡಿನಲ್ಲಿ ಅಂದಿನ ತಮಿಳುನಾಡಿನ ಮುಖ್ಯಮಂತ್ರಿ ಹಾಗೂ ನಮ್ಮ ಕರ್ನಾಟಕದ ಮುಖ್ಯಮಂತ್ರಿ ಪಟೇಲ್‌ರವರ ನಡುವೆ ಚರ್ಚೆಯಾದದ್ದು ನಿಜ, ಚರ್ಚೆಯಾಗಿ ಕೆಲವು ಒಪ್ಪಂದಗಳನ್ನು ಮಾಡಿಕೊಳ್ಳುತ್ತಾರೆ. ಅದೇನೆಂದರೆ, ``As per the understanding it was stated that in the event of Veerappan surrendering himself to the state authorities, in such an event, the Statte Government will take action on the issues related to above. One of the points in the letteer of exchange was, TADA detenues will be reviewed. Accordingly, government did constitute a High Level Committee which after review recommended that since the charge sheets have been filed, the question of unconditional release is not warranted and accordingly the approval of the chief minister's reply was sent" ಅವತ್ತು ಕೂಡ ನಮ್ಮ ಮುಖ್ಯಮಂತ್ರಿಗಳು ಈ ಟಾಡಾ ಬಂಧಿಗಳ ಬಿಡುಗಡೆಗೆ ಒಪ್ಪಿಕೊಂಡಿಲ್ಲ. ಅವತ್ತು ಏನು ಹೇಳಿದ್ದಾರೆಂದರೆ, ನಾವು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತೇವೆ, ಚಾರ್ಜ್‌ಶೀಟ್ ಅನ್ನು ಆಗಲೇ ಫೈಲ್ ಮಾಡಿರುವುದರಿಂದ ಈ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ ಎನ್ನುವ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಅದೇ ರೀತಿ ಪತ್ರವನ್ನು ಬರೆಯುತ್ತಾರೆ. ಇಲ್ಲದಿದ್ದರೆ ಅವತ್ತೇ, ನಾವು ಟಾಡಾ ಬಂಧಿಗಳ ಬಿಡುಗಡೆಗೆ ಒಪ್ಪಿಕೊಂಡಿದ್ದೇವೆಂದು ಅವರು ಹೇಳಬಹುದಿತ್ತು. ನಾವು ಯಾವುದೇ ಸಂದರ್ಭದಲ್ಲಿಯಾಗಲೀ ವೀರಪ್ಪನ್ ಜೊತೆಯಲ್ಲಿ ಬೇಡಿಕೆಯನ್ನು ಒಪ್ಪಿಕೊಳ್ಳುವುದಾಗಲೀ ಅಥವಾ ಸಂಧಾನವನ್ನಾಗಲೀ ಯಾವುತ್ತು ನಮ್ಮ ಸರ್ಕಾರ ಒಪ್ಪಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಈ ಸರ್ಕಾರ ಅಕ್ಟೋಬರ್ 1999ರಲ್ಲಿ ಅಧಿಕಾರಕ್ಕೆ ಬಂತು. ಆಗ ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು ಹೈಟೆಕ್ ಮುಖ್ಯಮಂತ್ರಿ ಎಂದು ಕರೆಯಿಸಿಕೊಂಡರು. ಈ ಆಧುನಿಕ ಉಪಕರಣಗಳಾದ ಗಣಕೀಕರಣ, ಎಲೆಕ್ಟ್ರಾನಿಕ್ ಗೌರ್ನೆನ್ಸ್ ಇತ್ಯಾದಿಗಳ ಸಹಾಯದಿಂದ ಆಧುನೀಕರಣವಾದ ಆಡಳಿತವನ್ನು ಮಾಡುತ್ತೇವೆಂದು ಹೇಳಿದರು. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳು ಚಾಮರಾಜನಗರ ಜಿಲ್ಲೆ ಮಹದೇಶ್ವರಬೆಟ್ಟದಲ್ಲಿ ಗಣಿಗಾರಿಕೆ ಗುತ್ತಿಗೆ ಕೊಡಬೇಕೋ ಬೇಡವೋ ಎನ್ನುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಡನೆ ಒಂದು ಚರ್ಚೆ ಮಾಡುತ್ತಾರೆ. ಆಗ ಏನು

ಹೇಳುತ್ತಾರೆಂದರೆ, ಕಾರ್ಯಪಡೆ ಮಜಾ ಉಡಾಯಿಸುತ್ತಿದ್ದಾರೆಯೇ ಏನು ಮಾಡುತ್ತಿದ್ದಾರೆ? ಸುಮಾರು 5 ಸಾವಿರ ಕಾರ್ಮಿಕರು ಇದನ್ನೇ ನಂಬಿಕೊಂಡಿದ್ದಾರೆ, ಕೆಲವರು ಕೆಲಸ ಹುಡುಕಿಕೊಂಡು ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳುವಾಗ ನಮ್ಮ ಎಸ್‌ಟಿಎಫ್ ಏನು ಕಾರ್ಯಾಚರಣೆ ಮಾಡುತ್ತಿದೆ, ಇದುವರೆಗೆ ವೀರಪ್ಪನ್ ಅನ್ನು ಏತಕ್ಕೆ ಹಿಡಿಯಲಿಲ್ಲ ಎಂದು ಎಸ್‌ಟಿಎಫ್ ಅನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ತರಬೇತಿಯನ್ನು ಪಡೆದ ಸಶಸ್ತ್ರಪಡೆಯ ಒಬ್ಬ ಪೊಲೀಸ್ ಅಧಿಕಾರಿ ಈ ನಮ್ಮ ಎಸ್‌ಟಿಎಫ್ ಕಾರ್ಯಪಡೆ ಕಾರ್ಯಾಚರಣೆಗೆ ಬೇಕೆಂದು ಕೇಂದ್ರಕ್ಕೆ ಪತ್ರ ಬರೆದು ಬೇಡಿಕೆಯನ್ನು ನಾವು ಇಟ್ಟಿದ್ದೆವು, ಅದರ ಪ್ರಕಾರ 1998ರ ಏಪ್ರಿಲ್‌ನಲ್ಲಿ ಅರಿಕೇಶ್ ಎಂಬುವವರನ್ನು ನಮ್ಮ ರಾಜ್ಯಕ್ಕೆ ಕಳುಹಿಸಿಕೊಡುತ್ತಾರೆ. ಅವರು ಸುಮಾರು ಎರಡೂವರೆ ವರ್ಷಗಳ ಕಾಲ ವೀರಪ್ಪನ್ ಗ್ಯಾಂಗ್ ಎಲ್ಲೆಲ್ಲಿ ಚಟುವಟಿಕೆ ಮಾಡುತ್ತಿದ್ದಾರೆ, ಅವರ ಗ್ಯಾಂಗ್ ಎಲ್ಲೆಲ್ಲಿ ಇದೆ, ಏನೇನು ಅಸ್ತ್ರಗಳನ್ನು ಇಟ್ಟುಕೊಂಡಿದ್ದಾರೆ, ಯಾವ ರೀತಿಯಾಗಿ ಕಾರ್ಯಾಚರಣೆ ಮಾಡುತ್ತಿದ್ದಾರೆನ್ನುವ ವಿವರವಾದ ಅಧ್ಯಯನ ಮಾಡಿ, ಅವನನ್ನು ಹಿಡಿಯತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ. ಅವರು ಒಂದು ವರದಿಯನ್ನು ಸಹ ಕೊಟ್ಟು ಏನು ಹೇಳುತ್ತಾರೆಂದರೆ, ಈ ವೀರಪ್ಪನ್ ಬಹಳ ಹುಷಾರಾದ ಮನುಷ್ಯ, ಈತನನ್ನು ಹಿಡಿಯಲು ಬಹಳ ತಂತ್ರಗಾರಿಕೆ ಬೇಕಾಗುತ್ತದೆ, ಗ್ಲೋಬಲ್ ಪೊಜಿಷನ್ ಸಿಸ್ಟಂ ಬಳಸಿಕೊಂಡು ಹಿಡಿಯಬಹುದೆಂದು ಅದರಲ್ಲಿ ಹೇಳುತ್ತಾರೆ. ನಾನೇನು ತಿಳಿದುಕೊಂಡಿದ್ದೆ, ಎಂದರೆ ಈ ನಮ್ಮ ಹೈಟೆಕ್ ಮುಖ್ಯಮಂತ್ರಿಗಳು ಗ್ಲೋಬಲ್ ಪೊಸಿಷನ್ ಸಿಸ್ಟಂ ಅನ್ನುಬಳಸಿಕೊಂಡು ವೀರಪ್ಪನ್ ಅನ್ನು ಹಿಡಿಯಬಹುದೆಂದು ತಿಳಿದುಕೊಂಡಿದ್ದೆ, ಆದರೆ ಅದೇನೂ ಆಗಲಿಲ್ಲ. ಅರಕೇಶ್ ವರದಿಯಲ್ಲಿ ಇನ್ನೊಂದು ಅಂಶವನ್ನು ಉಲ್ಲೇಖಿಸಿದ್ದಾರೆ. ಅದೇನೆಂದರೆ ಈ ವೀರಪ್ಪನ್ ಕೊಲೆ ಮಾಡುವುದನ್ನು ನಿಲ್ಲಿಸಿ ಕೆಲವು ಮುಖ್ಯ ಪ್ರತಿಷ್ಠಿತ ವ್ಯಕ್ತಿಗಳನ್ನು ಅಪಹರಣ ಮಾಡುವ ಸನ್ನಾಹದಲ್ಲಿದ್ದಾನೆ, ಇದರಿಂದ ರ್‍ಯಾನ್‌ಸಂ ಪಡೆಯುವುದು ಹಾಗೂ ಬ್ಲಾಕ್‌ಮೇಲ್ ಮಾಡುವ ಕೆಲಸಕ್ಕೆ ಮುಂದಾಗುತ್ತಾರೆನ್ನುವ ಮುನ್ಸೂಚನೆಯನ್ನು ಕೂಡ ಈಗಾಗಲೇ ಕೊಟ್ಟಿದ್ದಾರೆ, ಅದರಲ್ಲಿ "Among such persons the following are important:

Padmabhushan Dr. Rajkumar from his native village, Gajanur; Padmashri Dr. Sudarshan, Vivekananda Girijan Centre, BR Hills; Sri H.Nagappa, Ex-Minister, Kamagere; Sri G. Raju Gowda, sitting MLA and Sri Vatal Nagaraj" ಅರಕೇಶ್‌ರವರು ಆಗಲೇ ವರದಿಯನ್ನು ಕೊಟ್ಟು ವೀರಪ್ಪನ್ ಹಿಟ್‌ಲಿಸ್ಟ್‌ನಲ್ಲಿ ಈ ನಾಲ್ಕೈದು ಜನ ಇದ್ದಾರೆ, ಇವರಿಗೆ ಸರ್ಕಾರ ಸೂಕ್ತವಾದ ರಕ್ಷಣೆಯನ್ನು ಕೊಡಬೇಕು ಎಂದು ಹೇಳಿರುತ್ತಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ವರದಿಯನ್ನು ಕೊಟ್ಟಿರುತ್ತಾರೆ. ಡಾ: ರಾಜ್‌ಕುಮಾರ್‌ರವರನ್ನು ವೀರಪ್ಪನ್ ಯಾವತ್ತಾದರೂ ಅಪಹರಣ ಮಾಡಬಹುದೆನ್ನುವ ಉದ್ದೇಶದಿಂದ ನಮ್ಮ ಸರ್ಕಾರ ಆಗ ಪೊಲೀಸ್ ಇಲಾಖೆಯಿಂದ ಪದ್ಮಭೂಷಣ ಡಾ: ರಾಜ್‌ಕುಮಾರ್‌ರವರಿಗೆ ದಿನಾಂಕ 2-8-1999ರಲ್ಲಿ

ಪತ್ರವನ್ನು ಬರೆದು. ಈ ರೀತಿ ತಿಳಿಸಲಾಗಿರುತ್ತದೆ. ಡಾ: ರಾಜ್‌ಕುಮಾರ್ ಹಾಗೂ ಅವರ ಕುಟುಂಬ ವರ್ಗದವರಿಗೆ ಭದ್ರತಾ ವ್ಯವಸ್ಥೆಯನ್ನು ಮಾಡುವ ಕುರಿತು, ತಮಿಳುನಾಡು ವ್ಯಾಪ್ತಿಯಲ್ಲಿರುವ ಪೆರಿಯಾರ್, ಸತ್ಯಮಂಗಲ ತಾಲ್ಲೂಕಿನ ದೊಡ್ಡತಾಳವಾಡಿ ಗ್ರಾಮದಲ್ಲಿರುವ ಗಾಜನೂರಿನಲ್ಲಿ ತಮ್ಮ ತೋಟದ ಮನೆಯಿದ್ದು, ತಾವು ಹಾಗೂ ತಮ್ಮ ಕುಟುಂಬ ವರ್ಗದವರು ಆಗಾಗ್ಗೆ ಭೇಟಿ ನೀಡುತ್ತಿರುವುದರಿಂದ ಅಂತಹ ಸಂದರ್ಭಗಳಲ್ಲಿ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಲು ನಿರ್ಧರಿಸಲಾಗಿದೆ. ದೊಡ್ಡ ಗಾಜನೂರು ಗ್ರಾಮವು ಕುಖ್ಯಾತ, ನರಹಂತಕ, ದಂತಚೋರ ವೀರಪ್ಪನ್ ಹಾಗೂ ಅವನ ಸಂಗಡಿಗರು ಆಗಾಗ್ಗೆ ಹಾದುಹೋಗುವ ಹಾದಿಯಲ್ಲಿರುವುದರಿಂದ ಈ ಭದ್ರತಾ ವ್ಯವಸ್ಥೆಯು ತಮ್ಮ ಹಾಗೂ ತಮ್ಮ ಕುಟುಂಬ ವರ್ಗದವರ ದೃಷ್ಟಿಯಿಂದ ಅತ್ಯವಶ್ಯವೆಂದು ಭಾವಿಸಲಾಗಿದೆ. ಆದುದರಿಂದ ತಾವು ದೊಡ್ಡಗಾಜನೂರು ಗ್ರಾಮಕ್ಕೆ ಹಾಗೂ ತಮಿಳುನಾಡಿನ ಪೆರಿಯಾರ್, ಸೇಲಂ, ಧರ್ಮಪುರಿ ಮತ್ತು ಕರ್ನಾಟಕದ ವಿವಿಧ ತಾಲ್ಲೂಕುಗಳಲ್ಲಿ ಪ್ರವಾಸ ಮಾಡುವಾಗ ಪೋಲೀಸರು ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ತಮ್ಮ ಹಾಗೂ ತಮ್ಮ ಕುಟುಂಬ ವರ್ಗದವರ ಪ್ರವಾಸ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಮುಂಚಿ ಪ್ರತಿಬಾರಿಯು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕೆಂದು ಕೋರಲಾಗಿದೆ. ಈ ರೀತಿಯಾಗಿ

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ತಮ್ಮ ಪ್ರವಾಸದ ಬಗ್ಗೆ ಮುಂಚಿತವಾಗಿ ತಿಳಿಸಿದಲ್ಲಿ ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ತಮ್ಮ ಪ್ರವಾಸ ಕಾರ್ಯಕ್ರಮವನ್ನು ತಿಳಿಸಿ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಮಾಡಲು ಅನುಕೂಲವಾಗುತ್ತದೆ. ಈ ವಿಷಯವು ಗುರುತರವಾದ್ದರಿಂದ, ಮೇಲಿನ ಸ್ಥಳಗಳಿಗೆ ತಾವು ಪ್ರವಾಸ ಮಾಡುವ ವಿಷಯವನ್ನು ರಹಸ್ಯವಾಗಿಡಬೇಕೆಂದು ಆದರ ಪೂರಕವಾಗಿ ವಿನಂತಿಸಲಾಗಿದೆ. ಪ್ರವಾಸ ಕಾರ್ಯಕ್ರಮದ ಬಗ್ಗೆ ತಿಳಿಸಬೇಕಾದ ಅಧಿಕಾರಿಯ ಹೆಸರನ್ನು ಕೊಟ್ಟಿದ್ದಾರೆ. ಅಂದರೆ ನಮ್ಮ ಸರ್ಕಾರ ದಿನಾಂಕ 2-8-1999ರಲ್ಲೇ ಈ ಸೂಕ್ಷ್ಮವಾದ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಪ್ರವಾಸ ಕಾರ್ಯಕ್ರಮವನ್ನು ಮುಂಚಿತವಾಗಿ ತಿಳಿಸಬೇಕೆಂದು ಆಗಿನ ನಮ್ಮ ಪೋಲೀಸ್ ಮಹಾನಿರ್ದೇಶಕರು ಡಾ: ರಾಜ್‌ಕುಮಾರ್‌ರವರಿಗೆ ಪತ್ರವನ್ನು ಬರೆದಿರುತ್ತಾರೆ. ಆದರೆ ದುರ್ದೈವ ದಿನಾಂಕ: 30-4-2000 ರಂದು ಗಾಜನೂರಿಗೆ ಡಾ: ರಾಜ್‌ಕುಮಾರ್‌ರವರು ಹೋಗುತ್ತಾರೆ. ಅವರು ಸರಳ ಮನುಷ್ಯನಾದ್ದರಿಂದ ಸದುದ್ದೇಶದಿಂದ ನನ್ನ ಹತ್ತಿರವೇನಿದೆ? ನನ್ನನ್ನು ಯಾರು ಅಪಹರಿಸುತ್ತಾರೆ; ಅದಕ್ಕಾಗಿ ನನಗೆ ರಕ್ಷಣೆ ಬೇಕಾಗಿಲ್ಲ ಎಂದು ಅಲ್ಲಿಗೆ ಹೋಗುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಹಾಗೂ ತಮಿಳುನಾಡಿನ ಪೋಲೀಸ್‌ನವರಾಗಲಿ ಯಾವುದೇ ರಕ್ಷಣೆಯನ್ನು ಕೊಟ್ಟಿರುವುದಿಲ್ಲ. ಆಗ ಡಾ: ರಾಜ್‌ಕುಮಾರ್‌ರವರನ್ನು ಮಧ್ಯ ರಾತ್ರಿಯಲ್ಲೆ ಬಂದು ಅಪಹರಿಸಿಕೊಂಡು ಹೋಗುತ್ತಾರೆ ಆ ಸುದ್ದಿ 30ನೇ ತಾರೀಖು ನಮ್ಮ ರಾಜ್ಯದಲೆಲ್ಲಾ ಹರಡುತ್ತದೆ. ಅವರ ಅಪಹರಣ

ಆದಂತಹ ಸ್ಥಳ ನಮ್ಮ ಕರ್ನಾಟಕದಲ್ಲಿ ಏನೂ ಇಲ್ಲ. ನಾನು ಈ ಒಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುವುದೇನೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ದುಡುಕಿದರೇನೋ ಅಥವಾ ಆವೇಶದಲ್ಲಿ ಹತಾಶರಾಗಿ ಸ್ಟೇಟ್‌ಮೆಂಟ್ ಕೊಟ್ಟರೋ ಅಥವಾ ಗಾಬರಿಯಾಗಿ ಕೊಟ್ಟರೋ ಏನೋ ಎನ್ನುವ ಭಾವನೆ ಬರುತ್ತದೆ. "ವೀರಪ್ಪನ್‌ನಿಂದ ಡಾ: ರಾಜ್ ಅಪಹರಣ, ಒತ್ತೆಯಾಳುಗಳಲ್ಲಿ ರಾಜ್ ಅಳಿಯ ಗೋವಿಂದಾಜು" ಇದರ ಅಡಿಯಲ್ಲಿ ಏನು ಹೇಳುತ್ತಾರೆ ಎಂದರೆ, 'ಪಾರ್ವತಮ್ಮನವರಿಗೆ ತನ್ನ ಹೆಸರನ್ನು ಹೇಳುವ ಮೂಲಕ ಪರಿಚಯ ಮಾಡಿಕೊಂಡು ಅಪಹರಣ ನೇತೃತ್ವ ವಹಿಸಿದ ವೀರಪ್ಪನ್ ಧ್ವನಿ ಮುದ್ರಿತ ಕ್ಯಾಸೆಟ್ಟನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ಕೊಡಬೇಕೆಂದು ತಿಳಿಸಿ ತನ್ನ ಸಂದೇಶ ಕಳುಹಿಸಿದ್ದಾನೆ' ಇದು ಮುಂಜಾನೆ ಎರಡು ಗಂಟೆಗೆ ನಗರಕ್ಕೆ ಆಗಮಿಸಿದ ಪಾರ್ವತಮ್ಮನವರು ಮಾನ್ಯ ಮುಖ್ಯಮಂತ್ರಿಯವರಿಗೆ ಕ್ಯಾಸೆಟ್ ನೀಡಿದ್ದಾರೆ. ಆ ಕ್ಯಾಸೆಟ್‌ನಲ್ಲಿ ಏನೂ ಬೇಡಿಕೆಯನ್ನು ಮಂಡಿಸಿಲ್ಲವೆಂದು ಸ್ಪಷ್ಟಪಡಿಸಿದ ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಸರ್ಕಾರ ತನ್ನ ಪ್ರತಿನಿಧಿಯನ್ನು ಆತನ ಬಳಿಗೆ ಕಳುಹಿಸಿದರೆ ಅವರ ಜೊತೆ ಮುಂದಿನ ಮಾತುಕತೆ ನಡೆಸುವುದಾಗಿ ತಮಿಳಿನಲ್ಲಿ ತಿಳಿಸಿದ್ದಾರೆ ಎಂದು ಹೇಳಿದರು. ಡಾ: ರಾಜ್‌ಕುಮಾರ್ ಅವರ ಬಿಡುಗಡೆಗೆ ರಾಜ್ಯ ಸರ್ಕಾರ ಸಂಪೂರ್ಣ ಬದ್ಧ ಎಂದು ಮಾನ್ಯ ಮುಖ್ಯಮಂತ್ರಿಗಳು ಇದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವೆಂದು ಹೇಳಿದರು' ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಅವರು ಎಡವಿದರೇನೋ ಎಂದು ನನ್ನ ಭಾವನೆ. ಅವರು ಕೊಟ್ಟಿರುವಂತಹ ಹೇಳಿಕೆಯಿಂದ ಏನಾಗಿದೆ ಎಂದರೆ, ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಬೇಕಾಗಿರುವುದು ಕರ್ನಾಟಕ ಸರ್ಕಾರದ್ದೇ ಸಂಪೂರ್ಣವಾದ ಜವಾಬ್ದಾರಿ ಎನ್ನುವಂಥ ಭಾವನೆ ಬಂದಿದೆ. ಅದರ ಜವಾಬ್ದಾರಿಯನ್ನು ನಾವೇ ಹೊತ್ತುಕೊಳ್ಳುತ್ತಿದ್ದೇವೆ. ನಮ್ಮ ಪೋಲೀಸ್‌ನವರದ್ದೇ ತಪ್ಪಾಗಿದೆ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಮೂಡಿತು. ಅಂದು ಏನು ಹೇಳಬೇಕಾಗಿತ್ತು ಎಂದರೆ, ಈ ಅಪಹರಣ ನಮ್ಮ ಕರ್ನಾಟಕದ ಭೂಮಿಯಲ್ಲೆ ಆಗಿಲ್ಲ. ನಮ್ಮ ಕರ್ನಾಟಕದ ವ್ಯಕ್ತಿ ಅವರನ್ನು ಅಪಹರಣ ಮಾಡಿಲ್ಲ. ಈ ಅಪಹರಣ ಆಗಿರತಕ್ಕಂಥಾದ್ದು ತಮಿಳುನಾಡಿನ ಎಲ್ಲೆಯಲ್ಲೆ; ಅಪಹರಣ ಮಾಡಿರುವವರು ತಮಿಳುನಾಡಿನ ವ್ಯಕ್ತಿಗಳು. ಆದುದರಿಂದ, ತಮಿಳುನಾಡು ಸರ್ಕಾರಕ್ಕೆ ಸಂಪೂರ್ಣವಾದಂತಹ ಜವಾಬ್ದಾರಿ ಇರತಕ್ಕಂಥಾದ್ದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುವಾಗ ಯೋಚನೆ ಮಾಡಿ ಹೇಳಬೇಕಾಗಿತ್ತು. ನನ್ನ ದೃಷ್ಟಿಯಲ್ಲಿ ಅವರು ಏನು ಹೇಳಬೇಕಾಗಿತ್ತು ಎಂದರೆ law will take its own course. It is the responsibility of Tamilnadu to rescue Rajkumar. He is an important person of our State. But it is the responsibility of Tamilnadu to rescue Dr. Rajkumar. ಎಂದು ಒಂದು ಮಾತು ಹೇಳಿದ್ದರೆ, ಒಂದು ವೇಳೆ ಡಾ: ರಾಜ್‌ಕುಮಾರ್‌ರವರಿಗೆ ಏನಾದರೂ ಹೆಚ್ಚುಕಡಿಮೆ ಆಗಿದ್ದರೆ, ಇಲ್ಲಿನ ಪರಿಸ್ಥಿತಿ ಬೇರೆಯಾಗುತ್ತದೆ. ತಮಿಳು ಮಾತನಾಡುವವರು ಇಲ್ಲಿ

ಇದ್ದಾರೆ. ಕನ್ನಡ ಮಾತನಾಡುವವರು ತಮಿಳುನಾಡಿನಲ್ಲಿ ಇದ್ದಾರೆ. ದೊಡ್ಡ ಅನಾಹುತ ಆಗತಕ್ಕಂಥ ಪರಿಸ್ಥಿತಿಯಿದೆ ಆದುದರಿಂದ ಅವರನ್ನು ಬಿಡುಗಡೆ ಮಾಡುವಂತಹ ಜವಾಬ್ದಾರಿ ನಿಮ್ಮದು ಎಂದು ಹೇಳಬೇಕಾಗಿತ್ತು. ಅದೇ ತಕ್ಷಣ ಒಂದು ಸಂದೇಶವನ್ನು ವೀರಪ್ಪನ್‌ಗೆ ಕಳುಹಿಸಿಕೊಡಬೇಕಾಗಿತ್ತು. ನಮ್ಮ ಸರ್ಕಾರ ಇದ್ದಾಗ ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್ ಅವರು, ವೀರಪ್ಪನ್‌ಗೆ ಮೊದಲು ಬಂದು ಶರಣಾಗು, ನಂತರ ಡೆಟಿನ್ಯೂಸ್ ಅನ್ನು ಬಿಡುಗಡೆ ಮಾಡತಕ್ಕಂಥ ವಿಚಾರ ಆಮೇಲೆ ಮಾತನಾಡೋಣ ಎಂದು ಹೇಳಿದರು. ಅದೇರೀತಿ ನಮ್ಮ ಈಗಿನ ಮುಖ್ಯಮಂತ್ರಿಗಳು ಕೂಡ ಮೊದಲ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡು ಆ ನಂತರ ಬೇಡಿಕೆಗಳನ್ನು ಚರ್ಚೆ ಮಾಡೋಣವೆಂದು ಹೇಳಬೇಕಾಗಿತ್ತು. ಡಾ: ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಲಿಲ್ಲವೆಂದರೆ ಪರಿಸ್ಥಿತಿ ಕೆಟ್ಟುಹೋಗುತ್ತದೆ. ಇವತ್ತು ಕರ್ನಾಟಕದಲ್ಲಿ ತಮಿಳು ಮಾತನಾಡುವವರು ಬಹಳ ಜನ ಇದ್ದಾರೆ, ಪರಿಸ್ಥಿತಿ ಎಂತಹ ವಿಕೋಪಕ್ಕೆ ಹೋಗುತ್ತದೆನ್ನುವುದು ಗೊತ್ತಿಲ್ಲ ಎಂದು ಹೇಳಬೇಕಾಗಿತ್ತು. ಅದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ತಾವೇ ಹೋಮ್ ಮಿನಿಸ್ಟರ್ ಎನ್ನುವ ತರಹ ಇವರೇ ಮುಂದಾಗಿ ನನ್ನ ಜವಾಬ್ದಾರಿ, ನಾನು ಬಿಡಿಸಬೇಕು, ನಾನು ತಲೆ ಮೇಲೆ ಹೊತ್ತು ಕೊಳ್ಳುತ್ತೇವೆ ಎಂದರು. ಡಾ: ರಾಜ್‌ಕುಮಾರ್ ಅವರ ಮನೆಗೂ ಸಹ ಎರಡು ಮೂರು ಬಾರಿ ಹೋದರು. ಆದರೆ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಯಾರು ಅಡ್ವೈಸ್ ಮಾಡಿದರೋ ಗೊತ್ತಿಲ್ಲ ಎಲ್ಲಾ ಕಡೆ ಪೂಜೆ ಪುನಸ್ಕಾರಗಳು ದೇವಸ್ಥಾನಗಳಲ್ಲಿ ನಡೆದವು. ಈಡುಗಾಯಿ, ಉರುಳು ಸೇವೆ, ಅಭಿಷೇಕ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಡಿವಾಣ ಹಾಕಲೇ ಇಲ್ಲ. ಇದನ್ನು ಎಂತಹ ರಾಜ್ಯ ಎಂದು ಹೇಳಬಹುದು, ಆ ಸಂದರ್ಭದಲ್ಲಿ ಪೂಜೆ ಪುನಸ್ಕಾರ ನಡೆಯಿತಲ್ಲ ಅದಕ್ಕೆ. ಇವತ್ತು ಕಾನೂನನ್ನು ಕೈಗೆ ತೆಗೆದುಕೊಂಡು ಡಾ: ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡುವುದರ ಬದಲಿಗೆ ಒಂದು ತರಹ ದೇವಸ್ಥಾನಗಳಲ್ಲಿ ಪೂಜೆ, ಉರುಳು ಸೇವೆ, ಅಭಿಷೇಕ ಮತ್ತು ಹೋಮ ಎಲ್ಲಾ ಶುರುವಾಯಿತು. ಇದು ನಮಗೆಲ್ಲಾ ತಮಾಷೆಯಾಗಿ ಕಾಣಿಸಿತು.

ಶ್ರೀ ಡಿ.ಕೆ ಶಿವಕುಮಾರ್:— ತಾವು ಇಂತಹ ಅಮೋಘವಾದ ಸಲಹೆಯನ್ನು ಮುಂಚಿತವಾಗಿಯೇ ಕೊಡಬಹುದಾಗಿತ್ತಲ್ಲ! ಉರುಳು ಸೇವೆ ಯಾರು ಮಾಡಬೇಡಿ, ಯಾರೂ ದೇವರಿಗೆ ಕೈ ಮುಗಿಯಬೇಡಿ, ಬಂದೂಕು ಪಿಸ್ತೂಲು ಎತ್ತಿಕೊಳ್ಳಿ, ನಾವು ಬರುತ್ತೇವೆ, ನೀವು ಬನ್ನಿ ಎಂದು ಕರೆಯಬೇಕಾಗಿತ್ತು. ಆಗ ಒಬ್ಬರೂ ಉಸಿರು ಎತ್ತಲಿಲ್ಲ. ನೀವು ಏನು ಹೇಳುತ್ತೀರಿ ಅದಕ್ಕೆ ನಾವು ತಯಾರಿದ್ದೇವೆ, ನೀವು ಸರಿಯಾಗಿ ಮಾಡುತ್ತಿದ್ದೀರಿ, ಅದಕ್ಕೆ ನಮ್ಮ ಸಂಪೂರ್ಣವಾದ ಸಹಕಾರ ಇದೆ ಎಂದು ಹೇಳಿಬಿಟ್ಟು ಈಗ ಈ ರೀತಿ ಮಾತನಾಡುವುದನ್ನು ನೋಡಿದರೆ ಇದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಬಿ. ಶಿವರಾಂ :— ನೀವೇ ಹೇಳಿದಿರಿ ರಾಚಯ್ಯನವರ ಕಾಲದಲ್ಲಿ ಏನಾಯಿತು ಎಂದು.

ಶ್ರೀ ಬಿ. ಸೋಮಶೇಖರ್ :— 1997ರಲ್ಲಿ ನೀವು ವೈಟ್ ಪೇಪರ್ ಅದರ ಬಗ್ಗೆ ಕೊಡಬೇಕಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಡಿ.ಕೆ ಶಿವಕುಮಾರ್ :— ವೈಟ್ ಪೇಪರ್ ಅಲ್ಲ, ಬರೆದು ಕೊಟ್ಟು ಬಂದುದ್ದು ಅದೆಲ್ಲಾ ಟೈಂ ಬರುತ್ತದೆ ಆಗ ಅವರು ಹೇಳುತ್ತಾರೆ.

ಶ್ರೀ ಬಿ. ಸೋಮಶೇಖರ್ :— ನಾವು ಯಾವತ್ತು ಸರೆಂಡರ್ ಆಗಿರಲಿಲ್ಲ

ಶ್ರೀ ರಾಮಲಿಂಗರೆಡ್ಡಿ :— ಜನ ಪೂಜೆ ಮಾಡಿದರೆ ನಾವು ಬೇಡ ಎಂದು ಹೇಳುವುದಕ್ಕೆ ಆಗುತ್ತದೆಯಾ?

SRI SHIVAKUMAR :— One should appreciate the entire public. ವಯೋಲೆನ್ಸ್‌ಗೆ ಹೋಗುತ್ತಿದ್ದ ಜನರನ್ನು ಧಾರ್ಮಿಕವವಾಗಿ ಈ ಸರ್ಕಾರ ಟರ್ನ್ ಮಾಡಿತು ಎನ್ನುವುದನ್ನು ತಿಳಿದುಕೊಂಡಡು ನೀವು ಅದನ್ನು ಅಪ್ರಿಷಿಯೇಟ್ ಮಾಡಬೇಕು.

ಶ್ರೀ ಬಿ ಸೋಮಶೇಖರ್ :— 30ನೇ ತಾರೀಖು ಏನು ಡಾ: ರಾಜ್ ಅಪಹರಣವಾಯಿತು ಆಗ ಕೆಲವು ವಿಚಾರದಲ್ಲಿ ಇವರು ಹಸ್ತಕ್ಷೇಪ ಮಾಡದೆ ಪೋಲೀಸ್‌ನವರಿಗೆ ಬಿಟ್ಟಿದ್ದರೆ ನನಗೆ ಬಂದಂತಹ ಮಾಹಿತಿ ಪ್ರಕಾರ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫೈ ಮಾಡಬೇಕು; ಸುಮಾರು ಒಂದು ಸಾವಿರಕ್ಕೂ ಹೆಚ್ಚು ವಿಚ್ಛಿದ್ರಕಾರಿ ಶಕ್ತಿಗಳು ನಮ್ಮ ಲಾ ಅಂಡ್ ಆರ್ಡರ್ ಪ್ರಾಬ್ಲಮ್ಸ್ ಕ್ರಿಯೇಟ್ ಮಾಡುತ್ತಾರೆ. ಆ ದುಷ್ಟವ್ಯಕ್ತಿಗಳನ್ನು ರೌಂಡಪ್ ಮಾಡಿದರು ಎಂದು ಸುದ್ದಿ. ಒಂದು ಸಾವಿರ ಮಂದಿಯನ್ನು ಅಲ್ಲೇ ಬಿಟ್ಟುಬಿಟ್ಟಿದ್ದರೆ ಏನೂ ಆಗುತ್ತಿರಲಿಲ್ಲ. ಆದರೆ ಮಾರನೆ ದಿನ ಎಂದರೆ 31ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಗೃಹಮಂತ್ರಿಗಳಿಗೂ ಏನು ತಿಕ್ಕಾಟ ಬಂತೋ, ಯಾರು ಬಿಡಿಸಿದರೋ ಗೊತ್ತಿಲ್ಲ, ಅದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಡಿ.ಕೆ. ಶಿವಕುಮಾರ್ :— ಎಲ್ಲರೂ ರಾತ್ರಿ ಕನಸು ಕಾಣುತ್ತಾರೆ. ನೀವು ಹಗಲೇ ಕಾಣುತ್ತಿದ್ದೀರಿ. ಎಲ್ಲಾದರೂ ಉಂಟೆ, ಕೆಲವರು ಟ್ರಾವೆಲ್ ಮಾಡುವಾಗ ಕಾರಿನಲ್ಲಿ ಕನಸು ಕಾಣುತ್ತಾರೆಂದು ನೋಡಿದ್ದೇನೆ. ನೀವು ಅಸೆಂಬ್ಲಿಯಲ್ಲಿ ಕನಸು ಕಾಣುತ್ತೀದ್ದೀರಿ ಅಲ್ಲವೇ?

ಶ್ರೀ ಬಿ. ಸೋಮಶೇಖರ್ :— ನಮ್ಮ ಅಧಿಕಾರಿಗಳು ಸೆಕ್ಷನ್ 151 ಸಿಆರ್‌ಪಿಸಿ ಪ್ರಕಾರ Prevention of disturbance of peace Detention ಒಂದು ಸಾವಿರ ಗೂಂಡಾಗಳು ಯಾರು ಇದ್ದಾರೆ, ಸಮಾಜಘಾತುಕ ವ್ಯಕ್ತಿಗಳು ಯಾರಿದ್ದಾರೆ, ಲಾ ಅಂಡ್

ಆರ್ಡರ್ ಪ್ರಾಬ್ಲಂ ಯಾರು ಸೃಷ್ಟಿ ಮಾಡುತ್ತಾರೆ ಅಂತಹವರನ್ನು ಸುಮಾರು ನೂರಕ್ಕೂ ಹೆಚ್ಚು ಮಂದಿಯನ್ನು ಬಿಡುಗಡೆ ಮಾಡಿರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ಅವರನ್ನು ಯಾರು ಬಿಡುಗಡೆ ಮಾಡಿಸಬೇಕೆಂದು ಹೇಳಿದ್ದಾರೋ ಗೊತ್ತಿಲ್ಲ. ಏಕೆಂದರೆ ಗಲಾಟೆಯಾಗಲಿ, ಇನ್ನು ಇದರಿಂದ ವೀರಪ್ಪನ್ ಗಾಬರಿಯಾಗಿ ರಾಜ್‌ಕುಮಾರ್‌ರವರನ್ನು ಬಿಡಲಿ, ಅಥವಾ ಬೇರೆ ಉದ್ದೇಶದಿಂದಲೋ ಅವರನ್ನು ಬಿಡಿಸಿದ್ದಾರೆ ಎಂದು ನನಗೆ ಸುದ್ದಿ. ಅದನ್ನು ನಮ್ಮ ಸರ್ಕಾರ ಕ್ಲಾರಿಫೈ ಮಾಡಬೇಕಾಗುತ್ತದೆ. ಇದು ನನಗೆ ಬಂದಿರತಕ್ಕಂಥ ಮಾಹಿತಿ. ಪೊಲೀಸ್ ಇಲಾಖೆಯಿಂದ ಕೆಲವು ವಿಚಾರಗಳನ್ನು ತಿಳಿದುಕೊಂಡಿರುವ ಮಾಹಿತಿ ಪ್ರಕಾರ ಸಾವಿರಾರು ಜನರನ್ನು ಹಿಡಿದುಕೊಂಡು ಅದರಲ್ಲಿ ನೂರು ಜನರನ್ನು ಬಿಟ್ಟಿದ್ದಾರೆ. ಇದಕ್ಕೆ ಉತ್ತರವನ್ನು ಸಹ ಹೇಳಬೇಕಾಗುತ್ತದೆ. ಆದಾದಮೇಲೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಗೃಹ ಸಚಿವರಿಗೆ ಬೇಡದೇ ತಾವೇ ಮುದೆ ಬಂದಿದ್ದು, ಅವರು ತಿಳಿದುಕೊಂಡಿರುವ ಹಾಗೆ ಎರಡು ಮೂರು ದಿವಸಗಳಲ್ಲಿ ರಾಜ್‌ಕುಮಾರ್ ಬಿಡುಗಡೆಯಾಗುತ್ತದೆ, ಅದರ ಕೀರ್ತಿ ನಾನೇ ತೆಗೆದುಕೊಳ್ಳಬಹುದೆಂದು ಭಾವಿಸಿದ್ದರು. ಆದರೆ ಬಿಡುಗಡೆಯಾಗಲಿಲ್ಲ.

ಒಬ್ಬ ಸದಸ್ಯರು :— ಇಲ್ಲದ ಅಪಾದನೆ ಏಕೆ ಮಾಡುತ್ತೀರಿ? ಅಪಾದನೆ ಮಾಡಿ ಆದರೆ ಕಲ್ಪನೆಯಲ್ಲಿ ಮಾತನಾಡುವುದು ಬೇಡ.

ಶ್ರೀ ಬಿ. ಸೋಮಶೇಖರ್ :— ನಾನು ಹೇಳುವುದು ಅನ್‌ಪಾರ್ಲಿಮೆಂಟರಿ ಆಗಿದ್ದರೆ ಹೇಳಿ ನಾನು ತಿದ್ದಿಕೊಳ್ಳುತ್ತೇನೆ. ನಾವು ವಿರೋಧ ಪಕ್ಷದಲ್ಲೆ ಇದ್ದುಕೊಂಡು ಮಾನ್ಯ ಮುಖ್ಯಮಂತ್ರಿಗಳು ತರಾಟೆಗೆ ತೆಗೆದುಕೊಂಡರೆ ಸುಮ್ಮನೆ ಕುಳಿತುಕೊಳ್ಳುವುದಿಲ್ಲವೆ; ಇವತ್ತು ನಾವು ಸದನಕ್ಕೆ ಬಂದಾಗ ಅದನ್ನು ಹೇಳಲೇಬೇಕಾಗುತ್ತದೆ. ನನಗೆ ಇಷ್ಟ ಬಂದಹಾಗೆ ಹೇಳಬೇಕೆಂದು ಅನಿಸುವುದಿಲ್ಲ. ಕೊನೆಗೆ ಎರಡು ಮೂರು ತಿಂಗಳಾಯಿತು ಬಿಡುಗಡೆ ಆಗಲಿಲ್ಲ. ಪ್ರೆಸ್‌ನವರು ಕೇಳಿದರೆ ಅಲ್ಲಿ ನೋಡಿ ಎಂದು ಆ ಕಡೆ ತೋರಿಸಿದರು. ಮೊದಲೇ ತೋರಿಸಿದ್ದರೆ ಆಗ ಅವರು ಸಿಕ್ಕಿಹಾಕಿಕೊಳ್ಳುತ್ತಿರಲಿಲ್ಲ. ಮೊದಲು ನಾನೇ ಕೀರ್ತಿ ಎಲ್ಲಾ ತೆಗೆದುಕೊಳ್ಳಬೇಕೆಂದು ನೋಡಿದರು, ಕೊನೆಗೆ ಸಿಕ್ಕಿಹಾಕಿಕೊಂಡರು. ಒಂದು ಗಾದೆ ಹೇಳುತ್ತಾರಲ್ಲ, ಗಣೇಶನನ್ನು ಮಾಡುವುದಕ್ಕೆ ಹೋಗಿ ಅವರ ತಂದೆಯನ್ನು ಮಾಡಿದರು ಎಂದು. ಹಾಗೆ ಆಗಿ ಹೋಯಿತು. ಸರ್ಕಾರದವರು ಮೊದಲೇ ತಪ್ಪು ಏನು ಮಾಡಿದರು ಎನ್ನುವುದರ ಬಗ್ಗೆ ಹೇಳುತ್ತೇನೆ. 1993ನೇ ಇಸವಿಯಲ್ಲಿ ಬೇಲ್ ಮೇಲೆ ಬಿಡಬೇಕೆಂದು ಟಾಡಾ ಬಂಧಿಗಳು ಮೈಸೂರು ಕೋರ್ಟಿನಲ್ಲಿ ಅರ್ಜಿ ಹಾಕಿಕೊಳ್ಳುತ್ತಾರೆ. ಅವತ್ತಿನ ಮೈಸೂರು ಟಾಡಾ ಕೋರ್ಟ್ ಆ ಅರ್ಜಿಯನ್ನು ತಿರಸ್ಕಾರ ಮಾಡುತ್ತದೆ. ಅವರು ತಿರಸ್ಕಾರ ಮಾಡಿದಮೇಲೆ ಟಾಡಾ ಬಂಧಿಗಳು ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. ಅಲ್ಲಿ ಸುಪ್ರೀಂ ಕೋರ್ಟಿನವರು 'ಸಂಬಂಧಪಟ್ಟ ಕೋರ್ಟ್ ಮುಖಾಂತರ ಟ್ರಯಲ್ ಆಗಲೇಬೇಕು, ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು' ನಿಯಮ 321ರ ಪ್ರಕಾರ ಒಪ್ಪಿಕೊಳ್ಳುವುದಿಲ್ಲ. ಅಲ್ಲಿಂದ ಟಾಡಾ ಬಂಧಿಗಳು ವಾಪಸ್ಸು ಬರುತ್ತಾರೆ. ಟಾಡಾ ಬಂಧಿಗಳು ಸುಪ್ರೀಂ

ಕೋರ್ಟ್‌ವರೆಗೆ ಹೋಗಿ ಅಲ್ಲಿ ವಿಫಲರಾಗಿ ಬಂದಿದ್ದಾರೆಂದು ಸರ್ಕಾರಕ್ಕೆ ಗೊತ್ತಿದ್ದರೂ ಸಹ ಪುನ: ಪಬ್ಲಿಕ್ ಪ್ರಾಸಿಕ್ಯೂಟರ್ ಮುಖಾಂತರ ಟಾಡಾ ಬಂಧಿಗಳ ಬಿಡುಗಡೆಗೆ ಸರ್ಕಾರ ಅರ್ಜಿ ಹಾಕಿಕೊಳ್ಳುತ್ತದೆ. ಇದು ಏನನ್ನು ತೋರಿಸುತ್ತದೆ? ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. 1992-93ರಲ್ಲಿ ಆಗಿನ ಆನೇಕಲ್ ಎಂ.ಎಲ್.ಎ ಒಬ್ಬರು ಒಂದು ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಟ್ರಯಲ್ ಕೋರ್ಟಿನಲ್ಲಿ ಆ ಕ್ರಿಮಿನಲ್ ಕೇಸ್ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ಅವರು ಎಂ.ಎಲ್.ಎ ಆಗಿ ಪುನ: ಆರಿಸಿ ಬಂದ ಮೇಲೆ ಆ ಕೇಸನ್ನು ನಮ್ಮ ಸರ್ಕಾರ ವಿಥ್‌ಡ್ರಾ ಮಾಡಿಕೊಳ್ಳುತ್ತದೆ. ವಿಥ್‌ಡ್ರಾ ಮಾಡಿಕೊಂಡಮೇಲೆ ಕಂಪ್ಲೇನೆಂಟ್ ಹೈಕೋರ್ಟಿಗೆ ಹೋಗುತ್ತಾರೆ. ಈ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೈಕೋರ್ಟ್‌ನವರು ವಜಾ ಮಾಡುತ್ತಾರೆ. ಈ ರೀತಿಯ ಸಿಮಿಲರ್ ಕೇಸ್ ಆಗಿರುತ್ತದೆ. ಏಕೆಂದರೆ ಶಕೀಲ್ ಆಹಮ್ಮದ್ ಅವರ ತಂದೆ ಯಾವ ರೀತಿಯಾಗಿ ಸುಪ್ರಿಂ ಕೋರ್ಟಿಗೆ ಹೋಗಿದ್ದರೋ ಅದೇ ರೀತಿಯಾಗಿ ಕಪ್ಲೇನೆಂಟ್ ಆ ಎಂ.ಎಲ್.ಎ ಮೇಲೆ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿಕೊಳ್ಳುತ್ತಾರೆ. ಆವಾಗ ಆ ಅರ್ಜಿಯನ್ನು ಹೈಕೋರ್ಟ್‌ನವರು ವಜಾ ಮಾಡಿದರು. ಇದು ಸರ್ಕಾರಕ್ಕೆ ಗೊತ್ತಿದೆ. ಟಾಡಾ ಬಂಧಿಗಳ ಬಿಡುಗಡೆ ವಿಚಾರದಲ್ಲಿ ಅರ್ಜಿ ಹಾಕಿರತಕ್ಕಂಥದ್ದು ಕಲಂ 321ರ ಪ್ರಕಾರ ಅದು ಸಂಪೂರ್ಣವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ಸಂಬಂಧಪಟ್ಟ ವಿಚಾರ. ಇದು ಗೊತ್ತಿದ್ದರೂ ಸಹ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ಅಧಿಕಾರವನ್ನು ಸರ್ಕಾರ ತೆಗೆದುಕೊಂಡು, ಸರ್ಕಾರ ಕ್ಯಾಬಿನೆಟ್‌ನಲ್ಲಿ ಗೃಹ ಸಚಿವರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಚರ್ಚೆ ಮಾಡಿ ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕುತ್ತಾರೆ. ಅದನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದ್ದು ಮಾತ್ರವಲ್ಲದೆ ಎರಡೂ ಸರ್ಕಾರಗಳಿಗೆ ಛೀಮಾರಿ ಹಾಕಿದೆ. ಆರೇಳು ವರ್ಷಗಳಿಂದ ಟ್ರಯಲ್ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದ್ದು ಟಾಡಾ ಬಂಧಿಗಳು ಅರ್ಜಿ ಹಾಕಿಕೊಳ್ಳದೇ ಸುಮ್ಮನೆ ಇರುವಾಗ ಸರ್ಕಾರದವರು ಮೈಸೂರು ನ್ಯಾಯಾಲಯದಲ್ಲಿ ಮತ್ತು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿಕೊಳ್ಳತಕ್ಕಂಥ ಔಚಿತ್ಯವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನವರು ಛೀಮಾರಿ ಹಾಕಿದ್ದಾರೆ. ಇನ್ನು ಕಾನೂನು ಸುವ್ಯವಸ್ಥೆ ಬಗ್ಗೆ ಹೇಳುವುದಾದರೆ, ಅವತ್ತು ಅಪಹರಣ ಆದ ದಿನದಿಂದ ಏನೇನು ನಷ್ಟವಾಗಿದೆ, ಅದರಿಂದ ನಮ್ಮ ರಾಜ್ಯದ ಜನತೆಯ ಮೇಲೆ ಏನು ಪರಿಣಾಮ ಆಗಿದೆ ಎನ್ನುವುದರ ಬಗ್ಗೆ ಒಂದು ವರದಿ ಬಂದಿದೆ.

> "ವಾಣಿಜ್ಯೋದ್ಯಮ ಅಸ್ತವ್ಯಸ್ತ, ಸುಮಾರು 300 ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟ. ಡಾ: ರಾಜ್‌ಕುಮಾರ್ ಅವರ ಅಪಹರಣದ ಹಿನ್ನಲೆಯಲ್ಲಿ ರಾಜ್ಯದಲ್ಲಿ ಉಂಟಾಗಿರುವ ಆತಂಕದ ಸ್ಥಿತಿ ಈಗಲೂ ತಹಬಂದಿಗೆ ಬಂದಿಲ್ಲ. ಜುಲೈ 31ರಿಂದ ಎರಡು ದಿನ ರಾಜ್ಯಾದ್ಯಂತ ವಾಣಿಜ್ಯ ವಹಿವಾಟುಗಳು ಪೂರ್ತಿ ಬಂದ್ ಆಗಿದ್ದವು. ಆ ಬಳಿಕವು ವಾಣಿಜ್ಯ ವಹಿವಾಟುಗಳು ಆತಂಕದ ಛಾಯೆಯಲ್ಲಿ ಹಾಗೆಯೇ ಮುಂದುವರಿದಿದೆ. ಈ ಅವಧಿಯಲ್ಲಿ ರಾಜ್ಯಾದ್ಯಂತ

ಉತ್ಪಾದನೆ ಕುಂಠಿತಗೊಂಡಿದ್ದರಿಂದ ಒಟ್ಟಾರೆ ಸುಮಾರು 300 ಕೋಟಿ ರೂಪಾಯಿಗಳಿಗೂ ಹೆಚ್ಚು ನಷ್ಟ ಸಂಭವಿಸಿದೆ ಎಂದು ಅಂದಾಜು ಮಾಡಲಾಗಿದೆ."

ಈ ಅಪಹರಣ ಮೂರು ತಿಂಗಳ ಅವಧಿಯಲ್ಲಿ ಟ್ರೇಡ್, ಟ್ರಾನ್ಸ್‌ಪೋರ್ಟ್, ಟೂರಿಸಂ, ಸೇಲ್ಸ್‌ಟ್ಯಾಕ್ಸ್ ಮತ್ತು ಎಕ್ಸೈಜ್‌ನಿಂದ ಸುಮಾರು 5,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ನಷ್ಟ ರಾಜ್ಯಕ್ಕೆ ಆಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಹಾಗೆಯೇ ಡಾ: ರಾಜ್ ಅವರ ಅಪಹರಣ ಆದತಕ್ಷಣ "ನನ್ನ ಮೇಲೆ ಯಾವುದೇ ಕಾರ್ಯಚರಣೆ ಆಗಬಾರದು, ಎಸ್.ಟಿ.ಎಫ್.ನವರ ಆಪರೇಷನ್ ನಿಲ್ಲಬೇಕು" ಎನ್ನುವ ಷರತ್ತನ್ನು ವೀರಪ್ಪನ್ ಹಾಕಿದ. ಆ ಷರತ್ತಿನ ಆಧಾರದ ಮೇಲೆ ಗಡಿ ಪ್ರದೇಶದಲ್ಲಿರತಕ್ಕಂಥ ಸೇಲ್ಸ್ ಟ್ಯಾಕ್ಸ್ , ಫಾರೆಸ್ಟ್, ಕಮರ್ಶಿಯಲ್ ಟ್ಯಾಕ್ಸ್ ಎಕ್ಸೈಜ್ ಹೀಗೆ ಎಲ್ಲಾ ಚೆಕ್ ಪೋಸ್ಟ್‌ಗಳನ್ನು ತೆರೆದು ಬಿಟ್ಟರು. ಆ ಚೆಕ್‌ಪೋಸ್ಟ್‌ಗಳನ್ನು ತೆರೆದು ಬಿಟ್ಟಮೇಲೆ ಕಾಡಿನಿಂದ ಹೊರ ರಾಜ್ಯಗಳಿಗೆ ಏನೇನು ಹೋಯಿತೆಂದು ಗೊತ್ತಿಲ್ಲ. ಹೊರಗಡೆಯಿಂದ ಯಾವ ಯಾವ ಅಸ್ತ್ರ ಗಳು, ಆಯುಧಗಳು ಕಾಡಿನೊಳಗೆ ಬಂತು ಎಂದು ಗೊತ್ತಿಲ್ಲ,. ಕಾಡಿನ ಸಂಪತ್ತು ಅನಧಿಕೃತವಾಗಿ ಹೊರಗಡೆ ಹೋಗಿ ಅದರಿಂದ ಎಷ್ಟು ನಷ್ಟವಾಗಿದೆ ಎನ್ನುವುದು ಗೊತ್ತಿಲ್ಲ. ಚಾಮರಾಜನಗರ ಜಿಲ್ಲೆಗೆ ಮತ್ತು ಬೇರೆ ಭಾಗದ ಜಿಲ್ಲೆಗೂ ಏನು ವ್ಯಾಪಾರ, ವ್ಯವಹಾರ ನಡೆಯುತ್ತಿತ್ತು ಅದು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದನ್ನು ನಾವು ನೋಡಿದ್ದೇವೆ. ಇನ್ನು ಆ ಅಪಹರಣವಾದ ಒಂದೆರಡು ತಿಂಗಳ ಅವಧಿಯಲ್ಲಿ ಸುಮಾರು 30 ರಿಂದ 40 ಕೊಲೆಗಳಾಗಿರುವ ವರದಿಯನ್ನು ಪ್ರತಿ ದಿನ ಪೇಪರ್‌ನಲ್ಲಿ ಬರುತ್ತಿರುವುದನ್ನು ನೋಡಿದ್ದೇವೆ. "ಬಿಡುಗಡೆ ಮಾಡುವುದಕ್ಕೋಸ್ಕರ ಏನು ಬೇಕಾದರೂ ತ್ಯಾಗ ಮಾಡುತ್ತೇವೆ, ಏನು ಬೇಕಾದರೂ ಒಪ್ಪಿಕೊಳ್ಳುತ್ತೇವೆ" ಎನ್ನುವ ಮೆಸೇಜ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಕೊಟ್ಟರೋ, ಅದು ಇಂಥ ದುಷ್ಟ ಶಕ್ತಿಗಳಿಗೆ, ಕಾನೂನು ಉಲ್ಲಂಘಿಸುವ ಶಕ್ತಿಗಳಿಗೆ ಚೇತನ ಸಿಕ್ಕಿದ ಹಾಗೆ ಆಯಿತು. ಈ ಸಂದರ್ಭದಲ್ಲಿ ಹಲವು ಮರ್ಡರ್‌ಗಳು ಆದವು, ಅಪಹರಣಗಳಾದವು, ರಾಜಕೀಯ ಕೊಲೆಗಳು ಆದವು, ಮತ್ತು ಮೈನಿಂಗ್ ಕಾನ್‌ಫರೆನ್ಸ್ ಪೋಸ್ಟ್‌ಪೋನ್ ಆಯಿತು, ಅಮೇರಿಕಾದ 'ಡೆಲ್' ಎನ್ನುವ ಹೆಸರಿನ ಒಬ್ಬ ಇನ್‌ವೆಸ್ಟರ್ ಕರ್ನಾಟಕಕ್ಕೆ ಬರಬೇಕಾಗಿದ್ದ ತನ್ನ ಪ್ರವಾಸವನ್ನು ಮೊಟಕುಗೊಳಿಸಿ ಹೈದರಾಬಾದ್‌ಗೆ ಹೋದರು. ಇಲ್ಲಿ ಎರಡು ದಿವಸ ಬಂದ್ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ನೇಪಾಳದ ಪ್ರಧಾನಮಂತ್ರಿಗಳು ನಮ್ಮ ರಾಜ್ಯಕ್ಕೆ ಬರದೆ ಬೇರೆ ಕಡೆಗೆ ಹೋದರು. ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಮೂಲಕ ಸುಮಾರು 27 ಸಾವಿರ ಕೋಟಿ ರೂಪಾಯಿಗಳು ಫಾರಿನ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಬರುತ್ತದೆ, ಅದನ್ನು ಸಂಗ್ರಹಣೆ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಘೋಷಣೆ ಮಾಡಿದ್ದರು ಅವೆಲ್ಲ ಈ ಮೂರು ತಿಂಗಳ ಅವಧಿಯಲ್ಲಿ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ ಎಂದು ನನ್ನ ಅನಿಸಿಕೆಯಾಗಿದೆ.

ಸೇಲ್ಸ್ ಟ್ಯಾಕ್ಸ್‌ನಲ್ಲಿ ಎರಡು ವಾರದಲ್ಲಿ ಸುಮಾರು 2 ಕೋಟಿ ರೂಪಾಯಿಗಳು ಪರ್-ಡೇ ನಷ್ಟವಾಗಿದೆ. ಎಕ್ಸೈಜ್ ನಲ್ಲಿ ಹದಿನೈದು ದಿನಗಳಲ್ಲಿ ಸುಮಾರು 12 ಕೋಟಿ ರೂಪಾಯಿಗಳು ಲಾಸ್ ಆಗಿದೆ. ಹೋಟೆಲ್ಸ್ ವ್ಯಾಪಾರದಲ್ಲಿ ಸುಮಾರು 80 ಕೋಟಿ ರೂಪಾಯಿಗಳು ನಷ್ಟವಾಗಿದೆ, ಫಿಲಂ ಇಂಡಸ್ಟ್ರಿಯಲ್ಲಿ ಪ್ರತಿ ದಿನಕ್ಕೆ ಸುಮಾರು 100 ಕೋಟಿ ರೂಪಾಯಿಗಳಷ್ಟು ಲಾಸ್ ಆಗುತ್ತಿತ್ತು. ಇದು ಸುಮಾರು 2 ತಿಂಗಳು ಹೀಗೆಯೇ ನಡೆದಿದೆ. ಇದರಿಂದ ಅಲ್ಲಿಯ ನೌಕರರೆಲ್ಲರೂ ಇವತ್ತು ಬೀದಿ ಪಾಲಾಗಿದ್ದಾರೆ. ಫಿಲಂ ಇಂಡಸ್ಟ್ರೀಸ್ ಸಂಪೂರ್ಣವಾಗಿ ನಿಂತುಹೋಗಿದೆ. ಅಲ್ಲಿಂದ ಸರ್ಕಾರಕ್ಕೆ ಬರತಕ್ಕಂಥ ಟ್ಯಾಕ್ಸ್ ನಿಂತುಹೋಗಿದೆ. ಆದ್ದರಿಂದ ಇವೆಲ್ಲದರಿಂದ ಆದಂಥ ನಷ್ಟದ ಬಗ್ಗೆ ಮತ್ತು ತುಂಬಿಕೊಳ್ಳುವ ಬಗ್ಗೆ ಸಂಪೂರ್ಣವಾದ ಶ್ವೇತಪತ್ರವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದ್ದೆವು. ಅಪಹರಣದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ, ಅದನ್ನು ಯಾವ ರೀತಿ ಭರಿಸುತ್ತಾರೆ ಎನ್ನುವ ಬಗ್ಗೆ ಅವರು ಏನನ್ನೂ ಸಹ ಹೇಳಲಿಲ್ಲ. ಆಯವ್ಯಯದಲ್ಲಿ ಇಷ್ಟು ಕೋಟಿ ರೂಪಾಯಿ ಆದಾಯ ಬರುತ್ತದೆ, ಇಷ್ಟು ಹಣವನ್ನು ಖರ್ಚು ಮಾಡಬಹುದು ಇತ್ಯಾದಿಗಳ ಒಂದು ಅಂದಾಜನ್ನು ಸರ್ಕಾರ ನಡೆಸುವವರು ಇಟ್ಟುಕೊಂಡಿರುತ್ತಾರೆ. ಇವತ್ತು ಸುಮಾರು ನಾಲ್ಕೈದು ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ನಷ್ಟ ಆಗಿರಬಹುದು, ಅದನ್ನು ಯಾವರೀತಿ ಭರಿಸುತ್ತಾರೆನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಆದರೆ ಅದನ್ನು ಹೇಳಲಿಲ್ಲ. ಆದ್ದರಿಂದ ಅದನ್ನು ಹೇಳಬೇಕಾಗುತ್ತದೆ, ಅದನ್ನು ಹೇಳಬೇಕು ಎಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಸುಪ್ರೀಂ ಕೋರ್ಟ್‌ನವರು ಮಾಡಿರತಕ್ಕಂಥ ಛೀಮಾರಿ ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಯಾವುದೇ ಸರ್ಕಾರದ ಮೇಲೆ ಇಷ್ಟೊಂದು ಸ್ಟ್ರಿಕ್ಚರ್ ಪಾಸ್ ಮಾಡಿರಲಿಲ್ಲ ಎನ್ನತಕ್ಕಂಥಾದ್ದು ನನ್ನ ಅನಿಸಿಕೆಯಾಗಿದೆ. ಸುಪ್ರೀಂ ಕೋರ್ಟಿನ ಇಂಥ ಛೀಮಾರಿಯಿಂದ ಸುಸಂಸ್ಕೃತವಾದ, ಗೌರವದಿಂದ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥ ಯಾವುದೇ ಸರ್ಕಾರ ಕೂಡ ಇವತ್ತು ಇದನ್ನು ಸಹಿಸಿಕೊಂಡು

4.20 ಪಿ.ಎಂ.

ಮುಂದುವರಿಯುತ್ತಿರಲಿಲ್ಲ. ಸುಪ್ರೀಂ ಕೋರ್ಟ್ ನೀಡಿರತಕ್ಕಂಥ ತೀರ್ಪಿನ ಕೊನೆಯ ಪ್ಯಾರಾವನ್ನು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಓದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನೀಡಿರತಕ್ಕಂಥ ತೀರ್ಪಿನ ಕೊನೆಯ ಪ್ಯಾರಾವನ್ನು ಇಲ್ಲಿ ನಾನು ಓದುವುದಕ್ಕೆ ಇಷ್ಟಪಡುತ್ತೇನೆ.

``It does not appear that anybody considered that if a democratically elected Government give an impression to the citizens of this country of being law breakers. Would it not bfeed contempt

of law? Would it not invite citizens to become a law unto themselves? It may lead to anarchy. Governments have to consider and balance the choice between maintenance of law and order and anarchy. It does not appear that anyone considered this aspect. It yielded to the pressure tactics of those who according to the Governments are out to terrorise the police force and over-awe the elected Governments. It does not appear that anyone considered with their action people may lose faith in the democratic process and then they see public authority is flouted and the helplessness of the Government by paralysing and discrediting democratic authority, had to be taken into consideration. It is the executive fuction to decide in public interest to withdraw from prosecution, but it is also for the Government to maintain its existence. Self preservation is the most important aspect of sovereignty. To preserve its independence is the highest duty of the nation. To attain this all other considerations are to be subordinated. Of course it is for the State to consider this acpect and take its conscious decision. In the present case without consideration of these facts, decision was taken to withdraw the TADA charges. It is evident from the materials now placed on record before this Court that Veerappan was acting in consultation with secessionist organisations/groups which have the object of liberation of Tamil from India. There is no serious chanllenge to this aspect. None of the aforesaid aspects was considered by the Government or the Public Prosecutor before having recourse to Sec.321. -`` ೩೨೧ನೇ ಸೆಕ್ಷನ್ ಪ್ರಕಾರ ಟಾಡಾ ಬಂದಿಗಳನ್ನು ಬಿಡಬೇಕೆಂದು ರಾಜ್ಯ ಸರ್ಕಾರ ಏನೊಂದು ಅರ್ಜಿಯನ್ನು ಹಾಕಿಕೊಂಡಿದೆ, ಇದರಲ್ಲಿ ಯಾವುದೇ ರೀತಿಯ ಸಾರ್ವಜನಿಕ ಆಸಕ್ತಿ ಇಲ್ಲ. ಇದನ್ನೆಲ್ಲಾ ನಾನು ವಿವರಣೆಯಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆನಂತರ, ಸುಪ್ರೀಂ ಕೋರ್ಟ್‌ನವರು ಇವರಿಗೆ ಯಾವ್ಯಾವ ಪ್ರಶ್ನೆಗಳನ್ನು ಹಾಕಿದ್ದಾರೆ ಎಂಬುದನ್ನು ಮತ್ತು ಈ ಪ್ರಶ್ನೆಗಳಿಗೆ ಇವರು ಏನು ಉತ್ತರ ಕೊಟ್ಟಿದ್ದಾರೆ ಎಂಬುದನ್ನು ಹಾಗೆಯೇ ಯಾವ ಸಂದರ್ಭದಲ್ಲಿ ಏನೇನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನೂ ಸಹ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಈಗಾಗಲೇ ಹೇಳಿದ ಪ್ರಕಾರ ಸೆಕ್ಷನ್ ೩೨೧ರಲ್ಲಿ ಟಾಡಾ ಬಂದಿಗಳನ್ನು ಬಿಡುಗಡೆ ಮಾಡುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಅರ್ಜಿ ಹಾಕಿರುವುದೇ ಮೊದಲ ತಪ್ಪೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಟಾಡಾ ಬಂದಿಗಳನ್ನು ಬಿಡುಗಡೆ ಮಾಡುವುದಕ್ಕೆ ರಾಜ್ಯ ಸರ್ಕಾರವೇ ಅರ್ಜಿ ಹಾಕಿಕೊಂಡು

ಟಾಡಾ ಬಂದಿಗಳನ್ನು ಬಿಡುಗಡೆಗೆ ಪ್ರಯತ್ನ ಮಾಡಿರುವುದನ್ನು ಸುಪ್ರೀಂ ಕೋರ್ಟ್‌ನವರು ತಿರಸ್ಕಾರ ಮಾಡಿರುವಾಗ ಮತ್ತೆ ರಾಜ್ಯ ಸರ್ಕಾರ ಅವರ ವಕಾಲತ್ ವಹಿಸಿಕೊಂಡು ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡತಕ್ಕಂಥ ವಿಚಾರದಲ್ಲಿ ಇವತ್ತಿನ ದಿವಸ ಅಫಿಡವಿಟ್ ಹಾಕಿದ್ದಾರೆ. ಇದಕ್ಕೂ ಮತ್ತು ಮಾನ್ಯ ಮುಖ್ಯ ಮಂತ್ರಿಯವರು ನೀಡಿರತಕ್ಕಂಥ ಹೇಳಿಕೆಗೂ ವ್ಯತ್ಯಾಸ ಇದೆ. ಇವತ್ತಿನ ದಿವಸ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸುವುದಕ್ಕೋಸ್ಕರ ಸಂಧಾನಕ್ಕಾಗಿ ನೆಡುಮಾರನ್ ಮತ್ತು ಆರ್. ಗೋಪಾಲ್ ಹಾಗೂ ಮಣಿ ಮತ್ತು ಇನ್ನು ಕೆಲವರು ಯಾ್ಯಾವ ಸಂದರ್ಭದಲ್ಲಿ ಕಾಡಿಗೆ ಹೋದರೆಂಬುದರ ಬಗ್ಗೆ ಮತ್ತು ಇವರು ಕಾಡಿಗೆ ಹೋಗಲು ಯಾರು ಸಮ್ಮತಿಕೊಟ್ಟರು ಎಂಬುದು ಒಬ್ಬರಿಗೂ ಸಹ ಗೊತ್ತಿಲ್ಲ. ನೆಡುಮಾರನ್ ಎಲ್.ಟಿ.ಟಿ.ಇ.ಯ ಬೆಂಬಲಿಗರು ಎಂದು ಒಂದು ಕಡೆ ಹೇಳುತ್ತಾರೆ. ಹಾಗೆಯೇ ರಾಜೀವ್ ಗಾಂಧಿಯವರನ್ನು ಕೊಲ್ಲತಕ್ಕಂಥ ಪಿತೂರಿಯಲ್ಲಿ ನೆಡುಮಾರನ್‌ರವರು ಭಾಗವಹಿಸಿದ್ದರು ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿರುವ ಶ್ರೀಮತಿ ಸೋನಿಯಾ ಗಾಂಧಿಯವರು ಹೇಳಿದ್ದಾರೆ. ಇವರ ಅಧ್ಯಕ್ಷರೆ ಈ ರೀತಿ ಹೇಳಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, ನೆಡುಮಾರನ್ ಒಳ್ಳೆಯ ಸ್ನೇಹಿತರು ಮತ್ತು ಹಳೆಯ ಕಾಂಗ್ರೆಸ್ಸಿಗರು. ಆದ್ದರಿಂದ ಇವರು ಸಂಧಾನಕಾರರಾಗಿ ಹೋಗಲು ಒಪ್ಪಿಗೆ ಕೊಟ್ಟಿದ್ದೇನೆ ಎನ್ನತಕ್ಕಂಥಾದ್ದು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸಂಧಾನ ಕಾರ್ಯಕ್ಕೆ ಆರ್. ಗೋಪಾಲ್‌ರವರು ಐದಾರು ಬಾರಿ ಹೋಗಿಬಂದಮೇಲೆ ನೆಡುಮಾರನ್‌ರವರು ಸಂಧಾನಕ್ಕಾಗಿ ಕಾಡಿಗೆ ತೆರಳಿದರು. ಆದರೆ ನೆಡುಮಾರನ್ ಸಂಧಾನದ ಸಮಯದಲ್ಲೂ ಕೂಡ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಗಿಲಿಲ್ಲ. ಕೊನೆಯದಾಗಿ ಆರನೆಯ ಬಾರಿಗೆ ಡಾ: ಭಾನು ಎಂಬುವರು ಸಂಧಾನಕ್ಕಾಗಿ ಕಾಡಿಗೆ ಹೋದರು.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ನೀಡಿರತಕ್ಕಂಥ ಹೇಳಿಕೆಯಲ್ಲಿ, ಸಂಧಾನ ಮಾಡುವುದಕ್ಕೋಸ್ಕರ ಯಾರ್‍ಯಾರಿಗೆ ಒಪ್ಪಿಗೆ ನೀಡಿರುವ ಬಗ್ಗೆ ಅಂದರೆ ಸಂಧಾನಕ್ಕಾಗಿ ಹೋಗಿರುವ ಮೂರು ಜನರ ಹೆಸರನ್ನು ನಮೂದಿಸಿದ್ದೇನೆ. ಆದರೆ ಬೇರೆ ಯಾರ ಹೆಸರನ್ನು ನಮೂದು ಮಾಡಿಲ್ಲ. ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ತಮ್ಮ ವಾದವನ್ನು ಈ ಸದನದ ಮುಂದೆ ಇಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ನೆಡುಮಾರನ್‌ರವರನ್ನು ಸಂಧಾನಕಾರರಾಗಿ ಕಳುಹಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಮ್ಮತಿ ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ತಾವು ಓದಿದ್ದೀರೋ ಅಥವಾ ಇಲ್ಲವೋ ನನಗಂತೂ ಗೊತ್ತಿಲ್ಲ.

SRI S.M. KRISHNA :— It has been denied in total. ತಾವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು The Tamilnadu Government has made a submission

before the Supreme Court on oath, that Nedumaran is not their official emissary, And I go by that statement of the Tamilnadu Government.

ಶ್ರೀ ಬಿ. ಸೋಮಶೇಖರ್ :— "ನೆಡುಮಾರನ್ ಸಂಧಾನಕ್ಕೆ ಕೃಷ್ಣ ಒಪ್ಪಿದ್ದರು" ನಕ್ಕೀರನ್ ಎಂಬ ಶೀರ್ಷಿಕೆಯ ಅಡಿಯಲ್ಲಿ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿಯನ್ನು ಈ ಸಂದರ್ಭದಲ್ಲಿ ಓದುತ್ತಿದ್ದೇನೆ. "ಅಪಹೃತ ಡಾ: ರಾಜ್ ಅವರ ಬಿಡುಗಡೆಗಾಗಿ ಸಂಧಾನ ನಡೆಸಲು ತಮಿಳು ರಾಷ್ಟ್ರೀಯ ಆಂದೋಲನದ ಅಧ್ಯಕ್ಷ ನೆಡುಮಾರನ್ ಅವರನ್ನು ಕಳುಹಿಸಲು ಕರ್ನಾಟಕ ಸರ್ಕಾರದ ಸಮ್ಮತಿ ಇತ್ತೇ? ಇಲ್ಲವೇ? ಇದು, ಕರ್ನಾಟಕ-ತಮಿಳುನಾಡು ಎರಡು ಸರ್ಕಾರಗಳ ನಡುವೆ ಗೊಂದಲ ಮೂಡಿಸಿದ ಪ್ರಶ್ನೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ನೆಡುಮಾರನ್ ಅವರನ್ನು ಕಳುಹಿಸಿದುದು ತಮಿಳುನಾಡು ಸರ್ಕಾರದ ನಿರ್ಧಾರ ಎಂದು ಹೇಳಿಕೆ ನೀಡಿದ ನಂತರ ಹುಟ್ಟಿಕೊಂಡ ಈ ವಿವಾದವನ್ನು ಈಗ ಸಂಧಾನದ ಮಂಚೂಣಿಯಲ್ಲಿರುವ ಗೋಪಾಲ್ ಅವರ ನಕ್ಕೀರನ್ ಪತ್ರಿಕೆ ಮುಂದುವರಿಸಿದೆ.

'ನಕ್ಕೀರನ್‌ನ ಇತ್ತೀಚಿನ ಸಂಪಾದಕೀಯದ ಪ್ರಕಾರ ನೆಡುಮಾರನ್ ಹಾಗೂ ಇತರ ಇಬ್ಬರನ್ನು ಕಾಡಿಗೆ ಕಳುಹಿಸುವ ಮೊದಲು ಎಸ್.ಎಂ. ಕೃಷ್ಣ ಅವರ ಜೊತೆ ಚರ್ಚಿಸಲಾಗಿತ್ತು. ಅವರ ಪೂರ್ಣ ಸಮ್ಮತಿಯನ್ನೂ ಪಡೆಯಲಾಗಿತ್ತು.'

ಈ ವಿಶೇಷ ಸಂಪಾದಕೀಯ ಬರೆದ ನಕ್ಕೀರನ್ ಸಹ ಸಂಪಾದಕ ಕಾಮರಾಜ್ ಅವರ ಪ್ರಕಾರ, ಆ ಬೆಳವಣಿಗೆಗಳು ನಡೆದುದು ಹೀಗೆ-

"ನಾಲ್ಕನೇ ಸಂಧಾನ ಯಾತ್ರೆಯಲ್ಲಿ ನರಹಂತಕ ವೀರಪ್ಪನ್ ಮತ್ತೆ ಸಂಧಾನಕ್ಕೆ ಬರುವಾಗ ನೆಡುಮಾರನ್, ಪ್ರೊ. ಕಲ್ಯಾಣಿ, ಸುಕುಮಾರ್ ಹಾಗೂ ಆಂಧ್ರಪ್ರದೇಶ ಮೂಲದ ವಕೀಲ ಬಾಲಗೋಪಾಲ ಅವರನ್ನೂ ಕರೆತರುವಂತೆ ಗೋಪಾಲ್‌ಗೆ ಷರತ್ತು ವಿಧಿಸಿದ್ದ.

ಇದನ್ನು ಸೆ. ೨೮ರಂದು ಕಾಮರಾಜ್ ಅವರು ಕರುಣಾನಿಧಿ ಗಮನಕ್ಕೆ ತಂದರು. ಆಗ, ಈ ವಿಷಯವನ್ನು ಎಸ್.ಎಂ. ಕೃಷ್ಣ ಅವರ ಗಮನಕ್ಕೆ ತನ್ನಿ, ಅವರ ಪ್ರತಿಕ್ರಿಯೆ ಆಧರಸಿ, ನಿರ್ಧಾರ ಕೈಗೊಳ್ಳೋಣ ಎಂದು ಕರುಣಾನಿಧಿ ಪ್ರತಿಕ್ರಿಯಿಸಿದರು.

ಅಲ್ಲದೆ, ಕರುಣಾನಿಧಿ ಅವರೇ ದೂರವಾಣಿ ಮೂಲಕ ಕೃಷ್ಣರನ್ನು ಸಂಪರ್ಕಿಸಿ, ಸೆ. ೨೯ರಂದು ಕೃಷ್ಣ ಅವರ ಭೇಟಿಗೆ ಸಮಯ ನಿಗದಿ ಮಾಡಿದರು.

ಅಂದೇ (ಸೆ.೨೮) ರಾತ್ರಿ ಬೆಂಗಳೂರಿಗೆ ಹೊರಟ ಕಾಮರಾಜು ಅವರು, ಸೆ. ೨೯ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಕಛೇರಿ ಸಂಪರ್ಕಿಸಿ, ಅವರ ಭೇಟಿಗೆ ಸಮಯ ಕೇಳಿದರು.

ರೇಸ್‌ಕೋರ್ಸ್ ರಸ್ತೆಯಲ್ಲಿನ ಕೆ.ಪಿ.ಸಿ. ಕಛೇರಿಯಲ್ಲಿ ಬೆಳಿಗ್ಗೆ ೧೧ಗಂಟೆಗೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡುವಂತೆ ಸೂಚನೆ ದೊರೆಯಿತು.

ಕಾಮರಾಜ್‌ರ ಪ್ರಕಾರ, ಭೇಟಿಯಲ್ಲಿ ಎಲ್ಲ ವಿವರಗಳನ್ನು ಕೇಳಿದ ಕೃಷ್ಣ ಅವರು ಹೇಳಿದ ಮಾತು 'ನೆಡುಮಾರನ್ ಅವರು ಹಳೆಯ ಕಾಂಗ್ರೆಸ್ಸಿಗೆ, ಅವರ ಬಗ್ಗೆ ನನಗೆ ಗೊತ್ತು, ಅವರು ಸಂಧಾನ ನಡೆಸಿ ರಾಜ್‌ಕುಮಾರ್ ಅವರನ್ನು ಬಿಡಿಸಿ ಕರೆತರುತ್ತಾರೆ ತಾನೇ'.

ಸುಮಾರು ೩೫ ನಿಮಿಷ ಚರ್ಚೆ ನಡೆಸಿದ ನಂತರ ಕೃಷ್ಣ ಅವರು ನೆಡುಮಾರನ್ ಮತ್ತು ಇತರ ಮೂವರನ್ನು ಸಂಧಾನಕ್ಕೆ ಕಳುಹಿಸಲು ಒಪ್ಪಿಗೆ ನೀಡಿದರು. ಚೆನ್ನೈಗೆ ಹಿಂದಿರುಗಿದ ಕಾಮರಾಜ್, ಮಾತುಕತೆಯ ವಿವರವನ್ನು ಕರುಣಾನಿಧಿ ಅವರ ಗಮನಕ್ಕೆ ತಂದರು.

ನಂತರ ಮೂರು ಜನರನ್ನು ಕಾಡಿಗೆ ಕಳುಹಿಸಲು ನಾಲ್ವರನ್ನು ಸಂಪರ್ಕಿಸಲಾಯಿತು. ಬಾಲಗೋಪಾಲ ಅವರು ನಿರಾಕರಿಸಿದರೆ, ಇತರ ಮೂವರು (ನೆಡುಮಾರನ್, ಸುಕುಮಾರ್, ಪ್ರೊ. ಕಲ್ಯಾಣಿ) ಸಮ್ಮತಿಸಿದರು.

ಗೋಪಾಲ್ ಹಾಗೂ ಇತರ ಮೂವರನ್ನು ಕಾಡಿಗೆ ಕಳುಹಿಸಲು ವ್ಯವಸ್ಥೆ ಮಾಡಲಾಯಿತು. ಮೂರು ಜನರಿಗೆ ಕಾಡಿಗೆ ಹೋಗಲು ಎರಡೂ ಸರ್ಕಾರಗಳು ಸಮ್ಮತಿಸಿರುವ ಪತ್ರವನ್ನು ನೀಡಲಾಯಿತು.

ಎಲ್ಲ ಸಿದ್ಧತೆಗಳು ಮುಗಿದ ನಂತರ ಅ. ೮ ರಂದು ನರಹಂತಕನ ಜತೆಗೆ ಐದನೇ ಬಾರಿ ಸಂಧಾನ ನಡೆಸಲು ನಾಲ್ವರ ತಂಡ ಕಾಡಿಗೆ ತೆರಳಿತು.

'ನೆಡುಮಾರನ್ ಅವರನ್ನು ಕಳುಹಿಸುವ ಮೊದಲು ಕೃಷ್ಣರನ್ನು ಸಂಪರ್ಕಿಸಿ, ಸಮ್ಮತಿ ಪಡೆಯಲಾಗಿತ್ತು. ಅವರಿಗೆ ಎಲ್ಲ ಗೊತ್ತಿತ್ತು. ಆದರೂ ಸೋನಿಯಾ ಗಾಂಧಿ ಅವರು ಕರ್ನಾಟಕ ಸರ್ಕಾರಕ್ಕೆ ಗೊತ್ತಿರಲಿಲ್ಲ. ಎಂದು ಹೇಳಿಕೆ ನೀಡಿದಾಗ, ಎಸ್.ಎಂ. ಕೃಷ್ಣ ಅವರು ರಾಜಕೀಯ ಲಾಭಕ್ಕಾಗಿ ಮೌನವಾಗಿದ್ದರು. ಎನ್ನುವುದು ಕಾಮರಾಜ್ ಅವರ ವ್ಯಾಖ್ಯಾನ ಈ ರೀತಿಯಾಗಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

SRI S.M. KRISHNA :— That is his version. I depend upon the version of the Tamilnadu Government made before the Supreme

Court. I do not depend upon press conferences. I do not attach any value to what a proprietor of news weekly writes for himself on his behalf. I leave it to the people whether they believe me or believe him.

SRI B. SOMASHEKAR :— Is it not a fact that they have met on 29th September at your official residence to get your clearnace whether Nedumaran should be sent as official emissary or not? Is it not a fact that you have said Nedumaran is my good friend?

SRI S.M. KRISHNA :— It is not relevant.

SRI. B. SOMASHEKAR :— Relevant or false....How it is not relevant? Nedumaran has gone to Veerappan....

SRI S.M. KRISHNA :— I have taken a oath to speak the truth here. But he has not taken oath to write the truth.

SRI. B. SOMASHEKAR :— What I ask is, whether it is a fact or not? If you deny it I will agree, If it is not a fact, then I will agree.

SRI S.M. KRISHNA :— You leave it at that.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಇಲ್ಲಿ ಓದಿದ್ದೇನೆ. ಹಾಗೆಯೇ ಇದನ್ನು ಇವತ್ತಿನದಿವಸ ಲಕ್ಷಾಂತರ ಜನ ಓದುತ್ತಾರೆ. ಡಾ: ರಾಜ್‌ಕುಮಾರ್‌ರವರು ಬಿಡುಗಡೆ ಆದಮೇಲೆ ನೆಡುಮಾರನ್ ರವರನ್ನು ಹೊಗಳಿರತಕ್ಕಂಥದ್ದು ಮತ್ತು ಕೃತಜ್ಞತೆ ಸಲ್ಲಿಸಿರುವುದನ್ನು ನಾವೆಲ್ಲರೂ ಸಹ ನೋಡಿದ್ದೇವೆ. ಸಂಧಾನಕಾರರಾಗಿ ಡಾ: ಭಾನುರವರು ಸಹಾಯ ಮಾಡಿದ್ದಾರೆ. ಹಾಗೆಯೇ ಇವರ ಜೊತೆ ದೇವಶಕ್ತಿ, ಷಣ್ಮುಗ ಸುಂದರಂ ಮತ್ತು ಮಣಿ, ಇವರೆಲ್ಲರೂ ಸಹ ಸಂಧಾನಕ್ಕಾಗಿ ಹೋಗಿದ್ದರು. ಇವರೆಲ್ಲರೂ ಎಲ್ಲಿಂದ ಬಂದರು? ಯಾವಾಗ ಹುಟ್ಟಿಕೊಂಡರು? ಇವರು ಯಾರು? ಇದೊಂದು ಅರ್ಥವಾಗುತ್ತಿಲ್ಲ. ವೀರಪ್ಪನೇ ಅಪಹರಣ ಮಾಡಿದ್ದರೆ ನನಗೆ ಇಂತಿಷ್ಟು ದುಡ್ಡು ಕೊಡಿ ಅಥವಾ ಕೆಲವರನ್ನು ಜೈಲಿನಿಂದ ಬಿಡುಗಡೆ ಮಾಡಿ ಅಥವಾ ನನಗೆ ಕ್ಷಮಾದಾನ ಕೊಡಿ ಎಂದು ಕೇಳಬಹುದಾಗಿತ್ತು. ಅವರೇನು ಹತ್ತು ಬೇಡಿಕೆ ಹಾಕಿದ್ದರೂ ಇವು ನಿಜವಾಗಲು ವೀರಪ್ಪನ್ ಹಾಕಿರುವ ಬೇಡಿಕೆಗಳೇ?

ಅಥವಾ ವೀರಪ್ಪನ್‌ಗೆ ಬೆಂಬಲ ನೀಡಿರುವ ಎಲ್.ಟಿ.ಟಿ.ಇ. ಅಥವಾ ಇವರ ಕೆಳಗಡೆ ಕೆಲಸ ಮಾಡುವ ಸಂಘಟನೆಗಳು ಏನಾದರೂ ಹಾಕಿದ್ದಾರೆಯೇ? ತಮಿಳು ಭಾಷೆಯನ್ನು ಎರಡನೇ ಭಾಷೆಯನ್ನಾಗಿ ಮಾಡಬೇಕು ಎನ್ನುವ ಬೇಡಿಕೆಯ ಜೊತೆಗೆ ಇಂಥ ಹಲವಾರು ಬೇಡಿಕೆಗಳನ್ನು ನಿಜವಾಗಲೂ ಹಾಕಿದವರು ಯಾರು? ಅವರಿಗೂ ವೀರಪ್ಪನ್‌ಗೂ ಏನು ಸಂಬಂಧ? ನಕ್ಕೀರನ್ ಗೋಪಾಲ್ ಎರಡೂ ಮೂರು ಬಾರಿ ಸಂಧಾನಕ್ಕೆ ತೆರಳಿ ಬಿಡುಗಡೆಯಾದ ನಂತರ ಸುಮ್ಮನಾದರು. ನೆಡುಮಾರನ್ ಕೂಡ ಕೆಲವು ಸಂದರ್ಭದಲ್ಲಿ ಹೋಗಲಿಕ್ಕೆ ಆಗಲಿಲ್ಲ. ಕೊನೆಗೆ ಡಾಕ್ಟರ್ ಎಂದು ಹೇಳಿಕೊಂಡಿರುವ ಆ ಭಾನು, ನಾನು ಡಾಕ್ಟರ್ ಅಲ್ಲ, ನಾನು ಗ್ರಾನೈಟ್ ವ್ಯವಹಾರ ಮಾಡುತ್ತಿದ್ದೇನೆಂದು ಹೇಳಿಕೊಂಡಿದ್ದಾಳೆ. ನಾನು ಪ್ರಾಕ್ಟೀಸ್ ಬಿಟ್ಟು ಈ ವ್ಯವಹಾರ ಮಾಡುತ್ತಿದ್ದೇನೆಂದು ಆಕೆ ಹೇಳಿಕೊಂಡಿದ್ದಾಳೆ. ಮೊದಲು ಇವರೆಲ್ಲರೂ ವೀರಪ್ಪನ್‌ನನ್ನು ಕದ್ದು ಸಂಪರ್ಕ ಮಾಡುತ್ತಿದ್ದರು. ಈ ಅಪಹರಣದ ಘಟನೆಯಿಂದ ಇವರೆಲ್ಲರಿಗೂ ಲೀಗಲ್ಲಾಗಿ ಪ್ರವೇಶ ಸಿಕ್ಕಿತು. ಮೊದಲು ಕದ್ದು ಮೊಬೈಲ್ ಅಥವಾ ಬೇರೆ ಕಡೆಯಿಂದ ಇಂಥ ಜಾಗದಲ್ಲಿ ಬರುತ್ತೇನೆಂದು ಹೇಳಿಕೊಂಡಿದ್ದಂಥವರು ಈಗ ಕಾಡಿಗೆ ಸುಲಭವಾಗಿ ಹೋಗಿ ಬರುತ್ತಾರೆ. ಈಗ ಏನಾಗಿದೆ ಎಂದರೆ, ಅವರಿಗೆ ನೇರವಾಗಿ ಹೋಗಿ ಅಲ್ಲಿ ಮಾತನಾಡಿ ಏನೇನು ಪಿತೂರಿ ಮಾಡಬಹುದೋ? ಅದೆಲ್ಲವನ್ನೂ ಮಾಡಲಿಕ್ಕೆ ಸರ್ಕಾರ ವ್ಯವಸ್ಥೆ ಮಾಡಿಕೊಟ್ಟಹಾಗೆ ಆಯಿತು. ಇದರ ಹಿನ್ನೆಲೆ ಮತ್ತು ಇದಕ್ಕೆ ಕಾರಣ ಏನು ಎಂಬುದನ್ನು ನಾವಿಂದು ತಿಳಿಯಬೇಕಾಗುತ್ತದೆ. ಇದರ ಜೊತೆಗೆ ನೆಡುಮಾರನ್ ಹಾಗೂ ಗೋಪಾಲ್ ಕೈಯಲ್ಲಿ ಆಗದೇ ಇರತಕ್ಕಂಥ ಕೆಲಸ ಹಾಗೂ ಮಾನ್ಯ ಮುಖ್ಯಮಂತ್ರಿಗಳು, 15ನೇ ತಾರೀಖು ಬಿಡುಗಡೆಯಾಗುತ್ತಾರೆಂದು ಏನು ಕಾಕತಾಳಿಯವಾಗಿ ಹೇಳಿದ್ದನ್ನು ನೋಡಿದರೆ ಬಹುಶಃ ನನಗೆ ಏನು ಅನ್ನಿಸುತ್ತದೆಂದರೆ, ಇವರು ಬೇರೆ ಯಾರನ್ನಾದರೂ ಬಿಡುಗಡೆ ಮಾಡಿಸಿಕೊಂಡು ಬರಲಿಕ್ಕೆ ಕಳುಹಿಸಿದ್ದರೇನೋ ಎಂದು ಅನ್ನಿಸುತ್ತದೆ. ಮಾನ್ಯ ಶಿವಕುಮಾರ್‌ರವರೆ, ಏಕೆಂದರೆ ಇದರಲ್ಲಿ ಬಹಳ ಚಾಕಚಕ್ಯತೆ ಇರತಕ್ಕಂಥವರು, ರಾಜ್‌ಕುಮಾರ್ ಬಿಡುಗಡೆಯಾಗಬೇಕು ಎನ್ನುವ ಕಾರಣದಿಂದ ಬೇರೆ ಯಾರಿಂದ ಸಾಧ್ಯವಿದೆಯೋ, ವೀರಪ್ಪನ್ ಜೊತೆಗೆ ಯಾರ್‍ಯಾರಿಂದ ಏನೇನು ಸಂಪರ್ಕ ಇದೆಯೋ ಅದನ್ನೆಲ್ಲಾ ಹುಡುಕಿದ್ದಾರೆಯೇ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:— ಅವರಿಗೂ ಗೊತ್ತಿದೆ, ಅವರು ಬಾರ್ಡರ್ ಏರಿಯಾದವರು ವೀರಪ್ಪನ್ ಏರಿಯಾ ಗೊತ್ತಿದೆ, ವೀರಪ್ಪನ್ ಎಲ್ಲಿದ್ದಾನೆಂಬುದು ಗೊತ್ತಿದೆ. ಬಹಳ ವಿಚಾರಗಳು ಗೊತ್ತಿದೆ. ಇನ್ನು ಏನೇನು ಒಳಗೆ ಸಂಪರ್ಕ ನಡೆಯಿತು ಎಂಬುದು ಗೊತ್ತಿದೆ. ಅವರ ಸರ್ಕಾರದಲ್ಲಿ ಏನೇನು ಮಾಡಿದ್ದಾರೆಂಬುದು ಗೊತ್ತಿದೆ, ಈಗ ಏನು ಮಾಡಿದ್ದಾರೆಂಬುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನನಗೆ ಇಲ್ಲಿ ಅವಕಾಶ ಸಿಕ್ಕಿದರೆ, ಮಾನ್ಯ ಸಭಾನಾಯಕರು ನನಗೆ ಎರಡು ನಿಮಿಷ ಪರ್ಮಿಷನ್ ಕೊಟ್ಟರೆ ನಾನು ಏನು ಹೇಳಬೇಕೆಂದಿದ್ದೇನೋ ಅದನ್ನೆಲ್ಲಾ ಹೇಳುತ್ತೇನೆ.

(ಗೊಂದಲ)

SRI B. SOMASHEKAR :— I want you to expose everything on me. I am prepared to be exposed.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಯಾರ್ಯಾರಿಗೆ ಏನೇನು ಗೊತ್ತಿದೆ ಅದನ್ನೆಲ್ಲಾ ಹೇಳುವುದಕ್ಕೆ ಅವಕಾಶ ಕೊಡಿ. ಇನ್ನು ಮುಂದೆಯಾದರೂ ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸುವುದು ಬೇಡ. ಮುಂದೆ ಇಂಥ ಘಟನೆ ಸಂಭವಿಸದಿರಲಿ. ಅವರಿಬ್ಬರಿಗೂ ಏನೇನು ಗೊತ್ತಿದೆ ಅವರಿಗೂ ಅದನ್ನು ಚರ್ಚೆ ಮಾಡಿ ಇಲ್ಲಿ ಹೇಳುವುದಕ್ಕೆ ನೀವು ಅವಕಾಶ ಕೊಡಬೇಕು.

ಶ್ರೀ ಬಿ. ಸೋಮಶೇಖರ್ :— ವೀರಪ್ಪನ್ ನನಗೆ ಗೊತ್ತಿದ್ದರೆ ಯಾವ ರೀತಿ ಗೊತ್ತಿದ್ದಾರೆ? ನಮಗೂ ಅವರಿಗೂ ಯಾವ ರೀತಿ ಸ್ನೇಹ ಇದೆ? ಅದನ್ನು ದಯವಿಟ್ಟು ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ :— ನೀವು ಪತ್ರಿಕೆ ಓದಿ ಅನುಮಾನ ಇದೆ, ಅನುಮಾನ ಇದೆ ಎಂದು ನೀವೇನು ಹೇಳಿದಿರಿ ಅದೇ ಅನುಮಾನ ಇದೆ ಎಂದು ನಾನು ಹೇಳಿದ್ದು.

(ಗೊಂದಲ)

ಶ್ರೀ ಸಿ. ಭೈರೇಗೌಡ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಅವರದೇ ಮೂಲದಿಂದ ಬಂದಿರುವ ಸುದ್ದಿಯಾಗಲಿ, ಪತ್ರಿಕೆಗಳಿಂದ ಬಂದ ಸುದ್ದಿಯಾಗಲಿ, ಕೇಳಿದ ಸುದ್ದಿಯಾಗಲಿ, ಅವರಿಗೆ ಗೊತ್ತಿರುವ ವಿಷಯವನ್ನು ಸದನದ ಮೂಲಕ ಜನತೆಗೆ ತಿಳಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಯಾರು ಯಾರು ಏನು ಎಂಬುದು ಇವರಿಗೆ ಗೊತ್ತಿಲ್ಲದ ವಿಚಾರಗಳಲ್ಲಿ ಅನೇಕ ವಿಚಾರಗಳು ನನಗೆ ಗೊತ್ತಿವೆ ಎಂದು ಹೇಳತಕ್ಕಂಥಾದ್ದು ಹಾಗೂ ಅದಕ್ಕೆ ಅವಕಾಶ ಕೊಟ್ಟರೆ ನಾನು ಇಲ್ಲಿ ಹೇಳುತ್ತೇನೆ ಎಂದು ಹೇಳಿದ್ದಾರೆ. ಈ ಸದನದಲ್ಲಿ ಮಾತನಾಡತಕ್ಕಂಥ ಸದಸ್ಯರು ನಿರ್ಭೀತಿಯಿಂದ ಮಾತನಾಡಬೇಕಾಗತ್ತದೆ. ಯಾರ ಭಯ, ಯಾರ ಮುಲಾಜು, ಯಾವುದೇ ಭಯ ಇಲ್ಲದೇ ಮಾತನಾಡಬೇಕಾಗುತ್ತದೆ. ಹೀಗಾಗಿಯೇ ಈ ಸಭೆಗೆ ವಿಶೇಷವಾದ ಸ್ಥಾನಮಾನವಿದೆ. ಹೀಗಿರುವಾಗ ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಈ ರೀತಿಯಾಗಿ ಹೆದರಿಕೆ ಹಾಕಿ ನಮಗೆ ಗೊತ್ತಿದೆ, ಹೇಳುತ್ತೇನೆಂದು ಹೇಳತಕ್ಕಂಥಾದ್ದು ಒಳ್ಳೆಯ ಸಂಪ್ರದಾಯ ಅಲ್ಲ. ಈ ಸದನದಲ್ಲಿ ನಿರ್ಭೀತಿಯಿಂದ ಮಾತನಾಡುವುದಕ್ಕೆ ಎಲ್ಲಾ ಮಾನ್ಯ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಉಪಾಧ್ಯಕ್ಷರೆ, ನಿರ್ಭೀತಿಯಿಂದ ಮಾನ್ಯ ಸದಸ್ಯರು ಮುಕ್ತವಾಗಿ ವಿಚಾರಗಳನ್ನು ಹೇಳುವುದಕ್ಕೆ ಮುಕ್ತ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು :— ಮಾನ್ಯ ಸೋಮಶೇಖರ್‌ರವರು ಶಿವಕುಮಾರ್‌ರವರ ಹೆಸರನ್ನು ಹೇಳಿ ಕೆಣಕಿದ್ದಕ್ಕೆ ಅವರು ಈ ರೀತಿ ಹೇಳಬೇಕಾಯಿತು, ಇಲ್ಲದಿದ್ದರೆ ಇಂಥ ಸಂದರ್ಭ ಬರುತ್ತಿರಲಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಉಪಾಧ್ಯಕ್ಷರೆ, ತಾವು ಈಗ ಏನು ಹೇಳಿದಿರಿ ಅದೇ ಅಭಿಪ್ರಾಯವನ್ನು ನಾನು ಇಲ್ಲಿ ಹೇಳಬೇಕೆಂದು ಎದ್ದು ನಿಂತೆ. ಮಾನ್ಯ ಸೋಮಶೇಖರ್‌ರವರು ಮಾತನಾಡುವಂಥ ಸಂದರ್ಭದಲ್ಲಿ ನಾವು ಮೌನವಾಗಿ ಅವರ ಭಾಷಣವನ್ನು ಕೇಳುತ್ತಿದ್ದೆವು. ಅವರು ಪ್ರತ್ಯೇಕವಾಗಿ ಸುಮ್ಮನೆ ಕುಳಿತಿದ್ದವರನ್ನು, ಏನ್ರೀ, ಶಿವಕುಮಾರ್‌ರವರೆ ಎಂದು ಕೆಣಕಿ ಇದಕ್ಕೆ ಮಾನ್ಯ ಭೈರೇಗೌಡರವರು ಇವರ ಸಹಾಯಕ್ಕೆ ಬರುವುದಾದರೆ ಇದಕ್ಕೆ ನಾವು ಏನು ಹೇಳಬೇಕು? ಮೌನವಾಗಿ ತಾವು ಹೇಳುವ ಮಾತುಗಳನ್ನು ನಾವಿಂದು ಕೇಳುತ್ತಿದ್ದೇವೆ. ಸಂಪೂರ್ಣವಾದ ಮಾಹಿತಿ ಒದಗಿಸಲಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗ್ಯೂ, ನಾವು ಇಲ್ಲಿ ಸುಮ್ಮನೆ ಕುಳಿತಿದ್ದರೆ ನೀವು, ಏನ್ರೀ ಸಗೀರ್‌ರವರೆ ಎಂದು ನಮ್ಮನ್ನು ಕೆಣಕಿದರೆ ನಾವು ಮಾತನಾಡಬೇಕೇ ಬೇಡವೇ ನೀವೆ ಹೇಳಿ. ಅವರು ಮಾನ್ಯ ಶಿವಕುಮಾರ್‌ರವರನ್ನು ಏಕೆ ಕೆಣಕಬೇಕಾಗಿತ್ತು? ಅವರು ಕೆಣಕಿದ್ದರಿಂದ ಅವರು ಎದ್ದು ಮಾತನಾಡಬೇಕಾಯಿತು.

ಶ್ರೀ ಅರಗ ಜ್ಞಾನೇಂದ್ರ :— ಮಾಧ್ಯಮಗಳು ಕೂಡ ಹೀಗೆ ಸಾಕಷ್ಟು ವಿಚಾರಗಳನ್ನು ಬರೆಯುತ್ತಿವೆ. ಅದೇ ರೀತಿ ರಾಜಕಾರಣಿಗಳು, ಸಾರ್ವಜನಿಕರು ಕೂಡ ತಮ್ಮ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಆದರೆ, ಈ ಸದನದಲ್ಲಿ ಒಬ್ಬ ಜವಾಬ್ದಾರಿಯಿರುವ ಮಂತ್ರಿಗಳು, ಮತ್ತೊಬ್ಬರು ಮಾಜಿ ಮಂತ್ರಿಗಳು ತಮಗೆ ಏನು ಗೊತ್ತಿದೆ ಅದನ್ನು ಹೇಳುವುದಕ್ಕೆ ಅವಕಾಶ ಕೇಳುತ್ತಿದ್ದಾರೆ, ದಯಮಾಡಿ ತಾವು ಅವಕಾಶ ಕೊಡಬೇಕು. ಈ ರಾಜ್ಯದ ಜನರನ್ನು ಕತ್ತಲಲ್ಲಿ ಇಡುವ ಅವಶ್ಯಕತೆ ಇಲ್ಲ. ಅವರಿಬ್ಬರಿಗೂ ಮುಕ್ತವಾದ ಅವಕಾಶ ಕೊಡಿ, ಅವರಿಬ್ಬರೂ ಸತ್ಯವಾಗಿರುವ ಅಂಶವನ್ನು ಇಲ್ಲಿ ಪ್ರತಿಪಾದನೆ ಮಾಡಲಿ, ಇದರಿಂದಾಗಿ ಇಡೀ ಕರ್ನಾಟಕದ ಜನತೆಗೆ ಸತ್ಯ ಏನು ಎಂಬುದು ಗೊತ್ತಾಗಲಿ.

ಶ್ರೀ ಬಿ. ಸೋಮಶೇಖರ್ :— ಕನಕಪುರದ ಪಕ್ಕದಲ್ಲಿ ನಾನು ಇದ್ದೇನೆ, ಕನಕಪುರ, ಸಾತನೂರು, ಮಳವಳ್ಳಿ, ಮದ್ದೂರು, ಇವು ಎಲ್ಲಾ ಬಾರ್ಡರ್ ಏರಿಯಾಗಳು. ನಮ್ಮಲ್ಲೂ ಗ್ರಾನೈಟ್ ಬ್ಯುಸಿನೆಸ್ ನಡೆಯುತ್ತಿದೆ. ಕೊಳ್ಳೇಗಾಲದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ.

ದಯಮಾಡಿ ತಾವು ಹೇಳಬೇಕು, ನಾನೆಷ್ಟು ಗ್ರಾನೈಟ್‌ಗಳಲ್ಲಿ ಇನ್‌ವಾಲ್ವ್ ಆಗಿದ್ದೇನೆ, ಈ ವಿಚಾರ ದಯಮಾಡಿ ಹೇಳಬೇಕಾಗುತ್ತದೆ, ಏಕೆಂದರೆ ಈ ವಿಚಾರ ಜನಕ್ಕೆ ಗೊತ್ತಾಗಬೇಕಾಗುತ್ತದೆ. ನಾನೆಷ್ಟು ಗ್ರಾನೈಟ್ ಸಾಗಾಣಿಕೆ ಮಾಡಿಸುತ್ತಿದ್ದೇನೆ, ನನಗೂ ವೀರಪ್ಪನ್‌ಗೂ ಯಾವ ರೀತಿ ಸಂಬಂಧವಿದೆ, ಬೇನಾಮಿ ಹೆಸರಿನಲ್ಲಿ ಸಬ್-ಇನ್ಸ್‌ಪೆಕ್ಟರ್‌ಗಳನ್ನು ಅಡ್ಜಸ್ಟ್ ಮಾಡಿಕೊಂಡು ಕಳ್ಳತನದಿಂದ ಯಾವ ರೀತಿ ಓಡಿಸುತ್ತಿದ್ದೇನೆ, ನನ್ನ ಬಗ್ಗೆ ಗೊತ್ತಿದೆ ಎಂದು ಹೇಳಿದಿರಲ್ಲಾ ಏನೇನು ಗೊತ್ತಿದೆ ದಯಮಾಡಿ ತಾವು ಹೇಳಬೇಕು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :— ಅದನ್ನೆಲ್ಲಾ ನಾನೇಕೆ ಮಾತನಾಡಲಿಕ್ಕೆ ಹೋಗಲಿ.

ಶ್ರೀ ಗುಂಡಪ್ಪ ವಕೀಲ್ :— ಇಲ್ಲಿಯವರೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ಲೀಡರ್‌ಗಳು ಒಳಗೆ ಏನು ಮಾತನಾಡಿದ್ದಾರೆಂಬುದು ನಮಗೇನೂ ಗೊತ್ತಿಲ್ಲ. ಶಿವಕುಮಾರ್‌ರವರೆ, ನೀವು ಮಾತನಾಡಬೇಕು, ಮಾನ್ಯ ಸೋಮಶೇಖರ್‌ರವರು ಮಾತನಾಡಬೇಕು, ನಾವು ಕೂಡ ನಿಮ್ಮ ಮಾತನ್ನು ಕೇಳುತ್ತೇವೆ, ಜನತೆ ಕೂಡ ನಿಮ್ಮ ಮಾತನ್ನು ಕೇಳಲಿ, ಲದು ಏನು ಧಾರವಾಹಿ ನಡೆದಿದೆ? ಅದೆಲ್ಲಾ ಕ್ಲಿಯರಾಗಿ ಗೊತ್ತಾಗಬೇಕು. ಆ ಎಲ್ಲಾ ವಿಚಾರಗಳನ್ನು ಸದನ ಮೂಲಕ ಜನತೆ ಮುಂದೆ ಇಡಿ.

SRI B. SOMASHEKAR :— "worry over LTTE Men.." ``Direct involvement of blatantly pro-LTTE negotiaters for securing release of Kannada Film Star Dr.Rajkumar, has led some apprehensions that fringe militant outfits which draw inspiration from the LTTE, might now feel encouraged to set up voilent activities. Rescue Mission leader, Nedumaran of the Tamil Nationalist Movement, who is acknowledged LTTE supporter and has compaigned across the globe for clemency for those condemned to death in the Rajiv Gandhi Assassination case. So his team-mates, Prof. Kalyani and Sukumaran, carrying the tag of human rights activities , it is believed that they too have links with pro-LTTE groups. ಇವರೆಲ್ಲರೂ ಹೋಗಿದ್ದಾರೆ, ಬಿಡುಗಡೆ ಮಾಡಿದ್ದಾರೆಂದು ಹೇಳಿದಿರಿ, ಈ ವಿಚಾರವಾಗಿ ನಾವುಗಳು ಸರ್ಕಾರಕ್ಕೂ ಹಾಗೂ ಅವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸಿದ್ದೇವೆ. ಮತ್ತೊಂದು ಕಡೆ ಏನು ಹೇಳಿದ್ದಾರೆಂದರೆ.. "Do not send Nedumaran Leader". Senior Congress Leader and former TNCC President. Mr. M.P. Subramanyam objected to sending the Tamil Nationalist Movement Leader Nedumaran as one of the Official

emissaries to negotiate with Forest Bandit Veerappan to secure the release of Rajkumar, who had been abducted by him. Subramanyam said in a Press Conference in Chennai that Nedumaran, who had declared his nationality as Tamil, was an anti-national and had connections with various Tamil separatist groups. He said Nedumaran should be presecuted for declaring his nationality as Tamilian. Nedumaran is a known supporter of the outlawed LTTE shoud not go to forest to talk to Veerappan. Describing the area of operation as Vauvuniya of Tamilnadu, an apparent reference to LTTE areas of operation in Sri Lanka, he said the sandalwood smuggler has become a leader of Tamil separatists force, because of his connection with terrorists groups." Nedumaran who claimed to be a co-ordinator of Tamil National groups was going to forest only to exchange views with members of Tamil National Liberation Army and Tamil National Retrieval Groups." ನಾನು ಈಗಾಗಲೇ ಹೇಳಿದಹಾಗೆ, ಇವರೆಲ್ಲರೂ ಸಹ ಮೊದಲು ಕದ್ದು ಕಾಡಿಗೆ ಹೋಗುತ್ತಿದ್ದರು. ಆದರೆ, ಈ ಒಂದು ಘಟನೆ ನಡೆದ ಮೇಲೆ ರಾಜಾರೋಷವಾಗಿ ಕಾಡಿಗೆ ಹೋಗತಕ್ಕಂಥ ಒಂದು ಅವಶ್ಯಕತೆ ಇವರಿಗೆ ಸಿಕ್ಕಿತು. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಹೇಳಿಕೆಯಲ್ಲಿ ಏನು ಹೇಳಿದ್ದಾರೆಂದರೆ, ಆದರೆ, ಈ ಕ್ರಮಗಳು ಯಾವುದೇ ವಿಚ್ಛಿದ್ರಕಾರಿ ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಒತ್ತಾಸೆಯಾಗಿರುವುದಿಲ್ಲ ಮತ್ತು ಇಂಥ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡುವುದು ನಮ್ಮ ಇಚ್ಛೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಕರ್ನಾಟಕದ ಕರಾವಳಿ ಜಿಲ್ಲೆಗಳು ಹಾಗೂ ಬೆಂಗಳೂರು ನಗರವನ್ನು ಯಾವುದೇ ಸಮಾಜ ವಿರೋಧಿ ಮತ್ತು ರಾಷ್ಟ್ರವಿರೋಧಿ, ಭೂಗತ ಮಾಫಿಯ ಶಕ್ತಿಗಳಿಂದ ಮುಕ್ತವಾಗಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಇಂಥ ವಿಚ್ಛಿದ್ರಕಾರಿ ಶಕ್ತಿಯ ಚಟುವಟಿಕೆಗಳ ಬಗ್ಗೆ ಸತತವಾಗಿ ನಿಗಾವಹಿಸಿ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದು. ಈ ಬಗ್ಗೆ ರಾಜ್ಯ ಪೊಲೀಸರಿಗೆ ಸ್ಪಷ್ಟ ಸೂಚನೆಯನ್ನು ನೀಡಲಾಗಿದ್ದು, ಅವರು ಸದಾ ಸನ್ನದ್ಧರಾಗಿರಲು ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಇದರ ಅರ್ಥ ಏನೆಂದರೆ, ಇಂಥ ವಿಚ್ಛಿದ್ರಕಾರಿ ಶಕ್ತಿಗಳು ಮತ್ತು ಸ್ಮಗಲರ್ಸ್, ಇಂಥವರ ಜೊತೆ ಯಾವುದೇ ರೀತಿಯಾಗಿ ಶಾಮೀಲಾಗುವುದಿಲ್ಲವೆಂದು ಹೇಳಿ, ಇಲ್ಲಿ ಡೌಟ್‌ಫುಲ್ ಕ್ಯಾರೆಕ್ಟರ್ಸ್‌ರವರ ಜೊತೆ ಸಂಧಾನ ಮಾಡಿಕೊಂಡು, ಇವರ ಮೂಲಕ ಬಿಡುಗಡೆಆಗಿದ್ದರೆ, ಇನ್ನು ಮುಂದೆ ನಮ್ಮ ಸರ್ಕಾರದವರು ವೀರಪ್ಪನ್‌ನನ್ನು ನಿರ್ದಾಕ್ಷಿಣ್ಯವಾಗಿ ಹಿಡಿಯುತ್ತಾರೆ ಅಥವಾ ಶೂಟ್ ಮಾಡುತ್ತಾರೆ ಎನ್ನತಕ್ಕಂಥಾದ್ದಕ್ಕೆ ಯಾವ ಗ್ಯಾರಂಟಿ ಇದೆ?

ಇದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಇವತ್ತಿನಿಂದ ರಾಜ್ಯ ಸರ್ಕಾರ ಕಾರ್ಯಾಚರಣೆ ಪ್ರಾರಂಭ ಮಾಡುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದರೆ ನೆಡುಮಾರನ್ ಇಲ್ಲಿ ಬಂದು ಹೋದ ಮೇಲೆ, ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ನಾನು ಆಶ್ವಾಸನೆ ಕೊಟ್ಟಿದ್ದೇನೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಇವತ್ತಿನದಿವಸ ನಮ್ಮೆಲ್ಲರಿಗೂ ಬೇಕಾಗಿರತಕ್ಕಂಥ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ. ಇದು ನಮಗೆಲ್ಲ ಬಹಳ ಸಂತೋಷವಾದ ವಿಚಾರ. ಆದರೆ ಯಾವ ಒಂದು ಪರಿಸ್ಥಿತಿಯಲ್ಲಿ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ ಇದರ ಹಿನ್ನೆಲೆಯಲ್ಲಿ ಯಾರ್‍ಯಾರು ಇದ್ದಾರೆ? ಈ ಸಂದರ್ಭದಲ್ಲಿ ಏನೇನು ಹೊಂದಾಣಿಕೆ ಮಾಡಿಕೊಂಡಿದ್ದಾರೆ? ಹಾಗೆಯೇ ಏನೇನು ಷರತ್ತುಗಳನ್ನು ಇವತ್ತು ಇದರೊಳಗಡೆ ಸೇರಿಸಿಕೊಂಡಿದೆ? ಇದಕ್ಕೆ ಯಾರ್‍ಯಾರನ್ನು ಉಪಯೋಗಿಸಿಕೊಂಡಿದ್ದಾರೆ? ಎನ್ನತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಡಾ: ರಾಜ್‌ಕುಮಾರ್ ಅಪಹರಣದ ಹಿನ್ನೆಲೆಯಿಂದ ಎಷ್ಟು ಟ್ಯಾಕ್ಸ್ ಲಾಸ್ ಆಗಿದೆ? ಇದರಲ್ಲಿ ಸಾರಿಗೆಯಿಂದ ಎಷ್ಟು ಲಾಸ್ ಆಗಿದೆ? ಮತ್ತು ಎಷ್ಟು ಮರ್ಡರ್ಸ್ ಆಗಿದೆ? ಇದರ ಪರಿಣಾಮದಿಂದ ಕಮರ್ಷಿಯಲ್ ಟ್ಯಾಕ್ಸ್ ಎಷ್ಟು ಲಾಸ್ ಆಗಿದೆ? ಹಾಗೆಯೇ ಪ್ರವಾಸೋದ್ಯಮದಿಂದ ಎಷ್ಟು ಲಾಸ್ ಆಗಿದೆ? ಹೋಟೆಲ್ ವ್ಯವಹಾರದಲ್ಲಿ ಎಷ್ಟು ಲಾಸ್ ಆಗಿದೆ? ಹಾಗೆಯೇ ಚಿತ್ರೋದ್ಯಮದಲ್ಲಿ ಎಷ್ಟು ಲಾಸ್ ಆಗಿದೆ? ನನಗೆ ತಿಳಿದಮಟ್ಟಿಗೆ ಸುಮಾರು ನಾಲ್ಕರಿಂದ ಐದು ಸಾವಿರ ಕೋಟಿ ರೂಪಾಯಿಗಳಷ್ಟು ಲಾಸ್ ಆಗಿದೆ ಎಂದು ಅಂದಾಜು ಇದೆ. ಇಷ್ಟೊಂದು ಲಾಸ್ ಆಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯಲ್ಲಿ ಒಂದು ಅಕ್ಷರವನ್ನು ಸಹ ಹೇಳಿಲ್ಲ. ಹಾಗೆಯೇ ಶ್ವೇತಪತ್ರವನ್ನು ಹೊರಡಿಸಬೇಕೆಂದು ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆಯೂ ಸಹ ಅವರ ಹೇಳಿಕೆಯಲ್ಲಿ ಏನು ಹೇಳಿಲ್ಲ. ನಮ್ಮದು ಪಾರದರ್ಶಕ ಸರ್ಕಾರ, ಯಾವುದೇ ವಿಷಯವನ್ನು ಮುಚ್ಚುಮರೆಮಾಡುವಂಥಾದ್ದು ಏನೂ ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ. ಆದ್ದರಿಂದ ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟಪಡಿಸಬೇಕು. ಅದೇನೆಂದರೆ, ಸಂಧಾನಕಾರರಾಗಿ ಹೋಗಿದ್ದಂಥ ಕಲ್ಯಾಣಿ ಮತ್ತು ಭಾನು ಇವರು ಎಲ್ಲಿಂದ ಬಂದರು? ಇವರು ಹೋದ ತಕ್ಷಣ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಗುವುದಕ್ಕೆ ಕಾರಣ ಏನು? ಇವರನ್ನು ಮೊದಲೇ ಉಪಯೋಗಿಸಿಕೊಂಡು ಡಾ: ರಾಜ್‌ಕುಮಾರ್‌ರವರನ್ನು ಏಕೆ ಬಿಡುಗಡೆ ಮಾಡಿಸಿಕೊಳ್ಳಲಿಲ್ಲ? ಮೊದಲೇ ಬಿಡುಗಡೆ ಮಾಡಿಸಿಕೊಂಡಿದ್ದರೆ, ಮೂರು ತಿಂಗಳ ಕಾಲ ಇಷ್ಟೊಂದು ದೀರ್ಘ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಹಾಗೆಯೇ ಇಷ್ಟೊಂದು ನೋವು ಮತ್ತು ದುಗುಡ ನಮ್ಮ ರಾಜ್ಯದಲ್ಲಿ ಆಗುತ್ತಿರಲಿಲ್ಲ. ಆದ್ದರಿಂದ, ಈ ಸಂಧಾನಕಾರರು ಯಾವ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ? ಹಾಗೆಯೇ ಏನು ಒಪ್ಪಂದವನ್ನು ಮಾಡಿಕೊಂಡಿದ್ದಾರೆ? ನನಗೆ ತಿಳಿದ ಮಟ್ಟಿಗೆ ನಮ್ಮ ಸರ್ಕಾರವನ್ನು ತಮಿಳುನಾಡು ಸರ್ಕಾರ ಸಂಪೂರ್ಣವಾಗಿ ಉಪಯೋಗಿಸಿಕೊಂಡಿದೆ.

ನಮ್ಮ ರಾಜ್ಯ ಸರ್ಕಾರ ಅದರಲ್ಲಿ ಭಾಗಿಯಾಗಿದೆ ಎನ್ನತಕ್ಕಂಥಾದ್ದನ್ನು ನಾನು ವಿಧಿ ಇಲ್ಲದೇ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಸರ್ಕಾರ ಇವತ್ತು ಶ್ವೇತಪತ್ರವನ್ನು ಹೊರಡಿಸಬೇಕಾಗುತ್ತದೆ. ಹಾಗೆಯೇ ಈ ಒಂದು ಘಟನೆಯ ಹಿನ್ನೆಲೆಯನ್ನು ತಿಳಿದುಕೊಳ್ಳುವುದಕ್ಕೋಸ್ಕರ ಸಿ.ಬಿ.ಐ.ನಿಂದ ವಿಚಾರಣೆ ಮಾಡಿಸಬೇಕು. ಏಕೆಂದರೆ, ಇದಕ್ಕೆ ಎಲ್.ಟಿ.ಟಿ.ಇ.ರವರ ಕನೆಕ್ಷನ್ ಇದೆ ಎಂದು ಹೇಳುತ್ತಾರೆ. ಹಾಗೆಯೇ ಎರಡು ರಾಜ್ಯದಲ್ಲಿರತಕ್ಕಂಥ ಗ್ರಾನೈಟ್ ವ್ಯವಹಾರ ಇದರಲ್ಲಿ ಸೇರಿದೆ ಎಂದು ಹೇಳುತ್ತಾರೆ. ಮತ್ತು ಎರಡು ದಿನಗಳ ಮುಂಚಿತವಾಗಿಯೇ ಬಿಡುಗಡೆ ಮಾಡಿದ್ದಾರೆ, ಆದರೆ ಎರಡು ದಿವಸಗಳ ನಂತರ ಬಿಡುಗಡೆ ಮಾಡಿಸಿಕೊಂಡು ಬಂದಿದ್ದೇವೆಂದು ಕೊನೆಯಲ್ಲಿ ಸಂಧಾನಕ್ಕಾಗಿ ಹೋಗಿದ್ದವರು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ನೆಡುಮಾರನ್‌ರವರಿಂದ ಡಾ: ರಾಜ್‌ಕುಮಾರ್ ಬಿಡುಗಡೆಯಾಗಿಲ್ಲ, ಕೊನೆಯಲ್ಲಿ ಹೋಗಿದ್ದವರ ಕಡೆಯಿಂದ ಬಿಡುಗಡೆಯಾಗಿದ್ದಾರೆಂದು ತಿಳಿಯುತ್ತದೆ. ಆದ್ದರಿಂದ, ಈ ಎಲ್ಲಾ ಹಿನ್ನೆಲೆಯನ್ನು ತಿಳಿದುಕೊಳ್ಳುವುದಕ್ಕಾಗಿ ಸಿ.ಬಿ.ಐ. ವಿಚಾರಣೆ ಮಾಡಿಸಿದರೆ ಒಳ್ಳೆಯದು. ಹಾಗೆಯೇ ಸುಪ್ರೀಂ ಕೋರ್ಟ್‌ನವರು ನೀಡಿದ್ದಂಥ ತೀರ್ಪಿನಿಂದ ವೀರಪ್ಪನ್‌ಗೆ ಚಾಟಿ ಏಟು ಬಿದ್ದಂತೆ ಆಗಿ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿದ್ದಾನೆಂದು ನನಗೆ ಅನ್ನಿಸುತ್ತದೆ. ನೆಡುಮಾರನ್ ಕಡೆಯಿಂದ ಬ್ಲಾಕ್‌ಮೇಲ್ ಮಾಡಿಸುವುದಕ್ಕೆ ವೀರಪ್ಪನ್ ಪ್ರಯತ್ನ ಮಾಡಿದ. ಆದರೆ, ಟಾಡಾ ಬಂಧಿಗಳನ್ನು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ, Law will take its own course ಎಂದು ಸುಪ್ರೀಂ ಕೋರ್ಟ್‌ನವರು ತೀರ್ಮಾನ ಮಾಡಿದಾಗ, ಇನ್ನು ನಮ್ಮದೇನು ನಡೆಯುವುದಿಲ್ಲವೆಂದು ಅವರು ಎಚ್ಚರಗೊಂಡು ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಬೇಕಾದ ಪ್ರಸಂಗ ಬಂತು. ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿ ಎರಡು ದಿವಸಗಳು ಆದ ಮೇಲೆ ನಮಗೆ ತಿಳಿದಿದೆ. ಈ ಸಂದರ್ಭದಲ್ಲಿ ಅವರು ದೇಶ ಬಿಟ್ಟು ಬೇರೆ ಕಡೆ ಹೋಗಿದ್ದಾರೆಯೋ ಅಥವಾ ಕಾಡಿನಲ್ಲಿಯೇ ಇದ್ದಾರೆಯೋ ಎಂಬುದು ನಮಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಕ್ಕೆ ಸಂಬಂಧಪಟ್ಟಂತೆ ಸತ್ಯಾಂಶ ಹೊರಗಡೆ ಬರಬೇಕಾದರೆ ಸಿ.ಬಿ.ಐ. ಕಡೆಯಿಂದ ವಿಚಾರಣೆ ನಡೆಯಬೇಕು. ಹಾಗೆಯೇ ಇದರಿಂದ ಆಗಿರತಕ್ಕಂಥ ನಷ್ಟ ಮತ್ತು ಪರಿಣಾಮಗಳ ಬಗ್ಗೆ ಮುಂದಿನ ದಿನಗಳಲ್ಲಿಯಾದರೂ ಶ್ವೇತಪತ್ರವನ್ನು ಹೊರಡಿಸಬೇಕು. ಏಕೆಂದರೆ, ಇವತ್ತು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅನಾಹುತಗಳು ಆಗುತ್ತವೆ. ಈ ಎಲ್ಲಾ ವಿಚಾರಗಳು If you do not unravel the truth, repurcussions will be plenty. ramifications will be unexpected. I demand a CBI enquiry on all these things. ಇಷ್ಟು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಈಗಾಗಲೇ ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿದೆ. ಆದ್ದರಿಂದ ಹೆಚ್ಚು ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುವುದಿಲ್ಲ. ಡಾ: ರಾಜ್‌ಕುಮಾರ್‌ರವರ ಅಪಹರಣ ಆದಂಥ ಸಂದರ್ಭ ಅತ್ಯಂತ ಸೂಕ್ಷ್ಮವಾಗಿದ್ದು, ಮತ್ತು ಕರ್ನಾಟಕ ಜನರ ಭಾವನಾತ್ಮಕವಾದಂಥ ವಿಚಾರ ಆದದ್ದು ಸತ್ಯವಾದ ವಿಷಯವಾಗಿತ್ತು. ಆದರೆ, ಡಾ: ರಾಜ್‌ಕುಮಾರ್ ರವರ ಬಿಡುಗಡೆ ಯಾವಾಗ ಆಯಿತು, ಅಂದಿನಿಂದ ಈ ವಿಚಾರ ಸೂಕ್ಷ್ಮ ಮತ್ತು ಭಾವನಾತ್ಮಕ ಆಗಲಿಲ್ಲ. ಆದರೆ, ಇದು ಕರ್ನಾಟಕ ರಾಜ್ಯದಲ್ಲಿ ಒಂದು ವಿಮರ್ಶಾತ್ಮಕವಾದಂಥ ವಿಚಾರ ಆಯಿತು. ಇವತ್ತಿನದಿವಸ ಇವೆಲ್ಲವನ್ನೂ ನಾವು ವಿಮರ್ಶೆ ಮಾಡಿಕೊಳ್ಳಬೇಕಾಗಿರತಕ್ಕಂಥ ಸಂಗತಿಗಳಾಗಿವೆ. ಈ ಒಂದು ಅಪಹರಣದಿಂದ ನಾವೆಲ್ಲಾ ತುಂಬಾ ಪಾಠವನ್ನು ಕಲಿಯಬೇಕಾಗಿದೆ ಮತ್ತು ಹಲವಾರು ವಿಚಾರಗಳ ಬಗ್ಗೆ ಆಡಳಿತ ಗಮನಹರಿಸಬೇಕಾದ ದಿಕ್ಕಿನಲ್ಲಿ ಹೋಗಬೇಕಾಗಿರತಕ್ಕಂಥ ವ್ಯವಸ್ಥೆ ಆಗಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದ್ದರಿಂದ ಈ ಒಂದು ಹಿನ್ನೆಲೆಯಲ್ಲಿ ನಾವು ಚರ್ಚೆ ಮಾಡುವುದಕ್ಕೆ ಇಚ್ಛಿಸುತ್ತೇವೆ. ಇವತ್ತಿನ ದಿವಸ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆದನಂತರ ಸಾಧಾರಣವಾಗಿ ಇಡೀ ರಾಜ್ಯದಲ್ಲಿ ಗೊಂದಲದ ವಾತಾವರಣ ಉಂಟಾಗಿದೆ. ಯಾವ ಆಧಾರದ ಮೇಲೆ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಲಾಯಿತ್ತೆಂಬುದರ ಬಗ್ಗೆ ಸಾಮಾನ್ಯ ಜನರಿಗೆ ನಿರ್ದಿಷ್ಟವಾಗಿ ಇದುವರೆಗೂ ಗೊತ್ತಿಲ್ಲ. ಪತ್ರಿಕಾ ಮಾಧ್ಯಮದಿಂದ ಇವತ್ತಿನದಿವಸ ಈ ಎಲ್ಲಾ ವಿಷಯಗಳನ್ನು ನಾವು ತಿಳಿದುಕೊಂಡಿದ್ದೇವೆ. ವೀರಪ್ಪನ್ ಷರತ್ತಿಗೆ ಒಪ್ಪಿದ ಕಾರಣ ಮತ್ತು ಆತನ ಷರತ್ತುಗಳನ್ನು ಪೂರೈಕೆ ಮಾಡಿದ ಕಾರಣ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಯಿತು ಎನ್ನತಕ್ಕಂಥ ಹೇಳಿಕೆಗಳು ತಮಿಳುನಾಡಿನ ಪತ್ರಿಕೆಗಳಲ್ಲಿ ಬರುತ್ತಿದೆ. ಹಾಗೆಯೇ ಉನ್ನತ ಮೂಲಗಳಿಂದ ಏನು ಮಾಹಿತಿ ಬಂದಿದೆ ಎಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಮಾಡುತ್ತಾರೆ ಎನ್ನತಕ್ಕಂಥ ಹಿನ್ನೆಲೆಯಿಂದ ವೀರಪ್ಪನ್ ಹೆದರಿ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ನಕ್ಕೀರನ್ ಗೋಪಾಲ್‌ರವರು ಮೂರ್ನಾಲ್ಕು ಬಾರಿ ಹೋಗಿ ಬಂದರೂ ಕೂಡ ಏನು ಪ್ರಯೋಜನವಾಗಲಿಲ್ಲ. ಆ ನಂತರ ನೆಡುಮಾರನ್ ಹೋದ ಮೇಲೆ ಕೂಡ ಭಾರಿ ವಿಶೇಷವಾದ ವ್ಯವಸ್ಥೆಗಳು ಆಗಲಿಲ್ಲ. ಆದ್ದರಿಂದ ಬೆಂಗಳೂರಿನ ಪಕ್ಕದಲ್ಲಿರತಕ್ಕಂಥ ಹಲವಾರು ಗ್ರಾನೈಟ್ ಲಾಬಿಗಳಾದ ಭಾನು, ಷಣ್ಮುಗಸುಂದರಂ ಮತ್ತು ಮಣಿ, ಕುಮಾರ್, ಇವರು ನೇರವಾಗಿ ಮಾಡಿದ ಹಸ್ತಕ್ಷೇಪದ ಹಿನ್ನೆಲೆಯಲ್ಲಿ ವೀರಪ್ಪನ್‌ನನ್ನು ಮನವೊಲಿಸಿ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಇನ್ನೊಂದು ಕಡೆ ಸಾಮಾನ್ಯ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಇದರಲ್ಲಿ ಯಾವುದು ಸತ್ಯ ಮತ್ತು ಯಾವುದು ಸುಳ್ಳು ಎನ್ನತಕ್ಕಂಥದ್ದು ಇವತ್ತು ಜನರಿಗೆ ಗೊತ್ತಾಗುವುದು ಬೇಡವೆ? ಏಕೆಂದರೆ ಇದು ಇವತ್ತು

ಅಥವಾ ನಾಳೆ ಮರೆಯತಕ್ಕಂಥ ಸಂಗತಿಗಳಲ್ಲ. ಈ ಪಾಠದಿಂದ ನಾವು ಮುಂದೆ ಇಂಥ ಕೆಲಸಗಳು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕಾಗಿದೆ. ಈ ಒಂದು ವ್ಯವಸ್ಥೆಯಲ್ಲಿ ಆಗಿರತಕ್ಕಂಥ ಗೊಂದಲವನ್ನು ಪರಿಹಾರ ಮಾಡತಕ್ಕಂಥದ್ದು ಅತ್ಯಂತ ಸೂಕ್ತವಾಗಿದೆ. ಆದಕಾರಣ ಇಂಥದೇ ಕಾರಣಗಳಿಂದ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ ಎಂದು ಕರ್ನಾಟಕದ ಜನತೆಗೆ ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಹೇಳಿಕೆಯಲ್ಲಿ, ಬೇಡಿಕೆಗಳ ಬಗ್ಗೆ ನಮ್ಮ ರಾಜ್ಯದ ನಿಲುವು ಏನು? ಅದರ ಬಗ್ಗೆ ಏನು ಆಗಿತ್ತು ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಸರ್ವಪಕ್ಷದ ಸಭೆಯಲ್ಲಿಯೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನೇನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಇರತಕ್ಕಂಥ ಗೊಂದಲ ಅದಕ್ಕಿಂತ ಸ್ವಲ್ಪ ಹೆಚ್ಚಿನದು. ಈ ಒಂದು ಬಿಡುಗಡೆ ವ್ಯವಸ್ಥೆಯ ಕೊನೆಯ ಹಂತದಲ್ಲಿ ನಾಟಕೀಯವಾಗಿ ಆಗಿರತಕ್ಕಂಥ ವ್ಯವಸ್ಥೆಗಳನ್ನು ನೋಡಿದರೆ, ಈ ಭಾಗದಲ್ಲಿ ಇನ್ನಷ್ಟು ಗೊಂದಲಮಯ ವಾತಾವರಣಗಳು ಬೇರೆ ಬೇರೆ ದೃಷ್ಟಿಯಿಂದ ಬರುವುದಕ್ಕೆ ಸಾಧ್ಯವಿದೆ ಎನ್ನತಕ್ಕಂಥ ಹಿನ್ನೆಲೆ ಇದೆ. ಈ ಒಂದು ಕಾರಣಕ್ಕಾಗಿಯೇ ಇಲ್ಲಿ ಚರ್ಚೆ ಮಾಡುತ್ತಿರುವುದು. ಸರ್ಕಾರ ಮಾಡಿದ್ದೇನು? ಇನ್ನು ಏನು ಮಾಡಬೇಕು? ಈ ಹಿಂದೆ ನಡೆದಂಥ ಘಟನೆಯಲ್ಲಿ ಮುಚ್ಚಿಟ್ಟಂಥ ಸತ್ಯಗಳೇನು? ಇದನ್ನೆಲ್ಲಾ ನಾವು ಜನರಿಗೆ ಹೇಳಬೇಕು. ಇದರ ಮುಖಾಂತರ ಒಂದು ರೀತಿಯ ವಾಸ್ತವಿಕ ಸಂಗತಿಗಳ ಕಡೆಗೆ ನಾವು ಗಮನಹರಿಸಬೇಕು. ಇದಕ್ಕೆಲ್ಲಾ ಕಾರಣ ಏನೆಂದು ಕೇಳಬಹುದು. ೧೫ನೇ ತಾರೀಖಿನ ದಿವಸ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಿರುವುದನ್ನು ನಮಗೆ ತಿಳಿಸಲು ಏಕೆ ತಡವಾಯಿತು ಎಂಬುದರ ಬಗ್ಗೆ ನಮ್ಮ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ಇದನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ೧೫ನೇ ತಾರೀಖಿನ ನಂತರ ಎಷ್ಟು ಶೀಘ್ರವಾಗಿ ಕಾರ್ಯಾಚರಣೆ ಆಗಬೇಕಾಗಿತ್ತೋ, ಆ ರೀತಿಯಲ್ಲಿ ಈ ಒಂದು ಕಾರ್ಯಾಚರಣೆ ಆಗಿದೆಯೇ ಎನ್ನತಕ್ಕಂಥದ್ದನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ? ಈ ಒಂದು ಕಾರ್ಯದಲ್ಲಿ ಯಾರು ನೇರವಾಗಿ ಪ್ರಯತ್ನ ಮಾಡಿದ್ದಾರೆಯೋ ಅವರು ಪರೋಕ್ಷವಾಗಿ ವೀರಪ್ಪನ್‌ಗೆ ಬೆಂಬಲಕೊಡತಕ್ಕಂಥ ವ್ಯಕ್ತಿಗಳೆಂದು ನಾವು ಹೇಳತಕ್ಕಂಥದ್ದನ್ನು ಮರೆಯಬಾರದು. ಇದನ್ನು ನಾವೆಲ್ಲರೂ ಸಹ ಆಲೋಚನೆ ಮಾಡಬೇಕಾಗಿದೆ. ಇವತ್ತಿನದಿವ, ವೀರಪ್ಪನ್ ಕರ್ನಾಟಕ ರಾಜ್ಯಕ್ಕೆ ಕಾಡುಗಳ್ಳ, ನರಹಂತಕ

4.50 ಪಿ.ಎಂ.

ವೀರಪ್ಪನ್ ಆಗಿರಬಹುದು. ಇವತ್ತು ವೀರಪ್ಪನ್ ತಮಿಳುನಾಡಿಗೆ ಏನಾಗಿದ್ದಾನೆ ಸ್ವಾಮಿ? ತಮಿಳುನಾಡಿನ ನೆಲ, ನೀರು, ಭಾಷೆಯ ಬಗ್ಗೆ ಆತ ಏನಾಗಿದ್ದಾನೆ? ಇವತ್ತು ಆತನು ಉತ್ಕೃಷ್ಟವಾಗಿ ಮಾತನಾಡುವುದರ ಮೂಲಕ ತಮಿಳು ರಾಜ್ಯದಲ್ಲಿ ಒಂದು ವರ್ಗದ

ನಾಯಕನಾಗಿ ವೀರಪ್ಪನ್ ಬಂದಿದ್ದಾನೆ. ಇದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಒಂದು ಕಡೆ ತಮಿಳುನಾಡು ಸರ್ಕಾರ ನಾವು ಬೆಂಬಲವನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದರೂ ಕೂಡ ಪರೋಕ್ಷವಾಗಿ ಅವರ ಊರಿನ ವಿಚಾರದ ಬಗ್ಗೆ, ಅವರ ನೀರಿನ ವಿಚಾರಗಳ ಬಗ್ಗೆ, ಅವರ ಭಾಷೆಗಳ ವಿಚಾರದ ಬಗ್ಗೆ ಸ್ಪಷ್ಟವಾದ ನಿಲುವಿನಲ್ಲಿ ಸರ್ಕಾರದ ಒಂದು ಗಮನವನ್ನು ಸೆಳೆಯುವಂತಹ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಅವನ ಕಡೆಯಿಂದ ನಡೆಸಿದ್ದಾರೆ ಇದರ ಬಗ್ಗೆ ನಾವು ಕೂಲಂಕಷವಾಗಿ ಆಲೋಚನೆಯನ್ನು ಮಾಡಲೇಬೇಕಾಗುತ್ತದೆ. ವೀರಪ್ಪನ್ ಇವತ್ತು ಪರಾರಿಯಾಗಿದ್ದಾನಾ? ಅಥವಾ ಇದ್ದಾನೋ, ಇಲ್ಲವೋ ಇದರ ಬಗ್ಗೆಯೂ ಕೂಡ ಮಾಹಿತಿಗಳು ಇಲ್ಲ, ಅದರ ಬಗ್ಗೆ ನಾನು ಪ್ರಶ್ನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಅವನು ಯಾವ ಸಂದರ್ಭದಲ್ಲಿ ತಮಿಳುನಾಡಿನ ಪರವಾಗಿ ವಾದಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿ ನೇರವಾಗಿ ಕರ್ನಾಟಕ ರಾಜ್ಯದ ಮೇಲೆ ಒಂದು ಒತ್ತಡವನ್ನು ತರುವಂತಹ ಪ್ರಯತ್ನಗಳನ್ನು ಮಾಡಿದ್ದಾನೆ. ಇದರ ಬಗ್ಗೆ ಹಲವಾರು ಪತ್ರಿಕೆಗಳಲ್ಲಿ ಬಂದಂತಹ ವಿಚಾರಗಳೇನು? ಡಾ: ರಾಜ್‌ಕುಮಾರ್ ರವರ ಅಪಹರಣವು ಏಕಾಯಿತು ಎಂದು ಕೇಳಿದರೆ, ಕರ್ನಾಟಕ ಮತ್ತು ತಮಿಳುನಾಡು ಎರಡು ರಾಜ್ಯಗಳ ಗಮನವನ್ನು ಸೆಳೆಯುವುದಕ್ಕೆ ತಮಿಳುನಾಡಿನ ಆಚಾರ ವಿಚಾರ ಸಂಸ್ಕೃತಿಗಳ ಬಗ್ಗೆ ಗಮನ ಸೆಳೆಯಲಿಕ್ಕೆ ಬೇಕಾಗಿರುವಂತಹ ಕೆಲಸಗಳನ್ನು ಮಾಡಿದ್ದಾನೆಂದು ಹೇಳುವಂತಹ ಮಾತನ್ನು ಕೂಡ ಹೇಳಿದ್ದಾರೆ. ಇದರ ಬಗ್ಗೆ ಬೇರೆ ಬೇರೆ ಪತ್ರಿಕೆಗಳಲ್ಲೂ ಕೂಡ ಬಂದಿದೆ, ಇದನ್ನು ನಾವು ಹೇಳುವಂಥಾದ್ದು ಅಲ್ಲ. ಆದಕಾರಣ ಕರ್ನಾಟಕ ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ, ಇದರ ಹಿನ್ನೆಲೆಗೆ ಸಂಬಂಧಪಟ್ಟಂತಹ ವ್ಯವಹಾರಗಳು, ಸಂಶಯಾಸ್ಪದ ರೀತಿಯಲ್ಲಿ ಆದಕಾರಣ ಇದರ ಕೂಲಂಕಷ ತನಿಖೆಯನ್ನು ಮಾಡಿ ಇದಕ್ಕೆ ಮದ್ದು ಮಾಡುವಂತಹ ಕೆಲಸಗಳಾಗಬೇಕು. ಇದರ ಬಗ್ಗೆ ಹಲವಾರು ಜನರು ಹೇಳುತ್ತಾರೆ ನಿಜ, ಇದರ ಬಗ್ಗೆ ಆಡಳಿತ ಪಕ್ಷದ ಮಿತ್ರರು ಹೇಳಿದರು, ಸುಮ್ಮನೆ ಡಾ: ರಾಜ್‌ಕುಮಾರ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವಂತಹ ಅವಶ್ಯಕತೆ ಏನಿತ್ತು? ಈಗಾಗಲೇ ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಇದರ ಬಗ್ಗೆ ನಿನ್ನೆಯ ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿದೆ. ಇವತ್ತು ಅದರ ಬಗ್ಗೆ ಚರ್ಚೆ ಮಾಡಿ ಪೋಸ್ಟ್‌ಮಾರ್ಟಮ್‌ನ್ನು ಮಾಡುತ್ತೀರಾ ಎಂದು ಕೇಳಿದರು. ಹಲವಾರು ಸಂದರ್ಭಗಳಲ್ಲಿ ಪೋಸ್ಟ್‌ಮಾರ್ಟಮ್‌ನ ಅವಶ್ಯಕತೆ ಇದೆ ನಿಜ, ಯಾವ ಕಾಯಿದೆಯಿಂದ, ಯಾವ ವಿಚಾರದಿಂದ ಆ ವ್ಯಕ್ತಿ ಸತ್ತ ಎನ್ನುವ ಬಗ್ಗೆ ಹಿನ್ನೆಲೆಯನ್ನು ತಿಳಿದುಕೊಳ್ಳುವುದರ ಮೂಲಕ ಮುಂದಿನ ದಿನಗಳಲ್ಲಿ ಆ ರೀತಿಯಾಗಿ ಕಾಯಿಲೆಗಳು ಬರದಹಾಗೆ ನೋಡಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆಯಾಗುವುದು ಅವಶ್ಯಕವಾಗಿದೆ ಎಂದು ಈ ವಿಚಾರವನ್ನು ನಾನು ಹೇಳುತ್ತಿರುವುದು. ಈ ಕೆಲಸಗಳು ನಿರಂತರವಾಗಿ ಆಗಲೇಬೇಕು, ಯಾವುದಾದರೂ ಒಂದು ಕೆಲಸವು ಮುಗಿದ ತಕ್ಷಣ ಅದನ್ನು ಅಲ್ಲೇ ಬಿಟ್ಟು ಬಿಡುವುದಿಲ್ಲ, ಅದರ ಹಿನ್ನೆಲೆಯನ್ನು

ತಿಳಿದುಕೊಳ್ಳುವಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಇವತ್ತು ಆ ಪರಿಸರದಲ್ಲಿ ಇರುವಂತಹ ಗ್ರಾನೈಟ್ ಲಾಬಿಯಂತಹ ವ್ಯವಸ್ಥೆ, ಬಹುಶಃ ಅದರ ಬಗ್ಗೆ ನಾವು ಒಂದು ದೃಷ್ಟಿಯಲ್ಲಿ ಹೇಳಬೇಕಾದರೆ ಇವತ್ತಿನ ಕರ್ನಾಟಕದ ವೀರಪ್ಪನ್‌ನ ಈ ಅಟ್ಟಹಾಸಕ್ಕೆ ಆ ಭಾಗದಲ್ಲಿ ಇರುವಂತಹ ಗ್ರಾನೈಟ್‌ನ ಒಂದು ವ್ಯವಸ್ಥೆಯಲ್ಲಿ, ಅದರ ಲಾಬಿಯಲ್ಲಿ ನಮ್ಮ ಆಡಳಿತದ ವ್ಯವಸ್ಥೆ ಕೈಗೊಂಬೆಯಾಗಿರುವುದೇ ಅದಕ್ಕೆ ಕಾರಣವೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಗ್ರಾನೈಟ್‌ನ ವ್ಯವಹಾರಗಳು ಇದಕ್ಕೆ ಕಾರಣವೆಂದು ವಿವಿಧ ಪತ್ರಿಕೆಗಳಲ್ಲಿ ಬಂದಿರುವುದರ ಬಗ್ಗೆ ನಾವು ಓದಿದ್ದೇವೆ. ದೊಡ್ಡ ದೊಡ್ಡ ಜನಗಳು, ಯಾರು ಇದರಲ್ಲಿ ಭಾಗಿಗಳಾಗಿದ್ದಾರೆಯೋ ಅವರ ಮಕ್ಕಳು, ಮರಿಮಕ್ಕಳು ಎಲ್ಲರೂ ಕೂಡ ಇದರಲ್ಲಿ ಭಾಗಿಯಾಗಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವು ಕೇಳುತ್ತಿದ್ದೇವೆ. ಹಿಂದಿನ ಸರ್ಕಾರಗಳು ಗ್ರಾನೈಟ್ ಆ ಒಂದು ಕೋರೆಯಲ್ಲಿ ಇದನ್ನು ಮಾಡಬಾರದೆಂದು ಹೇಳಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಪುನಃ ಅವರಿಗೆ ಪರವಾನಗಿಯನ್ನು ಕೊಡುವಂತಹ ವ್ಯವಸ್ಥೆಗಳಾಗಿದೆ. ಇದು ಏತಕ್ಕಾಗಿ ಆಗುತ್ತಿದೆ? ಇದರ ಬಗ್ಗೆ ನಾವು ಕೂಲಂಕುಷವಾಗಿ ವಿಮರ್ಶೆ ಮಾಡುವಂತಹ ಅವಶ್ಯಕತೆ ಇದೆ, ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾದರೆ, ಇದರ ಬಗ್ಗೆ ಏನು ಅವ್ಯವಸ್ಥೆಯಾಗಿದೆ ಎಂದು ಹೇಳುವಂತಹ ಹಿನ್ನೆಲೆಯಿಂದ ಮುಂದಿನ ಪರಿಹಾರಕ್ಕೆ ಹೋದರೆ ಮಾತ್ರ ಆ ಕೆಲಸಗಳು ಸರಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಒಂದು ಕಡೆಯಿಂದ ಈ ರೀತಿಯಲ್ಲಿ ಆಯಿತು. ಇನ್ನೊಂದು ಕಡೆಯಿಂದ ಆ ವ್ಯವಸ್ಥೆಗಳ ಬಗ್ಗೆ ನಾವು ನೋಡೋಣ, ಇವೊತ್ತು ಈ ರಾಜ್ಯದ ಅತ್ಯಂತ ವರಿಷ್ಠ ಅಧಿಕಾರದಲ್ಲಿದ್ದಂತಹ ವ್ಯಕ್ತಿಗಳು ಇವತ್ತು ಏನೆಲ್ಲಾ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಈ ರಾಜ್ಯದಲ್ಲಿ ಪೋಲೀಸ್ ವರಿಷ್ಠಾಧಿಕಾರಿಗಳಾಗಿ ಕೆಲಸ ಮಾಡಿದವರು ಹೇಳಿದ್ದಾರೆ. ಇವತ್ತು ನನಗೆ ತುಂಬಾ ಬೇಸರವಾಗುತ್ತಿದೆ, ನಾನು ತಮಗೆ ಒಂದು 19ನೇ ತಾರೀಖಿನ ಕನ್ನಡ ಪ್ರಭಾ ಪತ್ರಿಕೆಯನ್ನು ಕಳುಹಿಸಿಕೊಡುವುದಕ್ಕೆ ಇಷ್ಟಪಡುತ್ತೇನೆ, ತಮಿಳು ರಾಷ್ಟ್ರವಾದಿ ನಾಯಕ ನೆಡುಮಾರನ್‌ನ ಅಧ್ಯಕ್ಷತೆಯಲ್ಲಿ ರೈನ್‌ಬೋ ಸಂಘಟನೆಯ ಅಧ್ಯಕ್ಷರು ಮತ್ತು ನಿವೃತ್ತ ಪೋಲೀಸ್ ಮಹಾನಿರ್ದೇಶಕರಾದ ಶ್ರೀ ಟಿ. ಶ್ರೀನಿವಾಸಲುರವರು ಇದ್ದಾರೆ. ಸ್ವಾಮಿ, ಅದರ ಹಿಂದುಗಡೆ ಒಂದು ಫೋಟೋ ಇದೆ, ಇದರ ಬಗ್ಗೆ ತುಂಬಾ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾದಂತಹ ವ್ಯವಸ್ಥೆ ಇದು. ನಾವುಗಳು ಮಾತ್ರವಲ್ಲ ಇಡೀ ದೇಶದಲ್ಲಿರುವಂತಹ ಪ್ರತಿಯೊಬ್ಬ ಭಾರತೀಯನು ಕೂಡ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಆ ಫೋಟೋ ಯಾರದು ಇದೆಯೆಂದರೆ, ನೆಡುಮಾರನ್ ಮತ್ತು ಎಲ್‌ಟಿಟಿಇಯ ಪ್ರಭಾಕರನ್‌ರವರ ಫೋಟೋ ಅದರ ಹಿಂದುಗಡೆ ನೇತು ಹಾಕಿದ್ದಾರೆ. ಆ ಫೋಟೋವನ್ನು ತಾವು ಬೇಕಾದರೆ ಕನ್ನಡಪ್ರಭಾ ಪತ್ರಿಕೆಯಲ್ಲಿ ನೋಡಬಹುದು. ಇದರಲ್ಲಿ ಅವರಿಗೆ ಎಷ್ಟರಮಟ್ಟಿಗೆ ಲಿಂಕ್ ಇರಬಹುದು ಎಂದು ಹೇಳುವುದರ ಬಗ್ಗೆ ಇದು ಅತ್ಯಂತ ಗಂಭೀರವಾದಂತಹ ವಿಚಾರವಾಗಿದೆ, ಇದನ್ನು ನಾನು

ಸುಮ್ಮನೆ ಉಲ್ಲೇಖವನ್ನು ಮಾಡುತ್ತಿಲ್ಲ. ಮಾನ್ಯ ಉಪಾಧ್ಯಕ್ಷರೆ, ಇದು ಏಕೆ ಎಂದು ಹೇಳಿದರೆ, ನಾವು ರಾಷ್ಟ್ರವಿರೋಧಿ ಶಕ್ತಿಗಳನ್ನು ಹತ್ತಿಕ್ಕುವ ಬಗ್ಗೆ ನಮಗೆ ಸಾಮರ್ಥ್ಯವಿದೆ, ತಾಕತ್ತು ಇದೆ ಎಂದು ಹೇಳುತ್ತೇವೆ. ಎಲ್ಲಾ ಬಾಣಗಳು ಬತ್ತಳಿಕೆಯಲ್ಲಿದ್ದರೆ ಸಾಕಾಗುವುದಿಲ್ಲ, ಆ ಬಾಣಗಳ ಪ್ರಯೋಗ ಅತ್ಯಂತ ಯಶಸ್ವಿಯಾದಾಗ ಮಾತ್ರ ಇದು ಸಾಧ್ಯ. ಆ ಬಾಣಗಳು ನಿಜವಾದ ಅರ್ಥದಲ್ಲಿ ಅದು ಅರ್ಥಪೂರ್ಣವಾಗುತ್ತದೆ. ಇದನ್ನು ನಿಜವಾಗಿಯೂ ನೋಡಿದರೆ ಅತ್ಯಂತ ದೇಶಪ್ರೇಮಿಗೂ ಕೂಡ ಮನಸ್ಸಿನಲ್ಲಿ ಗೊಂದಲ ಬರುವಂತಹ ಸಂಗತಿಯಾಗುತ್ತದೆ. ಈ ಪತ್ರಿಕೆಯನ್ನು ಎಲ್ಲರೂ ನೋಡಿರಬಹುದು ಎಂದು ತಿಳಿದುಕೊಂಡಿದ್ದೇನೆ, ಇದನ್ನು ತಮ್ಮ ಮುಖಾಂತರ ಕಳುಹಿಸಿಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯ ಸಂಗತಿಗಳು ಆದಾಗ ಪ್ರಾಯಶ: ಕರ್ನಾಟಕದಲ್ಲಿ ಇದರ ಬಗ್ಗೆ ತಾವು ತೆಗೆದುಕೊಂಡಂತಹ ನಿಲುವು ಏನು? ಎಂಬುದರ ಬಗ್ಗೆ ಸ್ಪಷ್ಟೀಕರಣವನ್ನು ಜನಸಾಮಾನ್ಯರಿಗೆ ಕೊಡಬೇಕಾಗುತ್ತದೆ. ಇದಕ್ಕಾಗಿ ಪ್ರಬಂಧ್ಧತೆ, ಇದಕ್ಕಾಗಿ ಈ ರೀತಿಯಾಗಿ ಚರ್ಚೆ ಮಾಡಬೇಕಾಗುತ್ತದೆ. ಯಾವುದೇ ರೀತಿಯ ದೋಷಾರೋಪಣೆಗಳನ್ನು ಈ ರಾಜ್ಯದಲ್ಲಿ ಆಡಳಿತವನ್ನು ಮಾಡುತ್ತಿರುವವರ ಮೇಲೆ ಅಥವಾ ಮತ್ತೊಂದನ್ನು ಮಾಡುವುದಕ್ಕಲ್ಲ. ನಾವು ಬೆನ್ನನ್ನು ತಟ್ಟಿಕೊಂಡಿದ್ದೇವೆ. ನಾವು ಒಟ್ಟಿಗೆ ಕುಳಿತು ಇದರ ಬಗ್ಗೆ ವ್ಯವಹಾರವನ್ನು ಮಾಡಿದ್ದೇವೆ, ಇದರ ಬಗ್ಗೆ ಎಲ್ಲರೂ ಒಟ್ಟಾಗಿ ಕುಳಿತು ಸಮಜಾಯಿಷಿಯನ್ನು ಕೊಟ್ಟಿದ್ದೇವೆ. ಆದರೆ ಅದೇ ಸಮಜಾಯಿಷಿಗೆ ಇವತ್ತು ಕೂಡ ನಡೆಯುವುದಿಲ್ಲ, ಅದು ಬಿಡುಗಡೆಯಾಗುವಂತಹ ಹಂತದವರೆಗೆ ಮತ್ತು ಅತ್ಯಂತ ಕ್ಲಿಷ್ಟಕರವಾದಂತಹ ಸಮಸ್ಯೆಗಳಾದ ಕಾರಣದಿಂದ ಕೇವಲ ಇದು ಆಡಳಿತಾರೂಢ ಪಕ್ಷ ಒಂದರಿಂದಲೇ ಇದನ್ನು ಸಮರ್ಥವಾಗಿ ನಿವಾರಣೆಯನ್ನು ಮಾಡುವುದಕ್ಕಾಗುವುದಿಲ್ಲವೆಂದು ಇದರ ಜೊತೆಯಲ್ಲಿ ಪ್ರತಿಪಕ್ಷದವರು ಕೂಡ ಸಹಕಾರವನ್ನು ಕೊಡುವಂತಹ ಅವಶ್ಯಕತೆ ಇದೆ ಎನ್ನುವಂತಹ ದೊಡ್ಡಮನಸ್ಸಿನ ಹಿನ್ನೆಲೆಯಿಂದ ಆ ಕೆಲಸಗಳನ್ನು ಮಾಡಿದ್ದೇವೆ. ಆದರೆ ಅದರ ನಂತರವೂ ಕೂಡ ಹಾಗೆ, ಹೀಗೆ ಆಗಬಾರದು ಎನ್ನುವಂತದ್ದು ಆಗಬಾರದು. ಯಾವತ್ತಾದರೂ ಒಂದು ದಿವಸ ಗೊಂದಲಗಳಿಗೆ ಪರಿಹಾರವಾಗಲೇಬೇಕು, ಪರಿಹಾರವಾದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಈಗ ಒಂದು ಸಂಕಷ್ಟ ಒದಗಿಬಂದಿದೆ, ಆ ಸಂಕಷ್ಟಕ್ಕೆ ನಾವು ಸಹಕಾರವನ್ನು ಕೊಟ್ಟಿದ್ದೇವೆ, ಇನ್ನು ಮುಂದೆ ದೊಡ್ಡ ಸಂಕಷ್ಟ ಇದೆ, ಅದರ ಪರಿಹಾರಕ್ಕೆ ಆಡಳಿತದವರೇ ಮುತುವರ್ಜಿಯನ್ನು ವಹಿಸಬೇಕಾಗಿದೆಯೇ ಹೊರತು ನಾವಲ್ಲ, ಇವತ್ತು ನಾನು ಆಡಳಿತ ಪಕ್ಷಕ್ಕೆ ಒಂದು ಸಣ್ಣ ಪ್ರಶ್ನೆಯನ್ನು ಹಾಕುವುದಕ್ಕೆ ಇಷ್ಟಪಡುತ್ತೇನೆ. ಇದೇ ಪರಿಸ್ಥಿತಿ ಕೇಂದ್ರದಲ್ಲಿ ಇವತ್ತಿನ ಕಾಂಗ್ರೆಸ್ ಸರ್ಕಾರ ಆಡಳಿತವನ್ನು ಮಾಡುತ್ತಿದ್ದರೆ ಈ ರಾಜ್ಯದ ಮುಖ್ಯಮಂತ್ರಿಗಳು ಎಷ್ಟು ಬಾರಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡುತ್ತಿದ್ದರು, ನಾನು ಇಷ್ಟರವರೆಗೆ ಇದರ ಬಗ್ಗೆ ಉಲ್ಲೇಖವನ್ನು ಮಾಡುವಂತಹ ಪ್ರಯತ್ನಗಳನ್ನು ಮಾಡಲಿಲ್ಲ. ಒಂದು ವೇಳೆ ಈ ರಾಜ್ಯದಲ್ಲಿ ಆಡಳಿತವನ್ನು ಮಾಡುತ್ತಿರುವಂತಹ ಪಕ್ಷ ಕೇಂದ್ರದಲ್ಲಿಯೂ ಕೂಡ ಆಡಳಿತವನ್ನು ಮಾಡುತ್ತಿದ್ದರೆ ಕನಿಷ್ಟ ವಾರಕ್ಕೆ ನಾಲ್ಕು ಬಾರಿಯಾದರೂ

ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಈ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದರು. ಆ ರೀತಿಯ ಪ್ರಯತ್ನಗಳು ಇವತ್ತು ಆಗಿದೆಯೇ? ಇದಕ್ಕಾಗಿ ನಾನು ಹೇಳಬೇಕಾಗಿದೆ. ಒಂದು ರೀತಿಯಲ್ಲಿ ರಾಜಕೀಯದ ಹಿನ್ನಲೆಯಲ್ಲಿಯೂ ಕೂಡ ಕರ್ನಾಟಕದಲ್ಲಿರುವಂತಹ ವಿರೋಧಪಕ್ಷಗಳು ರಾಜಕೀಯ ಮಾಡುವಂತಹ ಪ್ರಯತ್ನಗಳನ್ನು ಮಾಡಲಿಲ್ಲ. ಇವತ್ತು ನಾನು ಕೂಡ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ, ದಯವಿಟ್ಟು ಇನ್ನಾದರೂ ಕೂಡ ನಿರಂತರವಾಗಿ ಸಂಪರ್ಕವನ್ನು ಇಟ್ಟುಕೊಳ್ಳಿ ಎಂದು ಹೇಳಬೇಕಾಗುತ್ತದೆ. ಈಗಾಗಲೇ ತಮಿಳುನಾಡು ಸರ್ಕಾರ ಎಷ್ಟು ಹೇಳಿದರೂ ಕೂಡ ಒಂದು ರೀತಿಯಾದಂತಹ ಮಾನಸಿಕವಾದಂತಹ ವ್ಯವಸ್ಥೆ ವ್ಯವಸ್ಥೆ ಅವರು ವೀರಪ್ಪನ್‌ನ ಪರವಾಗಿರುವಂತಹ ಸಾಧ್ಯತೆಗಳು ಇವೆ. ಬಹುಶಃ ಕೇಂದ್ರ ಸರ್ಕಾರ ಈ ಎರಡು ರಾಜ್ಯಗಳ ನಡುವೆ ಸಂಬಂಧ ಕಲ್ಪನೆಯಾದರೆ ಮಾತ್ರ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಖಂಡಿತ ಸಾಧ್ಯವಾಗುವುದಿಲ್ಲ. ಆದರೆ ಇದುವರೆಗೂ ಆಗಿದ್ದು ಆಗಿಹೋಯಿತು, ಇನ್ನು ಮುಂದೆ ರಾಜಕೀಯ ವ್ಯವಸ್ಥೆಯಲ್ಲಿ ಹೋಗುವುದಂತೂ ಬೇಡ, ಈಗ ಮಾತನಾಡುವಂತಹದ್ದು ಸಮಂಜಸವಲ್ಲ. ಈ ಬಿಡುಗಡೆಗೆ ಮುಂಚಿತವಾಗಿ ಹಲವಾರು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಇದರ ಬಗ್ಗೆ ಮಾತನಾಡುತ್ತಿಲ್ಲ. ಇಲ್ಲಿ ಎಲ್ಲಾ ಕಡೆ ಪ್ರತಿಭಟನೆಗಳು ಬಂದ್‌ಗಳು ಆಗುವಂಥಾದ್ದು ಕೇಂದ್ರ ಸರ್ಕಾರವು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಎಂದು ಹೇಳುವಂಥ ರೀತಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವಂತಹ ಪ್ರಯತ್ನಗಳು ಆಗಿತ್ತು. ಆದರೆ ಈ ರಾಜ್ಯದಲ್ಲಿದ್ದಂತಹ ಆ ಪಕ್ಷದ ಯಾವುದೇ ವ್ಯಕ್ತಿಗಳು ಇದನ್ನು ರಾಜಕೀಯವಾಗಿ ಪರಿವರ್ತನೆ ಮಾಡುವಂತಹ ಪ್ರಯತ್ನಗಳನ್ನು ಮಾಡಲಿಲ್ಲ. ಮೈಸೂರಿನಲ್ಲಿ, ಹಾಸನದಲ್ಲಿ, ಇನ್ನೊಂದು ಕಡೆ ಬಂದ್‌ಗಳು ಆಯಿತಲ್ಲಾ ಹಲವಾರು ಸಂದರ್ಭಗಳಲ್ಲಿ ಹೇಳಿಕೆಗಳೆಲ್ಲಾ ಬಂದಿದೆ, ಈ ಬಂದ್‌ಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಬೆಂಬಲವನ್ನು ಕೊಟ್ಟಿದ್ದಾರೆಂಬ ಮಾತುಗಳು ದಿನಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೇವೆ. ಆದರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರಾಕರಣೆಯನ್ನು ಮಾಡಿದ್ದಾರೆ, ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಪತ್ರಿಕೆಗಳಲ್ಲಿ ಬಂದಿರುವಂಥಾದ್ದನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದರ ಬಗ್ಗೆ ನಮ್ಮಲ್ಲಿ ಸಾಮಾನ್ಯ ಜನರು ಕೂಡ ಕೇಳುವಂತಹ ಪ್ರಯತ್ನಗಳನ್ನು ಮಾಡಿದ್ದಾರೆ, ಕೇಂದ್ರ ಸರ್ಕಾರದಲ್ಲಿರುವಂತಹ ನಿಮ್ಮ ಪಕ್ಷದವರು ಹಸ್ತಕ್ಷೇಪವನ್ನು ಮಾಡುವುದಿಲ್ಲವೇ ಎಂದು ಕೇಳಿದ್ದಾರೆ. ಡಾ: ರಾಜ್‌ಕುಮಾರ್‌ರವರ ಅಪಹರಣವಾಗಿ 20 ರಿಂದ 75 ದಿವಸಗಳಾಯಿತು, ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆದಾಗ ಅವರ ಜೊತೆ ಹೋಗುತ್ತೀರಿ, ಸುಮ್ಮನೆ ಅಲ್ಲಿ ಇರುತ್ತೀರೆಂಬ ವಿಚಾರಗಳನ್ನು ಹೇಳುತ್ತಿದ್ದರು. ಆದರೆ ಪರೋಕ್ಷವಾಗಿ ನಮ್ಮ ಪಕ್ಷದ ಮೇಲೆ ಗೂಬೆ ಕೂರಿಸುವಂತಹ ಪ್ರಯತ್ನವು ಕೂಡ ಆಗಿತ್ತು. ಆದರೂ ಕೂಡ ಅಂತಹ ಸಂದರ್ಭದಲ್ಲಿಯೂ ಕೂಡ ನಿಷ್ಕ್ರಿಯರಾಗಿ ವರ್ತನೆಯನ್ನು ನಾವು ಮಾಡಲಿಲ್ಲ, ಆ ಪ್ರಕ್ರಿಯೆಗೆ ಯಶಸ್ವಿಯಾಗಿ

ಬೆಂಬಲವನ್ನು ಕೊಡುವಂತಹ ಕೆಲಸವನ್ನು ಈ ರಾಜ್ಯದಲ್ಲಿ ಮಾಡಿದ್ದೇವೆ. ಇದಕ್ಕಾಗಿ ನಾನು ಹೇಳುತ್ತಿರುವುದು, ಡಾ: ರಾಜ್‌ಕುಮಾರ್‌ರವರ ಬಿಡುಗಡೆಯ ಸಂದರ್ಭದಲ್ಲಿ ಮಾಡಿಕೊಂಡಂತಹ ರಹಸ್ಯ ಒಪ್ಪಂದಗಳನ್ನು ತಕ್ಷಣ ಸಾರ್ವಜನಿಕರಿಗೆ ತಿಳಿಸಿ, ಇದೀ ಗೊಂದಲ ವಾತಾವರಣವನ್ನು ಬಗೆಹರಿಸುವಂತಹ ಪ್ರಯತ್ನಗಳನ್ನು ಮಾಡಬೇಕು. ಅವರ ಬೇಡಿಕೆಯೂ ಬಂದಂತಹ ಸಂದರ್ಭದಲ್ಲಿ ಕೊಟ್ಟಂತಹ ಉತ್ತರ ಇವತ್ತು ಕೊಡುವಂತಹ ಅದೇ ಉತ್ತರ ಸಮಂಜಸವಾಗುವುದಿಲ್ಲ. ಇದರ ಮಧ್ಯೆ ಸಾಕಷ್ಟು ವ್ಯತ್ಯಾಸಗಳು ಬಂದಿವೆ, ಇದರ ಬಗ್ಗೆ ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿದೆ. ಈ ಮಾತು ಮುಖ್ಯಮಂತ್ರಿಗಳ ಆದೇಶದ ಮೇಲೆ ಹೇಳಿದ್ದಲ್ಲ. ವೀರಪ್ಪನ್‌ನ ಬಂಧನಕ್ಕೆ ನಿಯೋಜಿಸಲ್ಪಟ್ಟಿರುವ ವಿಶೇಷ ಪೋಲೀಸರ ಕಾರ್ಯಾಚರಣೆಗೆ ಕಾತುರರಾಗಿದ್ದು ಸರ್ಕಾರದ ಆದೇಶವನ್ನು ಎದುರು ನೋಡುತ್ತಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಹೇಳಿಕೆಗಳನ್ನು ಕೊಡುವ ಮೊದಲೇ ನಮ್ಮ ರಾಜ್ಯದ ಪೋಲೀಸ್ ಮಹಾನಿರ್ದೇಶಕರು ಹೇಳುತ್ತಾರೆ. ಇದು ನಿಜ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ, ನಿಜವಾಗಿ ನಮ್ಮ ಪೋಲೀಸ್ ಇಲಾಖೆಗೆ ಆ ರೀತಿಯಾದಂತಹ ಒಂದು ಮನೋಬಲ ಇರಬೇಕಾಗುತ್ತದೆ, ಏಕೆಂದರೆ ನಾವು ಮಾಡುತ್ತೇವೆಂಬ ಛಲ ಇರಲೇಬೇಕಾಗುತ್ತದೆ, ಅದಕ್ಕಾಗಿ ಅವರು ಮಾಡುತ್ತೇವೆಂದು ಹೇಳಿದರು. ವೀರಪ್ಪನ್‌ನನ್ನು ಜೀವಸಹಿತವಾಗಿ ಅಥವಾ ಕೊಂದಾದರೂ ನಮ್ಮ ಕೆಲಸವನ್ನು ಮಾಡುತ್ತೇವೆಂದು ಅವರು ಹೇಳುತ್ತಾರೆ. ಹಾಗೆಯೇ ಕಾರ್ಯಚರಣೆಯ ಹಂತದಲ್ಲಿ ಯಾವುದೇ ರಾಜಕೀಯ ಒತ್ತಡಗಳು ಬರುವುದಿಲ್ಲವೆಂದು ಅವರು ಹೇಳಿದ್ದಾರೆ. ಇದರ ಬಗ್ಗೆ ಯಾರು ರಾಜಕೀಯ ಒತ್ತಡವನ್ನು ಮಾಡುತ್ತಿದ್ದಾರೆ? ಇದರ ಬಗ್ಗೆ ಯಾವ ಅವ್ಯವಸ್ಥೆಗಳು ಆಗಿದೆ ಇವರು ಯಾವ ರೀತಿಯಾಗಿ ಹೇಳಿಕೆಗಳನ್ನು ಕೊಡಬೇಕಾಗಿದೆ. ಅಧಿಕಾರಿ ವರ್ಗಕ್ಕೂ ಆಡಳಿತ ವರ್ಗಕ್ಕೂ ಈ ರೀತಿಯ ಗೊಂದಲವಿದೆ. ಇವತ್ತು ಕೂಡ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಗೊಂದಲವಿದೆ. ಯಾವರೀತಿ ಕಾರ್ಯಾಚರಣೆ ಮಾಡಬೇಕೆನ್ನುವ ಬಗ್ಗೆ ಗೊಂದಲವಿದೆ. ಈ ರೀತಿಯ ಗೊಂದಲವಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಹಿಂದೆ ಇದ್ದಂತಹ ಅಧಿಕಾರಿಗಳು ವೀರಪ್ಪನ್ ವಿಷಯ ನಮಗೆ ಗೊತ್ತುಂಟೆಂದು ಹೇಳುವ ವಿಷಯ ಮತ್ತು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಡುವುದು ಇದು ಪರೋಕ್ಷವಾಗಿ ವೀರಪ್ಪನ್‌ಗೆ ಬೆಂಬಲ ಕೊಡುವಂತಹ ಕೆಲಸವನ್ನು ಮಾಡಬಾರದು. ವೀರಪ್ಪನ್‌ಗೆ ಬೆಂಬಲ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಅವನ ಪರಿಚಯವಿದೆಯೆಂದು ಹೇಳಿದ್ದಾರೆ. ಮೊದಲು ಅವರ ಚರಿತ್ರೆಯನ್ನು ತಿಳಿದುಕೊಳ್ಳಬೇಕು. 10-15 ವರ್ಷಗಳಿಂದ ಅವನ ಪರಿಚಯ ಇದೆಯೆಂದು ಹೇಳಿದ್ದಾರೆ. ಈ ಜವಾಬ್ದಾರಿಯುತ ಅಧಿಕಾರಿಗಳ ಸಂಬಂಧ ಜನರಿಗೆ ಗೊತ್ತಾಗಬೇಕು. ಇದರ ಬಗ್ಗೆ ತನಿಖೆಯಾಗಬೇಕು. ಪೋಲೀಸ್ ವಲಯದಲ್ಲಿ ಈ ರೀತಿ ಆಗಬಾರದು. ಈ ಬಗ್ಗೆ ಹೆಚ್ಚಿನ ಒತ್ತು ಕೊಡಬೇಕೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಕೇಂದ್ರ ಸರ್ಕಾರದ ಜವಾಬ್ದಾರಿ ಏನೆಂದು ಹೇಳಬೇಕಾಗುತ್ತದೆ. ರಾಜ್ಯ ಸರ್ಕಾರಗಳು ವಿಭಿನ್ನವಾದ ತಮ್ಮ ಹೇಳಿಕೆಗಳನ್ನು ಮುಂದಿಟ್ಟಾಗ

ಕೇಂದ್ರ ಸರ್ಕಾರ ಕೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಅದಕ್ಕೆ ಮಾನಸಿಕವಾಗಿ ತಯಾರಾಗಿದೆ. ಪ್ರಾರಂಭಿಕ ಹಂತದಿಂದ ಕೇಂದ್ರ ಸರ್ಕಾರದ ಮಂತ್ರಿಗಳು ತಮಿಳುನಾಡು ಮುಖ್ಯಮಂತ್ರಿಯವರನ್ನು ಭೇಟಿಯಾಗಲು ಈ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಹೋಗಿ ಅವರನ್ನು ಭೇಟಿ ಮಾಡುವುದರಿಂದ ಹಿಡಿದು ಅದಕ್ಕೆ ಸಹಕಾರವನ್ನು ಇವತ್ತಿನ ತನಕ ಕೊಡುತ್ತಿದ್ದಾರೆ. ರಾಜ್ಯಸರ್ಕಾರ ಸ್ಪಷ್ಟವಾದ ಮಾತುಗಳಲ್ಲಿ ಸ್ಪಷ್ಟವಾದ ರೀತಿಯಲ್ಲಿ ಕೇಂದ್ರ ಸರ್ಕಾರವನ್ನು ಕೇಳಲಿ. ಅವರ ಬೆಂಬಲ ಮುಂದುವರಿಯುತ್ತದೆ. ಮಾನಸಿಕ ಸ್ಥಿಮಿತವನ್ನು ಸರಿಯಾಗಿ ಇಟ್ಟುಕೊಳ್ಳದೆ ಅವರಲ್ಲಿ ಕೇಳುವುದು ಸರಿಯಾಗುವುದಿಲ್ಲ. ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ನಿಲುವು ಬಂದಂತಹ ರೀತಿ ನಿಮಗೆ ಗೊತ್ತಿದೆ. ಅವರು ಚೆನ್ನಾಗಿ ನಿರ್ವಹಣೆ ಮಾಡುತ್ತಾರೆ, ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಕರ್ನಾಟಕದಲ್ಲಿ ಕೊನೆಯ ಹಂತದಲ್ಲಿ ಬಂದಂತಹ ಎರಡು ಮೂರು ಅಪರಿಚಿತ ವ್ಯಕ್ತಿಗಳು ಅವರು ನಮ್ಮ ಅಧಿಕೃತ ಸಂಧಾನಕಾರರಲ್ಲವೆಂದು ಹೇಳಿದಾಗ ಅಧಿಕೃತ ಸಂಧಾನಕಾರರಂತೆ ವರ್ತನೆ ಮಾಡಿದಂತಹ ವ್ಯಕ್ತಿ, ಇವರಿಗೆ ಸಂಬಂಧಪಟ್ಟ ಬೇರೆ ಬೇರೆ ರೀತಿಯ ವ್ಯವಸ್ಥೆಗಳು ಅದರ ಬಗ್ಗೆ ತಿಳಿದುಕೊಳ್ಳಲು ತುಂಬಾ ಕಾತುರರಾಗಿದ್ದೇವೆ. ಏಕೆಂದರೆ ಕಾರ್ಯಾಚರಣೆಯ ಕೊನೆಯ ಹಂತದಲ್ಲಿ ಎಲ್ಲವನ್ನು ಮಾಡಿದ ಮೇಲೆ ಬೆನ್ನು ತಟ್ಟಿಸಿಕೊಳ್ಳುವ ಕೆಲಸವನ್ನು ಮಾಡಿದ ಡಾ: ಭಾನು ಅಂದರೆ ಯಾರು? ನನಗೆ ತಿಳಿದ ಪ್ರಕಾರ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಮಗೆ ಗೊತ್ತಿದೆ, ಅವರು ಬೇರೆ ಬೇರೆ ಬ್ಯಾಂಕುಗಳಿಗೆ ಹೋಗಿ ಮಾಡಿದವರು. ಗ್ರಾನೈಟ್ ಹಿನ್ನೆಲೆಯಲ್ಲಿರುವಂತಹ ವ್ಯಕ್ತಿಗಳು. ಬೇರೆ ಬೇರೆ ವ್ಯವಹಾರಗಳನ್ನು ಮಾಡಿಕೊಂಡಿದ್ದವರು. ಟೀಣ್ಣಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ರಾಂಚಿನಲ್ಲಿ ಸುಮಾರು 1ಕೋಟಿ 40 ಸಾವಿರ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡು ಅದಕ್ಕೆ ಮೋಸ ಮಾಡುವಂತಹ ವ್ಯವಸ್ಥೆಗಳನ್ನು ಮಾಡುವವರು. ಇದೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ಅಧಿಕೃತವಾಗಿ ನಮಗೇನೂ ಮಾಹಿತಿಯಿಲ್ಲ. ಆದರೆ, ಇದರ ಬಗ್ಗೆ ಕೂಲಂಕುಷವಾಗಿ ತನಿಖೆಯಾಗಬೇಕು. ಅವರು ಯಾರು? ಅವರು ಏಕೆ ಇದಕ್ಕೆ ಸೇರಿಕೊಂಡರು? ಅವರ ಹಿನ್ನೆಲೆಯೇನು? ಇಲ್ಲಿ ಸೇರಿಕೊಂಡು ಅವರ ಬೇಳೆ ಬೇಯಿಸುವುದಕ್ಕೆ ಇದನ್ನೆಲ್ಲಾ ಮಾಡುತ್ತಾರೆ. ಇವರ ಮುಖಾಂತರ ತಮಿಳು ಉಗ್ರಗಾಮಿಗಳಿಗೆ ಪರೋಕ್ಷವಾಗಿ ಬೆಂಬಲವನ್ನು ಕೊಡುವಂತಹ ವ್ಯವಸ್ಥೆಯಿದೆ. ಇದರ ಬಗ್ಗೆ ಕೂಲಂಕುಷವಾಗಿ ತನಿಖೆಯಾಗಬೇಕು. ಇದನ್ನು ಪರಿಸಮಾಪ್ತಿಗೊಳಿಸುವಂತಹ ಅವಶ್ಯಕತೆಯಿದೆ. ಇದನ್ನೆಲ್ಲ ಹತ್ತಿಕ್ಕಬೇಕೆಂದರೆ ನ್ಯಾಯಾಂಗ ತನಿಖೆಯಾಗಬೇಕು. ಇದು ಸಣ್ಣ ತನಿಖೆಗಳಿಂದ ಆಗುವುದಿಲ್ಲ. ಇದರಲ್ಲಿ ಭಾರಿ ವಿಚಾರಗಳಿವೆ, ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಹಾಗೆ ಮಾಡಿದರೆ ಎಲ್ಲಾ ವಿಷಯಗಳು ಹೊರಬೀಳುವಂತಹ ಸಾಧ್ಯತೆಗಳಿವೆ. ಕಾರ್ಯಾಚರಣೆ ಪ್ರಗತಿಯಲ್ಲಿ ಆಗುವ ಅವಶ್ಯಕತೆ ಇದೆ. ವೀರಪ್ಪನ್ ಕಾಡಿನಲ್ಲಿ ಇದ್ದಾನೋ ಇಲ್ಲವೋ ಗೊತ್ತಿಲ್ಲ. ಮೇಲ್ನೋಟದಲ್ಲಿ ಎಲ್ಲರೂ ಅವರು ಎಲ್ಲಿದ್ದಾರೆಂದು ಗೊತ್ತಿಲ್ಲವೆನ್ನುವ

ಸಂಶಯವನ್ನು ವ್ಯಕ್ತಪಡಿಸಿದ್ದಾರೆ ಅವರು ಶ್ರೀಲಂಕಾಕ್ಕೆ ಹೋಗಿದ್ದಾರೆ, ಎಲ್ಲಿದ್ದಾರೆಂದು ಗೊತ್ತಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ಈ ಸಂದರ್ಭದಲ್ಲಿ ಚರ್ಚೆ ಮಾಡುವುದು ಬೇಡ. ಇದಕ್ಕೆ ಸಮಂಜಸ ಪರಿಹಾರವನ್ನು ಕಂಡುಹಿಡಿಯುವ ಬಗ್ಗೆ ಇಲ್ಲಿ ಚರ್ಚೆಯಾಗಬೇಕೇ ಹೊರತು ಬರೀ ಚರ್ಚೆಗೆಂದು ಹೇಳುವುದಿಲ್ಲ. ನಾವು ಪ್ರತಿ ಸ್ಪಂದಿಸಬೇಕೆಂದು ಹೇಳುವುದಲ್ಲ. ನೀವೇನು ಮಾಡುತ್ತೀರಿ? ಯಾವ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ತಮ್ಮಿಂದ ಅಪೇಕ್ಷಿಪಡುತ್ತೇನೆ. ಇದರ ಬಗ್ಗೆ ನ್ಯಾಯಾಂಗ ತನಿಖೆಗೆ ಆಗ್ರಹಪಡಿಸಿ, ಇದು ಕರ್ನಾಟಕಕ್ಕೆ ಮಾತ್ರವಲ್ಲ ಎರಡೂ ರಾಜ್ಯಗಳನ್ನೂ ಮುನ್ನಡೆಸುವ ದಿಕ್ಕಿನಲ್ಲಿ ಹೋಗುವ ವ್ಯವಸ್ಥೆಯಾಗಬೇಕು. ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಸಂಶಯಗಳು ಇವೆ. ಪತ್ರಿಕಾ ಹೇಳಿಕೆಗಳು ಮತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ಒಂದು ವರದಿ ಏನಿದೆ ಅವುಗಳ ಬಗ್ಗೆ ಇರತಕ್ಕಂತಹ ಸಂಶಯವನ್ನು ನಿವಾರಣೆ ಮಾಡಿಕೊಟ್ಟರೆ ಸಾಕು. ಕರುಣಾನಿಧಿ ಮತ್ತು ನೆಡುಮಾರನ್ ಸ್ವಹೋಕ್ತಿ ವರದಿ, ಷರತ್ತುಗಳಿಗೆ ಒಪ್ಪಿದ್ದರಿಂದ ರಾಜ್‌ರವರ ಬಿಡುಗಡೆ. ಷರತ್ತುಗಳೇನೆಂದರೆ, ಕ್ಷಮಾಧಾನ, ಟಾಡಾ ಬಂಧಿಗಳ ಬಿಡುಗಡೆಯ ಭರವಸೆ, ಒತ್ತೆ, ಹಣ, ಮತ್ತು ವಿದ್ಯುನ್ಮಾನ ಸೌಲಭ್ಯ ಸಮ್ಮತಿ ಬಗ್ಗೆ ಅವರು ಇಬ್ಬರೂ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ನನಗೆ ಬೇಕಾಗಿರತಕ್ಕದ್ದು ಇಷ್ಟು ವಿಚಾರ. ಸಂಧಾನಕಾರರು ಯಾರು? ಅನಧಿಕೃತ ಸಂಧಾನಕಾರರು ಯಾರು? ಅಧಿಕೃತ ಸಂಧಾನಕಾರರು ಯಾರು? ಅನಧಿಕೃತ ಸಂಧಾನಕಾರರಿಂದ, ಅವರ ಸಹಾಯದಿಂದ ಡಾ: ರಾಜ್‌ಕುಮಾರ್ ಬಿಡುಗಡೆಯಾಗಿದ್ದರೆ ಸರ್ಕಾರದ ಪಾತ್ರವೇನು? ಹಣ ಪಾವತಿ ಮಾಡಿಲ್ಲವೆಂಬ ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ನಂಬುವುದಾದರೆ ಟಾಡಾ ಖೈದಿಗಳನ್ನು ಬಿಡದಿದ್ದರೆ ಡಾ: ರಾಜ್‌ಕುಮಾರ್‌ರವರನ್ನು ಬಿಡುವುದಿಲ್ಲವೆಂದು ಹೇಳಿದ್ದರು; ಹಾಗಾದರೆ ಬಿಟ್ಟರು ಏಕೆ? ಡಾ: ರಾಜ್‌ಕುಮಾರ್‌ರವರ ಕುಟುಂಬಕ್ಕೆ ಮತ್ತು ವೀರಪ್ಪನ್‌ಗೆ ಸಂಬಂಧವಿದೆಯೆಂದು ದಟ್ಟ ವದಂತಿ ಇದೆ. ಇದು ಎಷ್ಟರಮಟ್ಟಿಗೆ ಸತ್ಯವೆನ್ನುವ ಬಗ್ಗೆ ಬೆಳಕು ಚೆಲ್ಲಬೇಕು. ಅನಂತರ ಡಾ: ರಾಜ್‌ಕುಮಾರ್‌ರವರು ಸಾಮಾನ್ಯ ವ್ಯಕ್ತಿಯಲ್ಲ. ಅವರಿಗೆ ಸಾಕಷ್ಟು ಬಂದೋಬಸ್ತು ಮಾಡಬೇಕೆನ್ನುವುದು ಸರ್ಕಾರದ ಗಮನದಲ್ಲತ್ತು. ಅವರು ಬಂದೋಬಸ್ತು ಬೇಡವೆಂದರೂ ನೀವು ಕೊಡಬೇಕಾಗಿತ್ತು ಅದು ಸರ್ಕಾರದ ಕರ್ತವ್ಯ. ಅವರ ಅಪಹರಣವಾದ ದಿವಸ ಒಂದು ಪಕ್ಷ ಸರಿಯಾದ ಬಂದೋಬಸ್ತು ಕೊಟ್ಟಿದ್ದರೆ ಚೆನ್ನಾಗಿತ್ತು. ಏಕೆಂದರೆ ತಮಿಳುನಾಡಿನವರು ಆ ಕಡೆಯಿಂದ ಹೇಳುತ್ತಿದ್ದಾರೆ ರಾಜ್‌ಕುಮಾರ್‌ರವರು ಗಾಜನೂರಿಗೆ ಬರುತ್ತಿದ್ದಾರೆಂದು ನಮಗೆ ತಿಳಿಸಿದ್ದರೆ ನಾವು ಆ ಕಡೆಗೆ ಗಮನ ಕೊಡುತ್ತಿದ್ದೋ ಮತ್ತು ರಕ್ಷಣೆಯನ್ನು ಕೊಡುತ್ತಿದ್ದೋ ಎಂದು

ಹೇಳಿದ್ದಾರೆ. ಅವರು ರಕ್ಷಣೆ ಕೊಡಬೇಕು, ಇಲ್ಲ ನೀವು ರಕ್ಷಣೆ ಕೊಡಬೇಕಾಗಿತ್ತು. ಇವು ಎರಡೂ ಆಗದೇ ಮಾಡಿದಂತಹ ಸಣ್ಣ ತಪ್ಪಿನಿಂದ ಇವತ್ತು ಇಷ್ಟೆಲ್ಲಾ ಗೊಂದಲವಾಗಿದೆ. ರಾಜ್‌ಕುಮಾರ್ ಮತ್ತು ಸರ್ಕಾರ 108 ದಿವಸ ಕತ್ತಲೆಯಲ್ಲಿರಬೇಕಾದ ಒಂದು ಗೊಂದಲವಾಯಿತು. ಅನಂತರ ಪತ್ರಿಕೆಗಳಲ್ಲಿ ನೆಡುಮಾರನ್ ಒಂದು ಮಾತನ್ನು ಹೇಳಿದ್ದಾರೆ. ಮುಖ್ಯಮಂತ್ರಿಗಳು ಇಲ್ಲಿ ಉಗ್ರಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದು ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿ ಬಂದಿದೆ. ಅವರ ಷರತ್ತಿನಲ್ಲಿ ನೆಡುಮಾರನ್‌ರವರು ಒಂದು ಮಾತನ್ನು ಹೇಳುತ್ತಾರೆ, ಎಲ್ಲಿಯವರೆಗೆ ಎಸ್‌ಟಿಎಫ್ ಕಾರ್ಯಾಚರಣೆ ನಡೆಯುವುದಿಲ್ಲ ಅಲ್ಲಿಯವರೆಗೆ ಅಪಹರಣದಂತಹ ನಾಟಕದಲ್ಲಿ ತೊಡಗುವುದಿಲ್ಲವೆನ್ನುವಂತಹ ವಿಶ್ವಾಸ ನಮ್ಮದು ಎನ್ನುವ ಮಾತನ್ನು ಹೇಳಿದ್ದಾರೆ. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಕಾರ್ಯಾಚರಣೆ ಮಾಡಿದರೆ ಅಪಹರಣ ಮಾಡುವುದಕ್ಕೆ ಸಿದ್ಧನಿದ್ದಾನೆ ಎನ್ನುವ ಅರ್ಥದಲ್ಲಿ ಪತ್ರಿಕೆಗಳಲ್ಲಿ ಹೇಳಿಕೆ ಬರುತ್ತಿದೆ. ಮತ್ತೊಂದು ಪ್ರಮುಖವಾಗಿರತಕ್ಕ ವಿಚಾರ; ಇದು ಕೇವಲ ಹಣಕ್ಕಾಗಿ ಆಗಿರತಕ್ಕ ಅಪಹರಣವೆಂದು ನಾನು ಭಾವಿಸುವುದಿಲ್ಲ. ನನಗೆ ಬಂದಿರತಕ್ಕ ಅನುಮಾನದ ಪ್ರಕಾರ ರಾಜ್‌ಕುಮಾರ್‌ರವರನ್ನು ಹಿಡಿದುಕೊಂಡು ಹೋಗುವುದಕ್ಕೆ ಮುಂಚೆ ಗಂಧದ ಮರಗಳನ್ನು ಕಡಿದು ಮಾರಾಟ ಮಾಡುತ್ತಿದ್ದ ಆಮೇಲೆ ಆನೆ ದಂತಗಳನ್ನು ಕದಿಯುತ್ತಿದ್ದ. ಆದರೆ ವೀರಪ್ಪನ್ ರಾಜ್‌ಕುಮಾರ್‌ರವರನ್ನು ಬಿಡುವುದಕ್ಕೆ ಏನು ಷರತ್ತು ಹಾಕುತ್ತಾನೆಂದರೆ, ಕಾವೇರಿ ನೀರು ಹರಿಸಬೇಕು, ತಿರುವಳ್ಳುವರ್ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಅನಾವರಣ ಮಾಡಬೇಕು, ತಮಿಳು ಭಾಷೆಯನ್ನು ರಾಜ್ಯದಲ್ಲಿ ಎರಡನೇ ಅಧಿಕೃತ ಭಾಷೆಯೆಂದು ಸ್ವೀಕಾರ ಮಾಡಬೇಕು. ಟಾಡಾ ಕೈದಿಗಳನ್ನು ಬಿಡಬೇಕು ಇದನ್ನು ತಮಿಳುನಾಡು ಸರ್ಕಾರದಲ್ಲಿ ಹೇಳಿರತಕ್ಕ ವಿಚಾರ. ಸುಪ್ರೀಂ ಕೋರ್ಟ್‌ನಲ್ಲಿ ಜಡ್ಜ್ ತೀರ್ಪು ಕೊಡತಕ್ಕ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ. ರಾಜ್‌ಕುಮಾರ್ ಅಪಹರಣವಾಗುವವರೆಗೆ ಸರ್ಕಾರಕ್ಕೆ ವೀರಪ್ಪನ್ ಮತ್ತು ಉಗ್ರಗಾಮಿಗಳ ಸಂಬಂಧ ಗೊತ್ತಿರಲಿಲ್ಲವೆ? ಮತ್ತು ಗುಪ್ತಚಾರ ಇಲಾಖೆ ಏನು ಮಾಡುತ್ತಿತ್ತು? ಇದು ಅತ್ಯಂತ ಪ್ರಮುಖವಾಗಿರತಕ್ಕ ಮತ್ತೊಂದು ವಿಚಾರ. ವೀರಪ್ಪನ್ 130ಕ್ಕೂ ಹೆಚ್ಚು ಜನರನ್ನು ಕೊಲ್ಲಲು ಕಾರಣನಾಗಿದ್ದಾನೆ. ಸಾವಿರಾರು ಆನೆಗಳನ್ನು ಕೊಂದಿದ್ದಾನೆ. ಗಂಧದಮರಗಳನ್ನು ಕಳ್ಳಸಾಗಾಣಿಕೆ ಮಾಡಲು ಹಲವರ ಕೈವಾಡ ಇದೆ. ಇಂತಹ ವೀರಪ್ಪನ್‌ನನ್ನು ಬಂಧಿಸುವುದಕ್ಕೆ ಕ್ರಮ ಕೈಗೊಳ್ಳಬಾರದಿತ್ತೆ ಎನ್ನುವ ಪ್ರಶ್ನೆಗಳನ್ನು ಸುಪ್ರೀಂ ಕೋರ್ಟ್ ಎತ್ತಿದೆ. ರಾಜಕಾರಣಿಗಳ ಹಾಗೂ ಅಧಿಕಾರಿಗಳ ಪರೋಕ್ಷ ಬೆಂಬಲವಿಲ್ಲದೆ ಇದುವರೆಗೆ ವೀರಪ್ಪನ್ ಇಂತಹ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ನೆಡುಮಾರನ್ ಹೇಳಿರತಕ್ಕದ್ದು. ಅತ್ಯಂತ ಪ್ರಮುಖವಾಗಿರತಕ್ಕದ್ದು. ದುಷ್ಮನ್ ಎಲ್ಲಿದ್ದಾನೆ ಅಂದರೆ ಬಗಲ್ ಮೇ ಹೈ ಅಂದಹಾಗೆ, ದುಷ್ಮನ್ ಕಹಾ ಹೈ ಬಗಲ್ ಮೇ ಹೈ ಎಂದು ಪ್ರಸ್ತಾಪವಾಗಿದೆ. ರಾಜಕಾರಣಿಗಳು ಮತ್ತು ಅಧಿಕಾರಿಗಳು ಯಾರೆಂದು ಮೊದಲು ಪತ್ತೆಯಾಗಬೇಕು. ಯಾವ ರಾಜಕಾರಣಿಗಳಿದ್ದಾರೆ, ಯಾವ ಅಧಿಕಾರಿಗಳಿದ್ದಾರೆಂದು

ಇಲ್ಲಿಂದ ತನಿಖೆಯನ್ನು ಪ್ರಾರಂಭ ಮಾಡಿದರೆ ವೀರಪ್ಪನ್ ಹಿಡಿಯುವುದು ಕಷ್ಟವೇನಲ್ಲ. ನಕ್ಕೀರನ್ ಗೋಪಾಲ್ ಕಾಡಿಗೆ ಹೋಗುತ್ತಾರೆ ಬರುತ್ತಾರೆ, ನೆಡುಮಾರನ್ ಹೋಗುತ್ತಾರೆ. ಡಾ: ಭಾನುಮತಿಯವರು ಕಾಡಿಗೆ ಹೋಗುತ್ತಾರೆ. ನಮ್ಮ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ವೀರಪ್ಪನನ್ನು ಹಿಡಿಯುವುದಕ್ಕೆ ಆಗುತ್ತಿಲ್ಲ. ಇವರು ಹೋಗುತ್ತಾರೆ ಬರುತ್ತಾರೆ. ಅವರು ಹೇಳುವ ಮಾತನ್ನು ನಾವು ನಂಬಬೇಕಾಗುತ್ತದೆ. ಯಾರದೋ ಕೈವಾಡ ಇದರಲ್ಲಿದೆ. ಅಲ್ಲಿಂದ ಪತ್ತೆ ಮಾಡಬೇಕು. ಇಷ್ಟು ಸಂಶಯಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಸಾಕು. ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :— ಮಾನ್ಯ ಉಪಾಧ್ಯಕ್ಷರೇ, ಡಾ: ರಾಜ್‌ಕುಮಾರ್ ಅವರ ಬಿಡುಗಡೆಯಾದಮೇಲೆ ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸಿದ ಹಾಗೆ ಈ ದಿವಸ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಹೇಳಿಕೆಯ ಹಿನ್ನಲೆಯಲ್ಲಿ ಸರ್ಕಾರ ಎಲ್ಲಿ ಲೋಪವನ್ನು ಮಾಡಿದೆ, ನಿರ್ಲಕ್ಷ್ಯ ಮಾಡಿತ್ತು, ಇದಕ್ಕೆ ಯಾರು ಕಾರಣ ಎನ್ನುವುದರ ಬಗ್ಗೆ ಈಗಾಗಲೇ ಸಾಕಷ್ಟು ಸದನದಲ್ಲಿ ಚರ್ಚೆಯಾಗಿದೆ. ಈ ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷದ ಅವಧಿಯಲ್ಲಿ ಎಸ್.ಟಿ.ಎಫ್ ಆಕ್ಷನ್ ಏನೂ ಮಾಡಿಲ್ಲ. ಮುಖ್ಯಮಂತ್ರಿಗಳಿಗೆ ಮಾಹಿತಿ ಕೊಡುವುದಕ್ಕೆ ಹಲವಾರು ಇಲಾಖೆಗಳು ಇವೆ. ಡಿ.ಜಿ.ಪಿ.ಯವರು ಹೋಮ್ ಸೆಕ್ರೆಟರಿ, ಇಂಟಲಿಜೆನ್ಸ್ ಹೀಗೆ ನೂರೆಂಟು ಕಡೆಯಿಂದ ಮಾಹಿತಿ ಬರುತ್ತದೆ. ಆಗಿಂದಾಗ್ಗೆ ಎಲ್ಲ ಮಾಹಿತಿಗಳನ್ನು ಸರ್ಕಾರಕ್ಕೆ ಅವರು ಒದಗಿಸಿಕೊಡಬೇಕು. ನಮ್ಮ ಗಡಿ ಪ್ರದೇಶದಲ್ಲಿ ಏನೇನು ಆಗುತ್ತದೆ, ಎಲ್ಲೆಲ್ಲಿ ಕಾರ್ಯಚಟುವಟಿಕೆಗಳು ಇವೆ. ಎಲ್ಲೆಲ್ಲಿ ಎಲ್.ಟಿ.ಟಿ.ಇ.ಯವರ ಕಾರ್ಯಚಟುವಟಿಕೆ ಇದೆ, ನಕ್ಸಲೈಟ್ಸ್ ಇದ್ದಾರೆ, ಎಲ್ಲಿ ಬಾಂಬಿಂಗ್ಸ್ ಆಗುತ್ತದೆ, ಇದೆಲ್ಲದರ ಬಗ್ಗೆ ಗಡಿಭಾಗದಲ್ಲಿರುವ ಟಾಸ್ಕ್‌ಫೋರ್ಸ್ ಕ್ರಮವನ್ನು ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಗಳೇ ಎಲ್ಲವನ್ನೂ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಅಧಿಕಾರಿಗಳು ಪ್ರತಿ ದಿವಸ ಮುಖ್ಯಮಂತ್ರಿಗಳಿಗೆ ಅಥವಾ ಗೃಹ ಸಚಿವರಿಗೆ ಏನೇನು ರಾಜ್ಯದಲ್ಲಿ ಆಗುತ್ತಿದೆ, ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ಮಾಹಿತಿ ಕೊಡಬೇಕು. ಈ ಮಾಹಿತಿ ಕೊಟ್ಟಿದ್ದರೂ ಸಹ ಎಸ್.ಟಿ.ಎಫ್ ಆಕ್ಷನ್ ಯಾವ ರೀತಿ ಇದೆ, ಅಥವಾ ರಾಜ್‌ಕುಮಾರ್ ಅವರ ಅಪಹರಣದಿಂದ ಇಷ್ಟೆಲ್ಲಾ ಇವತ್ತು ಕಣ್ಣಿಗೆ ಬರುವುದು ಆಯಿತು. ಇಲ್ಲದಿದ್ದರೆ ಇವತ್ತು ಕೂಡ ನಾವು ಸುಮ್ಮನೆ ಕಣ್ಣುಮುಚ್ಚಿಕೊಂಡು ಇರುತ್ತಿದೆವು. ಇವತ್ತು ರಾಜ್‌ಕುಮಾರ್ ಅವರ ಅಪಹರಣದ ಬಗ್ಗೆ ಅರ್ಕೇಶ್ ಅವರು ವರದಿ ಕೊಟ್ಟಿದ್ದರೂ ಸಹ, ಅವರಲ್ಲದೆ ಇನ್ನೂ ಅನೇಕ ಪ್ರಮುಖರು ರಾಜ್ಯದಲ್ಲಿ ಹಿಟ್ ಲಿಸ್ಟ್‌ನಲ್ಲಿದ್ದಾರೆ, ರಾಜಕಾರಣಿಗಳು, ಬೇರೆಬೇರೆಯವರ ಬಗ್ಗೆ ಬ್ಲಾಕ್‌ಮೇಲ್ ತಂತ್ರವನ್ನು ವೀರಪ್ಪನ್ ಏನು ಮಾಡುತ್ತಿದ್ದಾನೆ, ಅದಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ನಮ್ಮ ಎಚ್ಚರಿಕೆ ಏನು? ಸರ್ಕಾರ ಎಚ್ಚರಿಕೆ ತಪ್ಪಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮುಖ್ಯಮಂತ್ರಿಗಳು

ಅನೇಕ ಬಾರಿ ಹೇಳಿದ್ದಾರೆ ಏನೆಂದರೆ ನಾವು ಲೋಪ ಮಾಡಿದ್ದೇವೆ, ನಾವು ತಪ್ಪು ಮಾಡಿದ್ದೇವೆ ಎಂದು. ಇವತ್ತು ಈ ತಪ್ಪನ್ನು ತಿದ್ದಿಕೊಳ್ಳುತ್ತೇವೆ ಎಂದು ಅವರು ಅನೇಕ ಸಾರಿ ಅವರು ಹೇಳಿದ್ದಾರೆ. ಇದಕ್ಕೆ ಕಾರಣ ಏನು? ಇವತ್ತು ರಾಜ್‌ಕುಮಾರ್ ಅವರು ದೊಡ್ಡ ಗಾಜನೂರಿಗೆ ಹೋಗುವಂಥ ಸಂದರ್ಭದಲ್ಲಿ, ಐದಾರು ದಿವಸ ಅಲ್ಲಿ ಮನೆಯ ಗೃಹಪ್ರವೇಶ ಅಥವಾ ಮನೆ ಕಟ್ಟುವಂಥ ವ್ಯವಸ್ಥೆಯಲ್ಲಿ ತಮಿಳುನಾಡು ಪ್ರದೇಶದಲ್ಲಿರುವ ಅವರ ಊರಿಗೆ ಹೋಗಿ ಅವರು ಅಲ್ಲಿ ಕಾರ್ಯಮಗ್ನರಾಗಿದ್ದಾಗ ಅಲ್ಲಿಯ ಸ್ಥಳೀಯ ಪೋಲೀಸರಿಂದ ಮಾಹಿತಿಯೇ ಇಲ್ಲ. ರಾಜ್‌ಕುಮಾರ್ ಅವರ ಮೂವ್‌ಮೆಂಟ್ಸ್ ಬಗ್ಗೆ ಮಾಹಿತಿ ಇಲ್ಲ. ರಾಜ್‌ಕುಮಾರ್ ಅವರು ಹೋಗಿದ್ದಾರೆ, ಅವರಿಗೆ ಸೂಕ್ತ ರಕ್ಷಣೆ ಕೊಡಬೇಕು, ಇಲ್ಲವಾದರೆ ಏನಾಗುತ್ತದೆ ಎಂಬುದರ ಬಗ್ಗೆ ಅವರು ಸಂಪೂರ್ಣವಾಗಿ ಮರೆತರು. ಸರ್ಕಾರವೂ ನಿರ್ಲಕ್ಷ್ಯ ಮಾಡಿತು. ವೀರಪ್ಪನ್‌ಗೆ ಕೈಹಾಕಿ ಅವನನ್ನು ಕೆದಕುವುದಕ್ಕಿಂತ ಸುಮ್ಮನೆ ಇದ್ದರೆ ಒಳ್ಳೆಯದು ಎಂದು ಸರ್ಕಾರ ತಿಳಿದುಕೊಂಡಿತು. ಸುಮ್ಮನೆ ಅವನನ್ನು ಏಕೆ ಮೇಲಕ್ಕೆ ಎಬ್ಬಿಸಬೇಕು, ಅಲ್ಲಿ ನಿದ್ದೆ ಹೋಗುತ್ತಿದ್ದಾನೆ, ನಾವು ಕೂಡ ನಿದ್ದೆ ಹೋಗೋಣ, ಏನಾಗುತ್ತದೆ ಬಿಟ್ಟುಬಿಡೋಣ ಎಂದು ಕೊಂಡಿದ್ದು ಇದಕ್ಕೆ ಕಾರಣವಾಯಿತು. ಇವತ್ತು ನೂರೆಂಟು ದಿವಸಗಳ ಕಾಲ ನಮ್ಮ ರಾಜ್‌ಕುಮಾರ್ ಅವರನ್ನು ಇಟ್ಟುಕೊಂಡು ಏನೇನೂ ಊಹಾಪೋಹಗಳಿಗೆ ಅವಕಾಶ ಮಾಡಿಕೊಟ್ಟು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕಾರಣವಾಯಿತು. ಹೌದು ಐದು ಕೋಟಿ ಜನಕ್ಕೆ ಅವರು ಸುರಕ್ಷಿತವಾಗಿ ಹಿಂತಿರುಗಿ ಬರಲಿ ಎಂದು ಎಲ್ಲರಿಗೂ ಆತಂಕ ಇತ್ತು. ಈ ಮಧ್ಯೆ ನಡೆದಂಥ ಘಟನಾವಳಿಗಳೇನು? ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಇದು ನಮ್ಮ ಭಾಗದಲ್ಲಿ ಆಗಿಲ್ಲ ಎಂದು. ಮೊದಮೊದಲು ರಾಜ್‌ಕುಮಾರ್ ಅವರನ್ನು ಬಹಳ ಬೇಗ ಬಿಟ್ಟುಬಿಡುತ್ತಾನೆಂದು ತಿಳಿದು ಏನೋ ಆವೇಶಭರಿತರಾಗಿ ನಾಳೆ ನಿಮಗೆ ಅವರನ್ನು ಒಪ್ಪಿಸುತ್ತೇನೆ ಎಂದು ರಾಜ್‌ಕುಮಾರ್ ಕುಟುಂಬಕ್ಕೆ ಹೇಳಿದರು. ಅದಾದ ನಂತರ ದಿನೆದಿನೇ ಇದು ಮುಂದಕ್ಕೆ ಹೋಗಿ ಕೊನೆಗೆ ಸಂಧಾನಕಾರರು ಹೋಗುವಂಥಾದ್ದು ಆಯಿತು. ಮಾನ್ಯ ಸೋಮಶೇಖರ್ ಅವರು ಕೇಳಿದರು ಯಾರು ಅಧಿಕೃತ ಸಂಧಾನಕಾರರು ಎಂದು. ಇದರ ಬಗ್ಗೆ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ಹೇಳಬೇಕು. ಪಕ್ಕದ ರಾಜ್ಯದ ಕರುಣಾನಿಧಿಯವರು ಮತ್ತು ಅವರ ಸರ್ಕಾರ ಇದರಲ್ಲಿ ಏನು ಪಾತ್ರ ವಹಿಸಿತು ಎಂಬುದನ್ನು ಹೇಳಬೇಕು. ಎಸ್.ಟಿ.ಎಫ್ ಕರ್ನಾಟಕದಲ್ಲಿ ಕಾರ್ಯಾಚರಣೆ ಮಾಡಿದರೆ, ಈ ಭಾಗದಲ್ಲಿ ವೀರಪ್ಪನ್‌ಗೆ ರಕ್ಷಣೆ ಇತ್ತು ಎನ್ನುವುದು ನಮ್ಮ ಅನುಮಾನ ಇದೆ. ಆ ಕಡೆಗೆ ಹೋಗಿ ಅವನು ರಕ್ಷಣೆ ತೆಗೆದುಕೊಳ್ಳುತ್ತಾನೆ. ಎರಡು ಸರ್ಕಾರಗಳು ಪ್ರಯತ್ನ ಪಟ್ಟಾಗ ಹಿಂದಿನ ತಮಿಳುನಾಡು ಮಖ್ಯಮಂತ್ರಿಗಳು ಮತ್ತು ನಮ್ಮ ಸರ್ಕಾರ ಆಡಳಿತ ಮಾಡುವಂಥ ವ್ಯವಸ್ಥೆಯಲ್ಲಿದ್ದಾಗ ಎರಡೂ ಸರ್ಕಾರಗಳು ತೀವ್ರ ಪ್ರಯತ್ನದಿಂದಾಗಿ ಅವನ ಕಡೆಯವರ ಸಂಖ್ಯೆ ಕಡಿಮೆಯಾಯಿತು ಎನ್ನುವಂಥ ಮಾಹಿತಿ ಇದೆ. 5ಕ್ಕೆ ಅಥವಾ 3ಕ್ಕೆ

ಅವನ ಸಂಖ್ಯೆ ಬಂದಿತ್ತು. ಅವನು ಸರೆಂಡರ್ ಆಗುತ್ತಾನೆ, ಸರ್ಕಾರವನ್ನು ಕ್ಷಮಾಪಣೆ ಕೇಳಬಹುದು ಎನ್ನುವಂಥ ಮಾಹಿತಿ ಬಂದಿತ್ತು. ಈ ಪರಿಸ್ಥಿತಿ ಇರುವಾಗ ಅವನಿಗೆ ಅಲ್ಲಿ ಎಸ್.ಟಿ.ಎಫ್ ಆ್ಯಕ್ಷನ್ ಇಲ್ಲದೆ ಪರ ರಾಜ್ಯದವರು ರಕ್ಷಣೆ ಕೊಡುವುದಾದರೆ ನಾವು ಏನು ಅಂದುಕೊಳ್ಳಬೇಕು? ಈ 108 ದಿವಸಗಳು ಏನು ನಡೆಯಿತು ಅದೊಂದು ನಾಟಕ ಎಂದು ಹೇಳಬೇಕಾ? ರಾಜಕೀಯವಾಗಿ ಕೇಳುವಂಥ ಹೇಳಿಕೆಗಳು, ತಿರುವಳ್ಳರ ಪ್ರತಿಮೆಯನ್ನು ಇಲ್ಲಿ ಅನಾವರಣ ಮಾಡುವುದು, ತಮಿಳನ್ನು ಎರಡನೆ ಭಾಷೆಯಾಗಿ ಮಾಡುವುದು, ಮುಂದಿನ ದಿನಗಳನ್ನು ಗಮನದಲ್ಲಿಟ್ಟುಕೊಂಡು ಕಾವೇರಿ ನೀರು ಇಷ್ಟು ಟಿ.ಎಂ.ಸಿ. ಬಿಡಬೇಕು ಎಂದು ಹೇಳಿದರೆ ಅದು ವೀರಪ್ಪನ್‌ಗೆ ಹೇಗೆ ಗೊತ್ತಾಗುತ್ತದೆ? ಅವನಿಗೆ ದುಡ್ಡು ಬೇಕು. ಆತನದ್ದು ಬೇರೆ ಯಾವ ಬೇಡಿಕೆಯೂ ಇಲ್ಲ. ಈ ಬೇಡಿಕೆಗಳೆಲ್ಲವನ್ನೂ ಹುಟ್ಟುಹಾಕಿರುವಂಥಾದ್ದು. ಅಲ್ಲಿಂದ ಹತ್ತಾರು ಕ್ಯಾಸೆಟ್ಟುಗಳು ಏನು ಬಂದವು, ಅವುಗಳನ್ನು ತರುವುದಕ್ಕೆ ನಮ್ಮ ದೊಡ್ಡ ದೊಡ್ಡ ಪೋಲೀಸ್ ಅಧಿಕಾರಿಗಳು ಹೋದರು. ಅದು ಯಾರದ್ದು ಧ್ವನಿ? ರಾಜ್‌ಕುಮಾರ್ ಅವರ ಧ್ವನಿ ಎಂದು ತೋರಿಸಿದರು. ಪ್ರತಿದಿನ ಟಿ.ವಿ.ಯಲ್ಲಿ ಮತ್ತು ಮಾಧ್ಯಮಗಳಲ್ಲಿ ಅದನ್ನು ತೋರಿಸಿದರು. ವೀರಪ್ಪನ್ ಮೀಸೆ, ಅವನ ಜೊತೆಯಲ್ಲಿ ಚರ್ಚೆ ಇದೆಲ್ಲ ಘಟನಾವಳಿಗಳು ಆಗಿವೆ. ಇವೆಲ್ಲವನ್ನೂ ಈಗ ಪ್ರಸ್ತಾಪ ಮಾಡಿಕೊಂಡು ಕುಳಿತರೆ ಅದು ಪೋಸ್ಟ್‌ಮಾರ್ಟಮ್ ಮಾಡಿದಹಾಗೆ ಎಂದು ನನಗನ್ನಿಸುತ್ತದೆ. ಏಕೆಂದರೆ ನಮ್ಮ ಪದಾರ್ಥ, ನಮ್ಮ ವಸ್ತು ನಮ್ಮ ಕೈಗೆ ಬಂದಿದೆ. ಬಹಳ ಸಂತೋಷ. ರಾಜ್‌ಕುಮಾರ್ ಅವರ ಮನೆಯಲ್ಲಿ ಕತ್ತಲು ಕವಿದಿದ್ದ ಕಡೆ ಬೆಳಕು ಚೆಲ್ಲುವಂಥ ವ್ಯವಸ್ಥೆಯಾಗಿದೆ. ಇಡೀ ರಾಜ್ಯದಲ್ಲಿ ರಾಜ್‌ಕುಮಾರ್ ಅವರು ಮರಳಿ ಬಂದಿದ್ದಕ್ಕೆ ಎಲ್ಲರಿಗೂ ಖುಷಿ ಇದೆ. ಒಪ್ಪಿಕೊಳ್ಳೋಣ. ಆದರೆ ನಮ್ಮ ತಪ್ಪನ್ನು ಸರಿಪಡಿಸಿಕೊಳ್ಳುವ ದೃಷ್ಟಿಯಿಂದ ಇವತ್ತು ನಮ್ಮ ಇಂಟೆಲಿಜೆನ್ಸ್‌ನಿಂದ ಏನು ಲೋಪವಾಗಿದೆ ಎನ್ನುವುದರ ಬಗ್ಗೆ ಪದೇಪದೇ ಸದನದಲ್ಲಿ ಚರ್ಚೆಯಾಗಿದೆ. ಇಲ್ಲಿ ಲ್ಯಾಪ್ಸ್ ಆಗಿದೆ ಎಂದರೆ, ನಮ್ಮ ಇಂಟಲಿಜೆನ್ಸ್‌ನವರು ಏನು ಮಾಡುತ್ತಿದ್ದರು? ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು? ನಾವು ಅವರಿಗೆ ಬಹಳ ಶಹಬಾಷ್‌ಗಿರಿ ಕೊಡುತ್ತಿದ್ದೇವೆ, ನಮ್ಮ ಪೋಲೀಸರು ಬಹಳ ದಕ್ಷರು, ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರು ಮಾಡುವಂಥ ಕೆಲಸ ರಾಷ್ಟ್ರದಲ್ಲಿ ಬೇರೆ ಯಾರೂ ಮಾಡುವುದಿಲ್ಲ ಎಂದು ಹೇಳಿ ಬಹಳ ಸಾರಿ ಅವರಿಗೆ ಹೊಗಳಿಕೆ, ಬಿರುದುಗಳನ್ನು ಕೊಡುತ್ತಿದ್ದೇವೆ. ಆದರೆ ಇಂತಹ ಒಂದು ಕ್ಲಿಷ್ಟ ಪರಿಸ್ಥಿತಿಯಲ್ಲಿ, ಅವನನ್ನು ಹಿಡಿಯುವಂಥ ಒಂದು ವ್ಯವಸ್ಥೆಯಲ್ಲಿ ನಾವೆಲ್ಲರೂ ಕಳೆದ 108 ದಿವಸಗಳಿಂದ ಮೂಕರಾಗಿದ್ದೆವು. ನಾವು ಮಾತನಾಡುವ ಹಾಗಿಲ್ಲ, ಮಾತನಾಡಿದರೆ ತಪ್ಪಾಗುತ್ತದೆ, ಏನು ಆಗುತ್ತದೋ ಏನೋ ಎನ್ನುವ ವಾತಾವರಣ ಇತ್ತು. ಆದರೆ ಮಾತನಾಡುವಂಥ ಧೈರ್ಯ ಇದ್ದದ್ದು ಸುಪ್ರೀಂ ಕೋರ್ಟ್‌ನವರಿಗೆ. passing remarks attributed on those two Governments. ಈ ಹತ್ತು ವರ್ಷಗಳಲ್ಲಿ ನಾವು ಇದ್ದೆವು, ನಾವು ಸರ್ಕಾರ ನಡೆಸಿದಂಥ ಸಮಯದಲ್ಲಿ ಯಾವ್ಯಾವ ರೀತಿಯಲ್ಲಿ ಸರ್ಕಾರದ ಕಡೆಯಿಂದ ಲ್ಯಾಪ್ಸ್ ಆಗಿದೆ ಎಂಬುದರ ಬಗ್ಗೆ ಸಾಕಷ್ಟು ಬೆಳಕನ್ನು ಅವರು ಚೆಲ್ಲಿದರು. ಸರ್ಕಾರಗಳ ಮೇಲೆ

ಏನು ಮಾಡಬೇಕು, ನೀವು ಎಲ್ಲಿ ಲೋಪ ಎಸಗಿದ್ದೀರಿ ಎಂದು ಹೇಳಿ ತರಾಟೆಗೆ ತೆಗೆದುಕೊಂಡರು ಮತ್ತು ಛೀಮಾರಿ ಹಾಕಿದರು. ಇಷ್ಟು ದಿವಸ ನೀವು ಏನು ಮಾಡುತ್ತಿದ್ದೀರಿ? ಇವತ್ತು ಒಬ್ಬ ಉಗ್ರಗಾಮಿಯನ್ನು ಇಟ್ಟುಕೊಂಡು ಅಥವಾ ದಂತಚೋರ, ನರಹಂತಕ ಎಂದು ಏನೇನು ಹೆಸರುಗಳಿಂದ ಕರೆಯುತ್ತಿದ್ದೇವೆ, ಅವನೊಬ್ಬನನ್ನು ಏಕೆ ಏನೂ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ? ನಿಮ್ಮ ಕಮಾಂಡೋ ಎಫರ್ಟ್ಸ್ ಏನಾಯಿತು? ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಏನಾಯಿತು?, ಮತ್ತು ಎಸ್.ಟಿ.ಎಫ್ ಆ್ಯಕ್ಷನ್ ಏನಾಯಿತು? ಎಂದು ಸುಪ್ರೀಂ ಕೋರ್ಟ್ ಕೇಳಿದೆ. ಇವತ್ತು ಕಾಡುಗಳ್ಳ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾನೆ, ಅವನಲ್ಲಿ ಇರತಕ್ಕಂಥ ರೈಫಲ್, ಅವನಲ್ಲಿ ಇರತಕ್ಕಂಥ ಎ.ಕೆ.47 ಗನ್, ಈ ಬಗ್ಗೆ ಬೇಕಾದಷ್ಟು ಮಾಹಿತಿ ಇದೆ. ಆದರೆ ನಮ್ಮ ಅಧಿಕಾರಿಗಳು ಇವತ್ತು ಹೇಳುತ್ತಿದ್ದಾರೆ ಏನೆಂದರೆ ಹೊಸ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಟ್ಟು ಅವರನ್ನು ಕಾಡಿಗೆ ಕಳಿಸಿದ್ದೇವೆ ಎಂದು. ನೋಡಿ, ಎಷ್ಟು ಚೆನ್ನಾಗಿದೆ ನಮ್ಮ ಪೋಲೀಸ್ ವ್ಯವಸ್ಥೆ. ಹಳೆಯ ಜೀಪುಗಳು, ಹಳೇ ಬಂದೂಕು, ಹಳೆಯ ವಾಕಿಟಾಕಿ, ಅದು ಏನೂ ಕೇಳಿಸುವುದಿಲ್ಲ....

ಶ್ರೀ ಕಾಗೋಡು ತಿಮ್ಮಪ್ಪ :— ಅದೆಲ್ಲಾ ನೀವು ಕೊಟ್ಟಿದ್ದು.

ಶ್ರೀ ಬಿ.ಎನ್. ಬಚ್ಚೇಗೌಡ :— ಆಗಲಿ ಸ್ವಾಮಿ, ನಾನು ಇಲ್ಲ ಎನ್ನುವುದಿಲ್ಲ. ನಾವು ಬೇಕಾದಷ್ಟು ಎಫರ್ಟ್ಸ್ ಹಾಕಿ ಮಾಡಿ ಅದನ್ನು ಒಂದು ಹಂತಕ್ಕೆ ತೆಗೆದುಕೊಂಡು ಬಂದಿದ್ದೆವು....

ಶ್ರೀ ಕಾಗೋಡು ತಿಮ್ಮಪ್ಪ :— ಯಾವ ಹಂತಕ್ಕೆ ತಂದಿದ್ದಿರಿ?

ಶ್ರೀ ಬಿ.ಎನ್. ಬಚ್ಚೇಗೌಡ :— ಉಗ್ರಗಾಮಿಗಳ ಸಂಖ್ಯೆ ಕಡಿಮೆಯಾಗಿ ಐದಕ್ಕೆ ಇಳಿಯಿತು. ಇವತ್ತು ಅವರು ಎಷ್ಟು ಮಂದಿ ಇದ್ದಾರೆ ಎಂದು ನೀವು ಹೇಳಿ. 14 ಜನ ಇದ್ದಾರಾ? ನಾವು ಹೇಳುತ್ತೇವೆ, ಇವತ್ತು ನೀವು 108 ದಿವಸ ಸಮಯ ಕೊಟ್ಟಿದ್ದೀರಿ. ಟಿ.ಎನ್.ಎಲ್.ಎಫ್‌ನವರು ಉಗ್ರಗಾಮಿಗಳು ಸೇರಿ, ಎಲ್.ಟಿ.ಟಿ.ಇ ಸೇರಿಸಿ ಇವತ್ತು ಅವರು ಇನ್ನೂರು ಜನ ಇದ್ದಾರೆ ಎಂದು ನಾವು ಹೇಳುತ್ತೇವೆ. ಅವನು ಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ಇನ್ನೂ ಹತ್ತಾರೂ ವರ್ಷಗಳು ಅವನಿಗೆ ತೊಂದರೆ ಇಲ್ಲ, ಅಥವಾ ಅವನು ಶ್ರೀಲಂಕಾಕ್ಕೆ ಹೋಗಿದ್ದಾನೋ ಏನೋ ಎಂದು ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ. ಅವನು ಸತ್ತರೆ ಇಲ್ಲೇ ಸಾಯುವುದು, ಸೈನೈಡ್ ತೆಗೆದುಕೊಳ್ಳುತ್ತಾನೆ, ಅಥವಾ ಪೋಲೀಸರು ಪ್ರಯತ್ನ ಪಟ್ಟರೆ ಶೂಟ್ ಮಾಡುತ್ತಾರೆ. ಆದ್ದರಿಂದ ಇದನ್ನು ಬಿಲ್ಡಅಪ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಕೂಡದು ಎಂದು ನಾವು ಹೇಳತಕ್ಕದ್ದು. ನೀವು ಅನೇಕ ಸಾರಿ ನಮ್ಮನ್ನು ಪ್ರಶ್ನೆ ಮಾಡುತ್ತೀರಿ, ನಿಮ್ಮ ಕಾಲದಲ್ಲಿ ಏನು ಮಾಡಿದಿರಿ ಎಂದು. ಈ ತರಹ ಲಘುವಾಗಿ ಸಚಿವರು ನಮಗೆ ನೀವೇನು ಮಾಡಿದಿರಿ ಎಂದು ಕೇಳಬಹುದಾ? ಹಾಗೆ ಕೇಳಬಾರದು.

ಶ್ರೀ ಕಾಗೋಡು ತಿಮ್ಮಪ್ಪ :— ಐದು ವರ್ಷಗಳ ಕಾಲ ನಿಮಗೇನು ಸಂಧಿಗ್ಧತೆ ಇತ್ತು ಆ ಸಂದಿಗ್ಧತೆ ನಮ್ಮಲ್ಲೂ ಇರಬಹುದು ಎಂದು ನೀವು ಅದನ್ನು ಹೇಳಬೇಕಾಗಿತ್ತು.

ಶ್ರೀ ಬಿ.ಎನ್. ಬಚ್ಚೇಗೌಡ :— ಸಂದಿಗ್ಧತೆ ನಮಗೆ ಇರಲಿಲ್ಲ. ನಿಮಗೆ ಸಂದಿಗ್ಧತೆ ಬಂದಿದ್ದು ರಾಜ್‌ಕುಮಾರ್ ಅವರನ್ನು ಹಿಡಿದಾಗ. ಆವಾಗ ಏನು ಆಗುತ್ತಿದೆ ಎಂದು ನೀವು ಕಣ್ಣು ತೆರೆದಿದ್ದು. ಇದು ಸರ್ಕಾರಕ್ಕೆ ಇದ್ದಂಥ ಜವಾಬ್ದಾರಿ. ಮಾನ್ಯ ತಿಮ್ಮಪ್ಪನವರು

5.20 ಪಿ.ಎಂ.

ಇದನ್ನು ತಿಳಿದುಕೊಳ್ಳಬೇಕು. ಇವತ್ತು ಸಂದಿಗ್ಧತೆ ಒಂದೇ ದಿನಕ್ಕೆ ಬಂದುಬಿಡುವುದಿಲ್ಲ. ಈ ದೃಷ್ಟಿಯಲ್ಲಿ ಇವತ್ತು ಸರ್ಕಾರಗಳು ಮಾಡಿಕೊಂಡ ಒಡಂಬಡಿಕೆಗಳು ಏನು? ಇವತ್ತು ಶಸ್ತ್ರಾಸ್ತ್ರಗಳ ಬಗ್ಗೆ ಮಾತನಾಡುತ್ತಿದ್ದೇವೆ; ನಾವು ಕೊಡುವಂಥ ಅಧುನಿಕ ಶಸ್ತ್ರಾಸ್ತ್ರಗಳು. ಇವತ್ತು ಮುಖ್ಯಮಂತ್ರಿಗಳು ಹೇಳಿದ್ದಾರೆ. ಬೇಕಾದರೆ ಕೇಂದ್ರದ ನೆರವನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಅಥವಾ ಉಗ್ರಗಾಮಿಗಳನ್ನು ಹಿಡಿಯುವಂಥ ತಂತ್ರಗಳನ್ನು ರೂಪಿಸುವಂಥ ಕಮ್ಯಾಂಡೋ ಆಪರೇಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಒಂದು ವಿಚಾರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವಂಥಾದ್ದು, ಇದರಲ್ಲಿ ತಮಿಳುನಾಡು ಸರ್ಕಾರದ ಇಚ್ಛಾಶಕ್ತಿ ಬೇಕು; ಅವರು ಸುಮ್ಮನೆ ನಮ್ಮ ಮುಖ್ಯಮಂತ್ರಿಗಳ ಹತ್ತಿರ ಕೇಳಿಕೊಂಡರೆ ಪ್ರಯೋಜನವಿಲ್ಲ. ಎರಡು ಸರ್ಕಾರಗಳ ಜಾಯಿಂಟ್ ಆಪರೇಷನ್ ಮಾಡದೇ ಹೋದರೆ, ಅವನಿಗೆ ಪ್ರೊಟೆಕ್ಷನ್ ಸಿಕ್ಕೇ ಸಿಗುತ್ತದೆ. ನಮ್ಮ ಸರ್ಕಾರ, ನಮ್ಮ ಪೋಲೀಸು, ನಮ್ಮ ಅಧಿಕಾರಿಗಳು ಏನೂ ಮಾಡುವುದಕ್ಕಾಗುವುದಿಲ್ಲ. ಇದನ್ನು ತೀವ್ರತರವಾಗಿ ತೆಗೆದುಕೊಳ್ಳಬೇಕು, ಲಘುವಾಗಿ ತೆಗೆದುಕೊಳ್ಳಬಾರದು. ಇವತ್ತು ಏನೋ ಅವನಿಗೂ ಮಾನವೀಯ ದೃಷ್ಟಿ ಇದೆ. ಅವನಿಗೂ ಮನುಷತ್ವ ಇದೆ, ಈ ಪ್ರಶ್ನೆಯಲ್ಲ ನಮಗೆ ಬೇಕಾಗಿರುವಂಥಾದ್ದು. ಇವತ್ತು ಸರ್ಕಾರ ಇದೆ, ಮಾನ್ಯ ಮುಖ್ಯಮಂತ್ರಿಗಳು ಒಂದುಸಾರಿ ಹೇಳಿದ್ದರು; ಕೆಲವು ಸಮಯದಲ್ಲಿ ನಾನು ಕೈಯಲ್ಲಿ ಶರಣು, ಕೆಲವು ಸಮಯದಲ್ಲಿ ದೊಣ್ಣೆ ಎಂದು ಹೇಳಿದರು. ಆ ದೊಣ್ಣೆಯನ್ನು ಮುಖ್ಯಮಂತ್ರಿಗಳು ಎತ್ತಿಕೊಳ್ಳಬೇಕು. ಇದು ನಮ್ಮ ನಿಯಮ. ಇದುವರೆಗೂ ಆಯಿತು, ರಾಜ್‌ಕುಮಾರ್ ಬರುವವರೆಗೂ ಸಂಧಾನ ಮಾರ್ಗ ಅನುಸರಿಸಿದಿರಿ, ಅವರು ಸುರಕ್ಷಿತವಾಗಿ ಬರಲಿ ಎಂದು ಕೈಯಲ್ಲಿ ಶರಣು ಎಂದು ಹೇಳಿದಿರಿ, ಇನ್ನು ನಿಮ್ಮ ಶರಣು ಬೇಡ, ಇನ್ನು ಮೇಲೆ ಕಂಕುಳಲ್ಲಿರತಕ್ಕ ದೊಣ್ಣೆ ತೆಗೆದು, ನಮ್ಮ ಆಪರೇಷನ್ ಶುರುವಾಗಬೇಕು; ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಅವರು ಕಳುಹಿಸಿರತಕ್ಕಂಥ ಆಡಿಯೋ ಕ್ಯಾಸೆಟ್ ಏನು, ವಿಡಿಯೋ ಕ್ಯಾಸೆಟ್ ಏನು, ಇವೆಲ್ಲಾ ಬಹಿರಂಗವಾಗಲಿ, ಜನಗಳಿಗೆ ಗೊತ್ತಾಗಬೇಕು. ಸರ್ಕಾರದವರು ಏನೋ ಮಾಡಿಕೊಂಡರು ಎಂದು ನೀವೇಕೆ ಅನ್ನಿಸಿಕೊಳ್ಳಬೇಕು. ನಮ್ಮ ಸರ್ಕಾರ ಈ ರೀತಿಯಾದ ಕ್ರಮಗಳನ್ನು ಮಾಡಿದೆ, ಮಾನ್ಯ ಸೋಮಶೇಖರ್‌ರವರು ಹೇಳಿದಹಾಗೆ ಅಧಿಕೃತ ಸಂಧಾನಕಾರ

ನೆಡುಮಾರನ್ ಅಲ್ಲ ಎಂದರು, ಅವನು ಟಿ.ಎಂ.ಎಫ್ ಲೀಡರ್ ಅಲ್ಲ ಎಂದರು. ಹಾಗಾದರೆ ಸಂಧಾನಕಾರರು ಯಾರು? ಗೋಪಾಲನ್ ಅಥವಾ ಏನಾದರೂ ಖಾಸಗಿಯವರು ಅವನನ್ನು ನೇಮಕ ಮಾಡಿದ್ದರೆ? ನೀನು ಹೋಗಿ ನೋಡಿ ಕೊಂಡು ಬಾರಪ್ಪ, ನಿನ್ನಿಂದ ಈ ಕೆಲಸ ಆಗುತ್ತದೆ ಎಂದು ದುಡ್ಡುಕೊಟ್ಟು ಕಳುಹಿಸಿದ್ದರೆ? ಅಥವಾ ಅವನಷ್ಟಕ್ಕೆ ಅವನೇ ಸ್ವಇಚ್ಛೆಯಿಂದ ಮಾಡಿದ್ದಾನೆಯೇ? ಅಥವಾ ಇನ್ನೂ ಮೂವರು ಬೆಂಗಳೂರಿನಿಂದ ಹೋದರು, ನಮ್ಮ ವರನಟ ಮುಖ್ಯಮಂತ್ರಿಗಳ ಜೊತೆ ಮಾತನಾಡುವಾಗ ಹೇಳಿದರು. Very next day he was brought and confusion was also there about his release. ನಮ್ಮ ನಾಯಕರು ಸಹ ಹೇಳಿದರು. ಅವರು ತಿಳಿದಮೇಲೆ ಪ್ರಧಾನಿಗಳಿಗೆ ಗೊತ್ತಾಯಿತು. ನಿಮಗಿನ್ನೂ ಗೊತ್ತಿಲ್ಲವೇ ಎಂದು. ನಾನು ಅಂದುಕೊಂಡಿದ್ದೇನೆ, ಎರಡು ದಿವಸಕ್ಕೆ ಮೊದಲೇ ಅವರ ಬಿಡುಗಡೆಯಾಗಿದೆ. ಅವರೇ ಹೇಳಿಕೊಂಡಿದ್ದಾರೆ. ನಮ್ಮನ್ನು ಎಲ್ಲೋ ಕರೆದುಕೊಂಡು ಹೋದರು, ಎಲ್ಲಿಯೋ ಇಟ್ಟರು. ಆಮೇಲೆ ನಮ್ಮನ್ನು ಬಿಟ್ಟರು ಎಂದು ಹೇಳಿದ್ದಾರೆ. ಇದೆಲ್ಲಾ ತಮಗೆ ಗೊತ್ತಿದೆ. ಇಲ್ಲಿ ಅನೇಕ ವಿಷಯಗಳನ್ನು ತಮಗೆ ಹೇಳುವುದಕ್ಕಾಗುವುದಿಲ್ಲ. ಅದು ನಮಗೂ ಅರ್ಥ ಆಗುತ್ತದೆ. ಎಲ್ಲವನ್ನೂ ಇಲ್ಲಿ ಹೇಳಿಕೊಂಡು ಹೋಗುವುದಕ್ಕಾಗುವುದಿಲ್ಲ. ಇಲ್ಲಿಂದ ಮೂರು ಜನ ಹೋದಾಗ, ಅದು ಸ್ತ್ರೀಶಕ್ತಿ, ನನಗೆ ಕಾಳಿಯಾಗಿ ಕಾಣಿಸಿತು, ಆ ಸ್ತ್ರೀಶಕ್ತಿ ನನ್ನನ್ನು ಬಿಡಿಸಿತು. ನೆಡುಮಾರನ್‌ನ್ನು ರಾಧಾಕೃಷ್ಣನ್‌ಗೆ ಹೋಲಿಸಿದರು. ಪಾಪ, ಅವರಿಗೆ ಗೊಂದಲ ಇದೆ, ಟೆನ್‌ಷನ್ ಇದೆ. 108 ದಿನಗಳು ಆ ಕಾಡಿನಲ್ಲಿ ಕಳೆದು ಬಂದಮೇಲೆ, ಅವರು ಹೇಳಿದ್ದೆಲ್ಲವೂ ಸರಿ ಎಂದು ನಾವು ಅಂದುಕೊಳ್ಳುವುದಿಲ್ಲ. ಅಥವಾ ಅವರು ಏನು ಹೇಳಬೇಕು ಎನ್ನುವುದರ ಬಗ್ಗೆಯೂ ನಾವು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೋಸ್ಕರ ಇದ್ದಕ್ಕಿದ್ದಹಾಗೆ ಡಾ: ಭಾನು ಪ್ರತ್ಯಕ್ಷಳಾದಳು. ಆಕೆ ಕೆಲಸ ಏನು? ಆಕೆಯನ್ನು ಯಾರು ನೇಮಕ ಮಾಡಿದ್ದು? ಒಳ್ಳೆಯದು, ಅವರನ್ನು ಕರೆದುಕೊಂಡು ಬರುವುದಕ್ಕೆ ಯಾರೋ ಒಬ್ಬರು ಬರಬೇಕು. ಯಾರೋ ಒಬ್ಬರನ್ನು ನಾವು ನೇಮಕ ಮಾಡಿಕೊಳ್ಳಬೇಕು. ಸರ್ಕಾರ ಹೇಳಲಿ, ನಮಗೆ ಮತ್ತು ಅವರಿಗೆ ಏನೂ ಗೊತ್ತಿಲ್ಲ. ಅವರನ್ನು ಯಾರು ಕಳುಹಿಸಿದರೋ, ಅವರು ಯಾವ ರೀತಿ ಬಂದರೋ ಎಂಬುದನ್ನು ಹೇಳಲಿ. ಇದು ಸಂಶಯಕ್ಕೆ ಅವಕಾಶ ಮಾಡಿಕೊಡುತ್ತದೆ. It leads to suspicion. ಕಾಡಿನೊಳಗೆ, ಯಾರೋ ಹೋಗಿ, ಏನೋ ಬಂದರು ಎಂದರೆ ಏನು? ಇವರು 10-10 ನಿಮಿಷಕ್ಕೆ ಹೋಗುತ್ತಾರೆ, ಅರ್ಧರ್ಧ ಗಂಟೆಗೆ ಹೋಗಿ ಬರುತ್ತಾರೆ. ವೀರಪ್ಪನ್ 50 ಅಡಗು ತಾಣಗಳನ್ನು ಬದಲಾಯಿಸುತ್ತಾನೆಂದು ನಮ್ಮ ರಾಜ್‌ಕುಮಾರ್ ಹೇಳುತ್ತಾರೆ. ಅವನು ಎಷ್ಟು ಅಡಗು ತಾಣಗಳನ್ನು ಇಟ್ಟಿದ್ದಾನೆ? ಟೋಟಲ್ ಏರಿಯಾ ಎಷ್ಟು ಕವರ್ ಮಾಡಿದ್ದಾನೆ? 50 ಕಿಲೋಮೀಟರ್ ಬರುತ್ತದೆಯೇ ಅಥವಾ 500 ಕಿಲೋಮೀಟರ್ ಬರುತ್ತದೆಯೇ? ಇವರು ಹೋಗಿ ಅವನ ಜೊತೆಯಲ್ಲಿ ಫೋಟೋ ತೆಗೆಸಿಕೊಳ್ಳುವುದಕ್ಕಾಗುತ್ತದೆ, ಹೋಗಿ ಬರುವುದಕ್ಕೆ ಆಗುತ್ತದೆ, ಎಲ್ಲಾ ನೋಡಿಕೊಳ್ಳುತ್ತಾರೆ!

ನಮ್ಮವರನ್ನು ಮಾತ್ರ ಕರೆದುಕೊಂಡು ಹೋಗುವುದಿಲ್ಲ. ನಮ್ಮವರನ್ನು ಯಾರನ್ನಾದರೂ ಕರೆದುಕೊಂಡು ಹೋಗಿ, ಜೊತೆಯಲ್ಲಿ ಎಂದೂ ಕಳುಹಿಸಲಿಲ್ಲ. ಅವರು ಏನು ಮಾತನಾಡಿಕೊಂಡರು ಅವರಿಂದ ಏನು ಗೊತ್ತಾಯಿತು ಎಂಬುದನ್ನೂ ಹೇಳುಕೊಳ್ಳಲಿಲ್ಲ. ಈ ರೀತಿ ಅನೇಕ ವಿಷಯಗಳು ಇವತ್ತು ನಮ್ಮ ಮುಂದೆ ಇವೆ. ಮಾನ್ಯ ಸೋಮಶೇಖರ್ ತಿಳಿಸಿದ ಹಾಗೆ ಮತ್ತು ಮಾನ್ಯ ಶೆಟ್ಟರ್‌ರವರು ತಿಳಿಸಿದಹಾಗೆ, ಇವತ್ತು ರಾಜ್ಯದ ಜನತೆಗೆ ನಾವು ತಿಳಿಸಬೇಕಾಗುತ್ತದೆ. ಇಂಥಿಂಥ ಕಾರಣಗಳಿಗಾಗಿ ನಾವು ಈ ರೀತಿ ನಡೆದೆವು. ನಮ್ಮ ಆಪರೇಷನ್ ಹೀಗಿತ್ತು, ಈ ರೀತಿಯಾಗಿ ಹೊರಗೆ ತರುವಂಥ ಪ್ರಯತ್ನಗಳಾಯಿತು ಎಂಬುದನ್ನು ಹೇಳಲಿ. ಅನೇಕ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಾವು ಅವನಿಗೆ ದುಡ್ಡು ಕೊಟ್ಟಿಲ್ಲ ನಾವೇನೂ ಮಾಡಿಲ್ಲ ಎಂದು ಹೇಳಿದ್ದಾರೆ. ನಾವು ಅಂದುಕೊಂಡಿದ್ದೆವು, ಅಲ್ಲಿಮೇಟಾಗಿ ರಾಜ್‌ಕುಮಾರ್‌ರವರು ಈಚೆ ಬರುತ್ತಾರೆ, ಅವರನ್ನು ಅಲ್ಲಿಯೇ ಇಟ್ಟುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಅವನು ಏನು ಮಾಡಿಕೊಳ್ಳಬೇಕೋ ಅದೆಲ್ಲವನ್ನೂ ಮಾಡಿಕೊಂಡು, ಸಾಕಾಗಿ ನನಗೆ ತಲೆನೋವು ನೀನು ಹೋಗಪ್ಪ ಎಂದು ಕಳುಹಿಸಿಬಿಡುತ್ತಾನೆ. ಎಂದು ತಿಳಿದಿದ್ದೆವು. ಅವರೂ ಕೂಡ ಅನೇಕ ವಿಧಾನದಲ್ಲಿ ಅವನನ್ನು ಕೇಳಿಕೊಂಡು ಬರುವಂಥಾದ್ದು ಎಲ್ಲಾ ಆಗಿದೆ. ರಾಜ್‌ಕುಮಾರ್‌ರವರು ಅವನ ಮೇಲೆ ಕ್ರಮ ತೆಗೆದುಕೊಳ್ಳುವಂಥಾದ್ದು ಸರ್ಕಾರಗಳಿಗೆ ಬಿಟ್ಟಿರತಕ್ಕಂಥಾದ್ದು, ನಾನೇನೂ ಸರ್ಕಾರಗಳನ್ನು ಕೇಳಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ ಅವರು ಒಳ್ಳೆಯ ಮಾತನ್ನು ಹೇಳಿದ್ದಾರೆ. ಸರ್ಕಾರ ಏನು ಬೇಕೋ ಆ ಕ್ರಮ ತೆಗೆದುಕೊಳ್ಳಲಿ. ಈ ದೃಷ್ಟಿಯಿಂದ ಸರ್ಕಾರ ಏನು ಬೇಕೋ ಆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸರಿಯಾದ ಅಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆ. ಯಾರು ಅಲ್ಲೇ ನಿರಂತರವಾಗಿದ್ದು, ಯಾವ ಯಾವ ರೀತಿ ಆ ಪ್ರದೇಶವನ್ನು ಇಟ್ಟುಕೊಂಡು ಪ್ರೊಟೆಕ್ಟೆಡ್ ಏರಿಯಾ ಅಥವಾ ಪ್ರಾಹಿಬಿಟೆಡ್ ಏರಿಯಾ ಎಂದು ಮಾಡಿ, ಜನರನ್ನು ಆಚೆಗೆ ಕಳುಹಿಸಿ, ನಿರಂತರವಾಗಿ ಮತ್ತು ಹೆಚ್ಚು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವಂಥಾದ್ದು ಇವೆಲ್ಲಾ ಇವತ್ತು ಆಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಇವತ್ತು ಅವನ ಸಂಖ್ಯಾಬಲ ಏನಿದೆ, ಅದು ಕಡಿಮೆಯಾಗಿದೆಯೇ ಅಥವಾ ಜಾಸ್ತಿಯಾಗಿದೆಯೇ ಎಂಬುದನ್ನೂ ನೋಡಬೇಕಾಗುತ್ತದೆ. ಇದರ ಮಧ್ಯೆ ನಾಗಪ್ಪನ ಬಿಡುಗಡೆಯಾಯಿತು. ಈ ರೀತಿ ಬಿಡುಗಡೆಯಾದ ಮೇಲೆ ಇದುವರೆಗೂ ಆ ನಾಗಪ್ಪನ ಪತ್ತೆಯೇ ಇಲ್ಲ. ಹೈಕೋರ್ಟ್‌ನವರು ಸಮನ್ಸ್ ಕಳುಹಿಸಿದರು, ಆದರೆ ನಾಗಪ್ಪ ಪತ್ತೆ ಇಲ್ಲ. ಆ ನಾಗಪ್ಪನಿಗೆ ಏನಾಗಿದೆ? ಅವನಿಂದ ಯಾವುದೇ ಒಂದು ಹೇಳಿಕೆ ಇದುವರೆಗೂ ಇಲ್ಲ. ನಾನು ಕಾಡಿನಲ್ಲಿದ್ದಾಗ, ಅವನು ಈ ರೀತಿ ನಡೆಸಿಕೊಂಡ, ನಾನು ಈ ರೀತಿ ಓಡಿ ಬಂದೆ ಅಥವಾ ಇಲ್ಲ ಎನ್ನುವ ಯಾವುದೇ ಮಾಹಿತಿ, ಇವತ್ತು ನಾಗಪ್ಪನ ಬಗ್ಗೆ ಇಲ್ಲ. ಟಾಡಾ ಖೈದಿಗಳಿಗೆ ವಿಶೇಷ ನ್ಯಾಯಾಲಯ ರಚಿಸಿ, ಕೈಬಿಡಬಾರದು. ಈ ವಿಚಾರಣೆಯನ್ನು ಶೀಘ್ರವಾಗಿ ಮುಗಿಸುವಂಥ ಕಾರ್ಯವನ್ನು ಸರ್ಕಾರ ಮಾಡಬೇಕಾಗಿದೆ. ಇದರ ಜೊತೆಯಲ್ಲಿ, ವೀರಪ್ಪನ್ ಜೊತೆಯಲ್ಲೇ ಇವರೆಲ್ಲರೂ 108 ದಿವಸಗಳು ಇದ್ದರು.

ಇವರಿಂದ ಪೋಲೀಸ್ ಅಥವಾ ಸರ್ಕಾರ ಮಾಹಿತಿ ಪಡೆಯಬೇಕು. ಅವನ ಜೀವನ ಶೈಲಿ ಏನು? ಅವನ ಕಾರ್ಯತಂತ್ರಗಳ ವಿಧಾನಗಳೇನು? ಅವನು ಯಾವ ಯಾವ ರೀತಿಯಲ್ಲಿ ಜಾಗ ಬದಲಾಯಿಸುತ್ತಾನೆ? ಅವನ ಹತ್ತಿರ ಎಷ್ಟು ಜನ, ಅವನ ಬೆಂಬಲಿಗರು ಇದ್ದಾರೆ? ಅವನಿಗೆ ಸಹಕಾರವನ್ನು ಕೊಡುವವರು ಎಷ್ಟು ಜನ ಇದ್ದಾರೆ ಎಂಬುದನ್ನು ಪತ್ತೆ ಮಾಡುವಂಥಾದ್ದು. ಇದರ ಬಗ್ಗೆ ಸಮಗ್ರವಾದ ತನಿಖೆಯು ಆಗಬೇಕಾಗುತ್ತದೆ. ಒಬ್ಬರು ನಿವೃತ್ತ ಹೈಕೋರ್ಟ್ ಜಡ್ಜ್ ಮೂಲಕ, ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕು. ಏನು ಲೋಪದೋಷ ಇದೆ? ಸರ್ಕಾರದ ಲ್ಯಾಪ್ಸಸ್ ಏನೇನಿದೆ? ಏನೇನು ಆಯಿತು ಎಂಬುದನ್ನು ತನಿಖೆ ಮಾಡಲಿ. ಇಷ್ಟು ಹೇಳಿ, ತಾವು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎ. ರಾಮದಾಸ್ (ಚಾಮರಾಜ) :— ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಸರ್ಕಾರ ಕೊಟ್ಟಂಥ ಸ್ಟೇಟ್‌ಮೆಂಟ್, ಅನಂತರ ಎಲ್ಲರ ಮನಸ್ಸಿನಲ್ಲಿ ಮತ್ತು ರಾಜ್ಯದ ಜನತೆಯ ಮನಸ್ಸಿನಲ್ಲಿರುವಂಥ ಭಾವನೆಗಳು ಹೇಗೆ ನಿವಾರಣೆಯಾಗಬೇಕೆಂದು ಸನ್ಮಾನ್ಯ ನಮ್ಮ ನಾಯಕರು ಎಲ್ಲಾ ವಿಚಾರಗಳನ್ನೂ ಮಾತನಾಡಿದ್ದಾರೆ. ಇಲ್ಲಿ ಪ್ರಮುಖವಾಗಿ ರಾಜ್‌ಕುಮಾರ್‌ರವರು ಬಿಡುಗಡೆಯಾಗಿ ಬಂದಮೇಲೆ ಮುಖ್ಯಮಂತ್ರಿಗಳಿಂದ ಹಿಡಿದು, ಎಲ್ಲರ ಮನಸ್ಸಿನಲ್ಲಿ ಮತ್ತು ಮುಖದಲ್ಲಿ ಸಂತೋಷದ ಅಲೆ ಇದೆ. ಮುಖ್ಯಮಂತ್ರಿಗಳನ್ನು ನೋಡಿದಾಗ ನನಗೆ ಒಂದೊಂದು ಸಲ ಅನ್ನಿಸುತ್ತಿತ್ತು; ಕೇವಲ ಮುಖ್ಯಮಂತ್ರಿಗಳಾಗಿ ಬಂದಮೇಲೆ ಅವರೇ ಮಾಡಿದಂಥ ಸ್ವಯಂಕೃತ ಅಪರಾಧನೇನಾದರೂ ಆಗಿದ್ದರೆ, ಸಂಪೂರ್ಣವಾಗಿ ಅವರ ಮೇಲೆಯೇ ಹೇಳಬಹುದಾಗಿತ್ತು. ಆದರೆ, ಹಿಂದಿನಿಂದ ಬಂದಂಥ ಸರ್ಕಾರಗಳು, ಅಂದಿನಿಂದ ಇಂದಿನವರೆಗೂ ಕೂಡ ಏನೇನು ತಪ್ಪುಗಳು ಆಗಿತ್ತು, ಆ ತಪ್ಪುಗಳಾದ ನಂತರದಲ್ಲಿ ಯಾರು ಅದಕ್ಕೆ ವಿನಾಯಿತಿಯನ್ನು ಕೊಡಬೇಕಾಗಿದೆ, ಇದನ್ನೂ ಕೂಡ ಇವತ್ತು ಯೋಚನೆ ಮಾಡಬೇಕಾದ ಪರಿಸ್ಥಿತಿ ನಮ್ಮ ಮುಂದೆ ಇದೆ. ಹಾಗಾಗಿ ಆರ್ಕೇಶ್ ವರದಿ ಕೇವಲ ಈ ಸರ್ಕಾರ ಬಂದಮೇಲೆ ಕೊಟ್ಟಂಥ ವರದಿ ಅಲ್ಲ. ಅದರ ಬಗ್ಗೆ ಎಲ್ಲಾ ವಿಚಾರವನ್ನೂ ಹೇಳಿದ್ದಾರೆ. ಆರ್ಕೇಶ್ ವರದಿಯ ಆಧಾರದ ಮೇಲೆ ನಾವು ಕ್ರಮವನ್ನು ಕೈಗೊಳ್ಳತಕ್ಕ ವಿಚಾರದಲ್ಲಿ ನಾವು ಎಲ್ಲಿ ಸೋತಿದ್ದೇವೆ ಎಂಬ ಒಂದೇ ಒಂದು ಸಣ್ಣ ಕಾರಣಕ್ಕೋಸ್ಕರವಾಗಿ, ಆ ಕಾರ್ಯವನ್ನು ಹಿಂದಿನ ಸರ್ಕಾರ ಮಾಡಿದ್ದರೂ ಕೂಡ ಈ ಸರ್ಕಾರಕ್ಕೆ ಆ ಒಂದು ಸಮಸ್ಯೆ ಬರುತ್ತಾ ಇರಲಿಲ್ಲ. ಅದರಲ್ಲಿ ಪ್ರಮುಖವಾದಂಥ ಒಂದು ಕಾರ್ಯವನ್ನು ವಿಶೇಷವಾಗಿ ಇಂಟೆಲಿಜನ್ಸ್ ಡಿಪಾರ್ಟ್‌ಮೆಂಟ್ ಅಂದ ತಕ್ಷಣವೇ ನಮ್ಮಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ ಎನ್ನುವ ಮಾತನ್ನು ನಾವು ಹೇಳುತ್ತೇವೆ. ಆದರೆ 1999-2000 ಇಸವಿಯಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿರುವಂತಹ ಸುಮಾರು 73 ಜನ ಅಧಿಕಾರಿಗಳು, ಇನ್ನು 8-10 ಜನ ಸಿಬ್ಬಂದಿ ವರ್ಗದವರು ಇವರಿಗೆ ಖರ್ಚು ಮಾಡಿರುವಂತಹ ಹಣವೇ 12 ಕೋಟಿ 62 ಲಕ್ಷ 72 ಸಾವಿರ 258 ರೂಪಾಯಿಗಳು.

ಒಂದು ವರ್ಷದಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ಗೆ ಖರ್ಚು ಮಾಡಿರುವಂತಾದ್ದು ಸರ್ಕಾರದ ಬೊಕ್ಕಸದಿಂದ ನಾವು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ, ಅವರ ಕಾರ್ಯಕ್ಷೇತ್ರ ಇರುವಂತಾದ್ದು, ಪ್ರಮುಖವಾದ ಕೆಲಸಗಳು ಇರುವಂತಾದ್ದು, ಮಾಹಿತಿಯನ್ನು ಸಂಗ್ರಹ ಮಾಡುವಂತಾದ್ದು, ಗಣ್ಯರಿಗೆ ಭದ್ರತೆಯನ್ನು ಒದಗಿಸುವಂತಾದ್ದು, ಆಂತರಿಕವಾದ ಭದ್ರತೆಯನ್ನು ರಾಜ್ಯದಲ್ಲಿ ಒದಗಿಸುವುದು; ಈ ಮೂರು ಕಾರ್ಯಗಳಿಗೋಸ್ಕರವಾಗಿ ನಾವು ತೆರಿಗೆದಾರನ ಒಂದೊಂದು ಪೈಸೆ ಹಣವನ್ನು ನಾವು ಒಂದು ವರ್ಷದಲ್ಲಿ 13 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿರುವಂತಹ ಸಂದರ್ಭದಲ್ಲಿ ಈ ಒಂದು ಸಣ್ಣ ವಿಚಾರದ ಲೋಪದಿಂದ ಇಡೀ ರಾಜ್ಯ ಮೂರು ತಿಂಗಳುಗಳ ಕಾಲ ಯಾವ ರೀತಿಯಲ್ಲಿ ತೊಂದರೆಯನ್ನು ಅನುಭವಿಸಬೇಕಾಯಿತು, ಎನ್ನುವಂತಹ ಎಚ್ಚರಿಕೆಯ ಘಂಟೆಯನ್ನು ಮುಂದೆ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ನಮ್ಮ ಈ ಚರ್ಚೆ ಅವಶ್ಯಕತೆ ಇದೆ ಎನ್ನುವುದು ನನಗನ್ನಿಸುತ್ತದೆ. ಇವತ್ತು ಆ ದೃಷ್ಟಿಯಿಲ್ಲಿ ನಮ್ಮ ಇಂಟಲಿಜೆನ್ಸ್‌ನವರು ಫೈಲ್ಯೂರ್ ಆದಂತಹ ದೃಷ್ಟಿಯಲ್ಲಿ ಮುಂದಿನ ಕಾರ್ಯಗಳಿಗೆ ಲೋಪವಾಯಿತು. ಇದನ್ನು ಮುಂದೆ ಸರಿ ಮಾಡಿಕೊಳ್ಳಬೇಕಾದಂತಹ ವಿಚಾರವಾಗಿದೆ. ಜೊತೆಗೆ ಈ ಲೋಪಕ್ಕೆ ಕಾರಣವೇನು ಎನ್ನುವಂಥಾದ್ದನ್ನು ನಾನು ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವೀರಪ್ಪನ್ ನ 10 ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಆ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗದೆ ಒಂದೇ ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿದ್ದೀರಿ. ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಆದರೆ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡುವಂತಹ ವಿಚಾರದಲ್ಲಿ ವೀರಪ್ಪನ್, ರಾಜಕುಮಾರ್ ಪ್ರಕರಣವನ್ನು ಬಿಡೋಣ. ಹಿಂದಿನ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ, ಒಂದು ವಿಶೇಷ ನ್ಯಾಯಾಲಯವನ್ನು ನಿಯೋಜಿಸಬೇಕು, ಅದಕ್ಕೆ ಪ್ರತ್ಯೇಕವಾದ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಬೇಕು, ಆ ವಿಶೇಷ ನ್ಯಾಯಾಲಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಡಬೇಕೆನ್ನುವ ವಿಚಾರ ಇತ್ತು. ಅದು ಏಕೋ ಗೊತ್ತಿಲ್ಲ ಹಿಂದಿನ ಸರ್ಕಾರದವರು ಸುಮಾರು 2 ವರ್ಷಗಳ ಕಾಲ ತಿಂಗಳಿಗೆ 18 ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಟ್ಟು, ಎರಡು ವರ್ಷಗಳಿಂದ ಒಂದು ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ಇವತ್ತಿನವರೆಗೂ ಕಾರ್ಯಾಚರಣೆ ಮಾಡಿರಲಿಲ್ಲ. ಏಕೆ ಹಾಗೆ ಮಾಡಿದರು? ಏಕೆ ಆ ಕೆಲಸವನ್ನು ಅವತ್ತು ಮಾಡಿರಲಿಲ್ಲ? ಈ ದಿಸೆಯಲ್ಲಿ ಅವತ್ತೇ ಏನಾದರೂ ಡೆಸಿಗ್ನೇಟೆಡ್ ಕೋರ್ಟ್‌ನ್ನು ನಿಯೋಜನೆ ಮಾಡಿದ್ದಿದ್ದರೆ ಅದರ ಪ್ರಕಾರ ಟಾಡಾ ರಿವ್ಯೂ ಕಮಿಟಿ ತನ್ನದೇ ಆದಂತಹ ಕಾರ್ಯ ಮಾಡಿದ್ದರೆ ಇವತ್ತು ನಾವು ಇಂತಹ ಸಮಸ್ಯೆಗಳನ್ನು ತಕ್ಷಣದಲ್ಲಿ ಎದುರಿಸುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಈ ಸರ್ಕಾರ ಬಂದ ಮೇಲೆ ನನ್ನ ಮನಸ್ಸಿನಲ್ಲಿ ಒಂದು ಡೌಟ್ ಇದೆ. ಅದರ ಬಗ್ಗೆ ತಾವು ಹೇಳಬೇಕು. ಡಾಕ್ಟರ್

ರಾಜ್‌ಕುಮಾರ್ ಪ್ರಕರಣದಲ್ಲಿ ಬಹಳ ಪ್ರಮುಖವಾದ ಬೇಡಿಕೆಯಾಗಿದ್ದ ಮೆಸೂರಿನಲ್ಲಿರುವ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಬೇಕೆನ್ನುವುದು, ಅದರ ಬಗ್ಗೆ ತಾವು ತಮ್ಮದೇ ಆದ ರೀತಿಯಲ್ಲಿ ಶತಪ್ರಯತ್ನವನ್ನು ಮಾಡಿದಿರಿ. ಸರ್ಕಾರ ಎಲ್ಲ ಕೆಲಸಗಳನ್ನು ಮಾಡಿದೆ. ಅವರೆಲ್ಲರನ್ನು ಬಿಡುಗಡೆ ಮಾಡಬೇಕೆಂದು ಹೇಳಿ ತಾವು ಆ ಕೋರ್ಟಿಗೆ ಕೇಸನ್ನು ಹಾಕಿದ ನಂತರದಲ್ಲಿ ಈ ವಿಚಾರದಲ್ಲಿ ಪ್ರಮುಖವಾಗಿ ಮೈಸೂರಿನ ಕೋರ್ಟಿನಲ್ಲಿ ನಡೆಯುತ್ತಾ ಇದ್ದಂತಹ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ರಾಜ್‌ಕುಮಾರ್ ಅವರ ಪ್ರಕರಣವಾದ ನಂತರದಲ್ಲಿ ಎಲ್ಲರ ಕಣ್ಣು ಈ ಟಾಡಾ ನ್ಯಾಯಾಲಯದ ಮುಂದೆ ಇತ್ತು. ಟಾಡಾ ಕೇಸನ್ನು ವಿತ್‌ಡ್ರಾ ಮಾಡಬೇಕೆಂದು ಹೇಳಿ ತಾವು ಆಗಸ್ಟ್, 9,2000ದಂದು ಸರ್ಕಾರದಲ್ಲಿ ಒಂದು ನಿರ್ಧಾರ ಮಾಡಿದಿರಿ. ಅದರ ಪ್ರಕಾರದಲ್ಲಿಯೇ ಆಗಸ್ಟ್ 19ನೇ ತಾರೀಖು 2000ದಂದು ಮೈಸೂರಿನ ಟಾಡಾ ವಿಶೇಷ ನ್ಯಾಯಾಲಯದ ಮುಂದೆ ಒಂದು ಅರ್ಜಿಯನ್ನು ಹಾಕಿ ತಾವು ಮೂವ್ ಮಾಡಿದಿರಿ. ಇದರ ಬಗ್ಗೆ ವಿಚಾರಣೆ ನಡೆದು ತಮಗೆ ಗೊತ್ತಿತ್ತು ಇವತ್ತಲ್ಲ ನಾಳೆ ಈ ಟಾಡಾ ಖೈದಿಗಳ ಬಿಡುಗಡೆ ಆಗಬಹುದು, ಬೈಲ್ ಸಿಗಬಹುದು ಎನ್ನುವಂತಹ ವಿಚಾರಗಳು ತಮಗೆ ಗೊತ್ತಿತ್ತು. 27ನೇ ತಾರೀಖು ತಾವು ಪತ್ರಿಕೆಗಳಲ್ಲಿ ಈ ವಿಚಾರವನ್ನು ಹೇಳಿದಿರಿ, ನಾಳೆ ಶುಭವಾದಂತಹ ಒಂದು ವಿಚಾರ ಬರಬಹುದು ಎಂದು ಹೇಳಿದಿರಿ. ಅಲ್ಲಿಗೆ ತಾವು ಐ.ಜಿ.ಯವರನ್ನು ಕಳುಹಿಸಿದ್ದಿರಿ. ಡಿ.ಐ.ಜಿ.ಯವರನ್ನು ಕಳುಹಿಸಿಕೊಟ್ಟಿದ್ದಿರಿ. ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅವರನ್ನು ಕಳುಹಿಸಿಕೊಟ್ಟಿದ್ದಿರಿ. ಕಾನೂನು ಕಾರ್ಯದರ್ಶಿಗಳು ಬಂದಿದ್ದರು. ಗೃಹ ಕಾರ್ಯದರ್ಶಿಗಳು ಸಹ ಬಂದಿದ್ದರು. ಈ ಎಲ್ಲಾ ಜನ ಮೈಸೂರಿನ ನ್ಯಾಯಾಲಯದ ಹೊರಗಡೆ ಇದ್ದರು. ಆದರೆ ಆಗಸ್ಟ್ 28ನೇ ತಾರೀಖು 4-00 ಗಂಟೆಗೆ ಬೈಲ್ ಸಿಕ್ಕಿತು ಎಂದು ಸುದ್ದಿ ಗೊತ್ತಾದ ತಕ್ಷಣವೇ ನಿಮ್ಮ ಅಧಿಕಾರಿಗಳ ಮಧ್ಯದಲ್ಲಿ ದ್ವಂದ್ವ ಪ್ರಾರಂಭವಾಯಿತು. ಏಕೆ ಈ ದ್ವಂದ್ವ? ಇದರ ಹಿಂದೆ ಇರುವಂತಹ ವಿಚಾರವೇನು? ಅಲ್ಲಿ ಯಾರು ಬೈಲ್ ಅರ್ಜಿಯನ್ನು ಮೂವ್ ಮಾಡಿದಂತಹ ಸಂದರ್ಭದಲ್ಲಿಯೇ ಡಿ.ವೈ.ಎಸ್‌ಪಿ ಮಂದಪ್ಪನವರು ಅವರಿಗೆ ಜಾಮೀನು ಕೊಡುವುದಕೋಸ್ಕರವಾಗಿ ಎರಡು ಟಾಡಾ ಸುಮೋ ವಾಹನದಲ್ಲಿ ಆ ಪ್ರದೇಶದಲ್ಲಿದ್ದಂತಹ 12 ಜನ ಆ ಖೈದಿಗಳು ಯಾರು ಇದ್ದಾರೆ ಅವರ ನೆಂಟರನ್ನು ಬೈಲ್ ಕೊಡುವುದಕ್ಕೋಸ್ಕರವಾಗಿ ಕರೆದುಕೊಂಡು ಬಂದು ಕೂರಿಸಿದ್ದರು. ಆದರೆ ತಮ್ಮಲ್ಲಿದ್ದಂತಹ ಅಧಿಕಾರಿಗಳು ಬೈಲ್ ಅರ್ಜಿಗೆ ಅವರ ಹತ್ತಿರ ಸಹಿ ಮಾಡಿಸದೆ ಆ ಎರಡೂ ಟಾಟಾ ಸುಮೋ ವಾಹನಗಳನ್ನು 3-50 ನಿಮಿಷಕ್ಕೆ ಕೋರ್ಟಿನಿಂದ ಹೊರಗಡೆ ಕಳುಹಿಸಿದರು ಏಕೆ? ಈ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ನಾನು ಬೇಕಾದರೆ ಆ ವಾಹನಗಳ ನಂಬರ್ ಬೇಕಾದರೂ ಹೇಳುತ್ತೇನೆ. ಅದರ ಜೊತೆಯಲ್ಲಿ ಇದೊಂದು ಸಣ್ಣ ವಿಚಾರವಲ್ಲ, ನಾನು ಆ ಅಧಿಕಾರಿಯ ಹೆಸರನ್ನು ಸಹ ತಮ್ಮ ಮುಂದೆ ಇಟ್ಟಿದ್ದೇನೆ. ಹೀಗಿದ್ದರೂ ಸಹ ಅವರು ಬೈಲ್ ಅರ್ಜಿಯನ್ನು ಅವರ ಕಡೆಯಿಂದ ಮೂವ್ ಮಾಡಿಸದೇ ಅಷ್ಟು ಜನರನ್ನು ಹಿಂದಕ್ಕೆ

ಕಳುಹಿಸಿದ್ದು ಏಕೆ? ಇನ್ನೊಂದು ವಿಷಯವೇನೆಂದರೆ, ಇಷ್ಟು ಜನಕ್ಕೆ ಬೈಲ್ ಸಿಗುತ್ತದೆ ಬೈಲ್ ಸಿಕ್ಕಿದ ತಕ್ಷಣವೇ ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಿಸಿಕೊಂಡು ಬರಬೇಕು. ಎನ್ನುವಂತಹ ಆಕಾಂಕ್ಷೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಇತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಅಲ್ಲಿಗೆ ಬೈಲ್ ಕೊಡಲು ಬಂದಿದ್ದಂತಹ ವ್ಯಕ್ತಿಗಳನ್ನು ವಾಪಸ್ಸು ಕಳುಹಿಸಿದ ಮೇಲೆ ಒಬ್ಬೊಬ್ಬರಿಗೆ 20 ಸಾವಿರ ರೂಪಾಯಿಗಳು ಬೈಲ್ ಹಣವನ್ನು ಕಟ್ಟಬೇಕೆನ್ನುವ ವಿಚಾರವನ್ನು ಹೇಳಿದ ಮೇಲೆ ಆ ಡೆಸಿಗ್ನೇಟೆಡ್ ಕೋರ್ಟಿನ ಜಡ್ಜ್ 5-30 ಗಂಟೆಯವರೆಗೂ ಕೂಡ ಅವರ ಕೊಠಡಿಯಲ್ಲಿಯೇ ಕುಳಿತು ಹಣವನ್ನು ಕಟ್ಟುತ್ತಾರೆ ಎಂದು ಹೇಳಿ ಕಾದಿದ್ದರಲ್ಲ ಏಕೆ ಹಣವನ್ನು ಕಟ್ಟಲಿಲ್ಲ? ಹಣ ಇರಲಿಲ್ಲವೇ? ಹಣ ಇತ್ತು ಎಲ್ಲವೂ ಇತ್ತು. ಆದರೆ ಇದರ ಹಿಂದೆ ಇರುವಂತಹ ಶಕ್ತಿ ಏನು ಇದೆ, ಅಲ್ಲಿ ಇದ್ದಂತಹ ಡಿಫರೆನ್ಸಸ್ ಏನು ಇದೆ ಇದು ತನ್ನದೇ ಆದ ರೀತಿಯಲ್ಲಿ ಒಂದು ಸಮಸ್ಯೆಯನ್ನು ಕ್ರಿಯೇಟ್ ಮಾಡುವಂಥಾದ್ದು ಆಯಿತು. ಕೇವಲ ಕೆಲವು ಗಂಟೆಗಳ ವಿಚಾರದಲ್ಲಿಯೇ ಆ ಕ್ಷಣದಲ್ಲಿ ಹಣವನ್ನು ಕಟ್ಟಿದ್ದೇ ಆಗಿದ್ದಿದ್ದರೆ ಸಾಯಂಕಾಲ ಬಿಡುಗಡೆ ಆಗಿದ್ದಿದ್ದರೆ ಇಷ್ಟೆಲ್ಲಾ ಪ್ರಕರಣಗಳು ಆಗುತ್ತಿತ್ತಾ? ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ವ್ಯವಸ್ಥೆಯನ್ನು ಅವರು ಹೇಳಿದ ಹಾಗೆಯೇ ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ನಾನು ಗಮನವನ್ನು ಕೊಡಲಿಕ್ಕೆ ಆಗಲಿಲ್ಲ ಎನ್ನುವಂತಹ ಮಾತನ್ನು ಏನು ಹೇಳಿದರು ಅದು ಅವರ ಬಾಯಿಂದ ಆ ಮಾತು ಬರುತ್ತಿರಲಿಲ್ಲ. 108 ದಿವಸಗಳ ಕಾಲ ರಾಜ್ಯದ ಅಭಿವೃದ್ಧಿ ಕಾರ್ಯ ಹಾಳಾಗುತ್ತಿರಲಿಲ್ಲ. 29ನೇ ತಾರೀಖಿನಿಂದಲೇ ಎಲ್ಲರೂ ಸಂತೋಷದಿಂದ ರಾಜ್ಯದ ಅಭಿವೃದ್ಧಿ ಕಾರ್ಯಕ್ಕೆ ಹೋಗಬಹುದಿತ್ತು. ಅವತ್ತು ಕೋರ್ಟಿನ ಆವರಣದಲ್ಲಿ ಪೋಲೀಸ್ ಅಧಿಕಾರಿಗಳ ಮಧ್ಯೆದಲ್ಲಿ ನಡೆದಂತಹ ಒಂದು ಮಾತುಕತೆ, ಅವರಲ್ಲಿ ನಡೆದಂತಹ ವಿರಸ ಇವತ್ತು ಆಡಳಿತದ ಮೇಲೆ ಎಂತಹ ಪರಿಣಾಮವನ್ನು ಬೀರುತ್ತಿದೆ ಎನ್ನುವಂತಾದ್ದರಬಗ್ಗೆ ಪ್ರತಿಯೊಬ್ಬರೂ ಕೂಡ ಚಿಂತನೆಯನ್ನು ಮಾಡುವಂತಹ ಅವಶ್ಯಕತೆ ಇದೆ. ಒಂದು ಮಾತು ಹೇಳಬಹುದಿತ್ತು, ಬೈಲ್‌ಗೆ 20 ಸಾವಿರ ರೂಪಾಯಿಗಳು ಹಾಕುತ್ತಾರೆಂದು ನಮಗೆ ಗೊತ್ತಿರಲಿಲ್ಲ; ಕಾನೂನು ಕಾರ್ಯದರ್ಶಿಗಳು, ಕಾನೂನು ಮಂತ್ರಿಗಳು ಈ ವಿಚಾರದಲ್ಲಿ ಬಹಳ ವಿಷಯಗಳನ್ನು ತಿಳಿದಂತಹವರು. ಇಂಥಾದ್ದೇ ಒಂದು ಪ್ರಕರಣದಲ್ಲಿ ಐದು ತಿಂಗಳ ಹಿಂದೆ ಟಾಡಾ ಕೈದಿಗಳು ಯಾರಿದ್ದರು, ಅವರುಗಳನ್ನು ಬಿಡಿಸುವುದಕ್ಕೋಸ್ಕರ ಸುಪ್ರೀಂಕೋರ್ಟ್‌ನಲ್ಲಿ ತಲಾ ೫೦ ಸಾವಿರ ರೂಪಾಯಿಗಳನ್ನು ಹಾಕಿ ಅವರನ್ನು ಬಿಡುಗಡೆ ಮಾಡಿದಂಥ ಉದಾಹರಣೆಗಳು ಕೂಡ ನಮ್ಮ ಮುಂದೆ ಇತ್ತು. ಈ ಕಾರಣಕ್ಕಾಗಿ ಹಣದ ಅವಶ್ಯಕತೆಯೂ ಇತ್ತು. ಈ ವಿಷಯಗಳು ನಿಮಗೆ ಗೊತ್ತೆ? ಎಂದು ನೀವು ಕೇಳಬಹುದು. ನಾನು ಅಲ್ಲಿ ಇರದಿದ್ದರೂ ಕೂಡ ಅಲ್ಲಿನ ವಿಚಾರಗಳನ್ನು ಅರಿತು ಬಲ್ಲೆನು. ಮುಖ್ಯಮಂತ್ರಿಗಳ ಕಚೇರಿಗೆ ದೂರವಾಣಿಯು ೪-೧೦ ಗಂಟೆಗೆ ಬಂದಾಗ, ಅವರು ಬಹಳ ಬೇಸರದಿಂದ ಮಾತನಾಡಿದ್ದಾರೆ. ನಮ್ಮಲ್ಲಿ ಇಷ್ಟೆಲ್ಲಾ ವ್ಯವಸ್ಥೆಗಳು ಮತ್ತು ಆತುರತೆ ಇದ್ದರೂ ಕೂಡ ಹಣವನ್ನು ಕಟ್ಟಲು ವ್ಯವಸ್ಥೆ

ಮಾಡಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಯನ್ನು ನೋವಿನಿಂದ ಮೈಸೂರಿನಿಂದ ಒಬ್ಬ ಅಧಿಕಾರಿಯನ್ನು ಕರೆಸಿಕೊಂಡು ೨೪ ಲಕ್ಷ ರೂಪಾಯಿಗಳನ್ನು ಮೈಸೂರು ಕೋರ್ಟಿಗೆ ಕಟ್ಟುವುದಕ್ಕೋಸ್ಕರವಾಗಿ ಕಳುಹಿಸಿಕೊಟ್ಟರು. ಆದರೆ ದುರ್ದೈವ ಇಷ್ಟೆಲ್ಲಾ ನೋವನ್ನು ಅನುಭವಿಸಬೇಕಾಗಿತ್ತು ಎಂದು ಕಾಣುತ್ತದೆ. ಮಾರನೇ ದಿವಸ ಸುಪ್ರೀಂ ಕೋರ್ಟ್ ೨೯ನೇ ತಾರೀಖಿನಂದ ಸ್ಟೇ ಕೊಟ್ಟಿತು. ಇಲ್ಲಿ ನಾವು ಯಾವುದೇ ಕಥಾರೂಪವನ್ನು ಹೇಳುವುದನ್ನಾಗಲೀ, ಇಲ್ಲದೇ ಇರುವಂಥ ವಿಚಾರಗಳನ್ನು ಹೇಳುವುದಾಗಲೀ ಮಾಡುವುದು ಬೇಡ. ಆದರೆ ಹಿಂದಿನ ಸರಕಾರ ಈ ವಿಚಾರವನ್ನು ಬಹಳ ಸಣ್ಣದಾಗಿ ತೆಗೆದುಕೊಂಡ ಪರಿಣಾಮವಾಗಿ ಇವೊತ್ತು ನಾವು ಪೆನಾಲ್ಟಿಯನ್ನು ಕೊಡಬೇಕಾಗಿ ಬಂದಿದೆ. ಇನ್ನು ಮುಂದಾದರೂ ಸರಕಾರಗಳು ಇಂಥ ವಿಷಯಗಳನ್ನು ಅಲಕ್ಷ್ಯ ಮಾಡದೇ ಪ್ರತಿಯೊಂದು ವಿಚಾರಗಳಿಗೂ ಗಮನವನ್ನು ಕೊಡಬೇಕು. ನಾನು ಹಳೆಯ ಪ್ರಕರಣಗಳನ್ನು ಪ್ರಸ್ತಾಪಿಸುವುದಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾಪಮಾಡಿ ಸ್ಪಷ್ಟ ಮಾಡಿದ್ದಾರೆ. ನಮ್ಮ ಸಂಧಾನಕಾರ ವ್ಯಕ್ತಿಗಳ ಹೆಸರುಗಳು, ಯಾರನ್ನು ನಾವು ಕಾಡಿಗೆ ಹೋಗಿ ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬರಲು ಹೇಳಿದ್ದೇವೆ ಎಂಬಿತ್ಯಾದಿ ವಿಚಾರಗಳನ್ನು ಹೇಳಿದ್ದಾರೆ. ನಾನು ಮುಖ್ಯಮಂತ್ರಿಯವರ ಮಾತುಗಳಿಗೆ ಪ್ರತಿ ಮಾತನಾಡುತ್ತಿಲ್ಲ, ಆದರೆ ಯಾರನ್ನು ತಾವುಗಳು ನಿಯೋಜನೆ ಮಾಡಿದ್ದೀರಿ, ಹಾಗೆ ನಿಯೋಜನೆ ಮಾಡಿದಂಥ ವ್ಯಕ್ತಿಗಳನ್ನು ಬಿಟ್ಟು ಡಾ: ಭಾನುರವರು ಇರಬಹುದು, ಹಿಂದಿನ ಪೋಲೀಸ್ ವರಿಷ್ಟರ ಮಗ, ರಾಮ್‌ಕುಮಾರ್‌ರವರು ಇರಬಹುದು, ಹೀಗೆ ಬೇರೆ ಬೇರೆಯವರು ಹೋಗಿ ಬಿಡಿಸಿಕೊಂಡು ಬಂದಂಥ ವಿಚಾರಗಳೇನಾದರೂ ಸರಕಾರದ ಗಮನಕ್ಕೆ ಬಂದಿದೆಯೇ? ಹೀಗೆ ಈ ವ್ಯಕ್ತಿಗಳು ಕಾಡಿಗೆ ಹೋಗಿರುವಂಥ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ಎಂಬುದು ನನ್ನ ಪ್ರಶ್ನೆ. ಇನ್ನೊಂದು ಪ್ರಮುಖವಾದಂಥ ವಿಚಾರವನ್ನು ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ನಾವು ಕೊಟ್ಟ ಭರವಸೆಗಳನ್ನು ಕೂಡ ಸ್ಪಷ್ಟವಾಗಿ ಹೇಳಿದರು. ಟಾಡಾ ಸ್ಪೆಶಲ್ ಕೋರ್ಟ್‌ನ್ನು ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದೇವೆ. ಅದನ್ನು ಒಪ್ಪಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ರಾಜ್ಯ ಸರಕಾರವು ಒಪ್ಪಿಕೊಂಡಿದೆ ಎಂಬ ಮಾತನ್ನು ಹೇಳಿದ್ದಾರೆ. ಆ ವಿಚಾರದಲ್ಲಿ ಟಾಡಾ ಕೈದಿಗಳನ್ನು ಬಿಡುಗಡೆ ಮಾಡಿಸುವ ದೃಷ್ಟಿಯನ್ನು ಇಟ್ಟುಕೊಂಡು, ಅವರನ್ನು ಬಿಡುಗಡೆ ಮಾಡಿಯೇ ಮಾಡುತ್ತೇವೆ ಎಂಬ ನಿರ್ದಿಷ್ಟವಾದ ಉತ್ತರವು ಸರಕಾರದಿಂದ ಗ್ಯಾರೆಂಟಿಯಾಗಿ ಬಂದನಂತರದಲ್ಲಿ ನಾವು ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದಿದ್ದೇವೆ ಎಂಬ ಮಾತನ್ನು ನೆಡುಮಾರನ್‌ರವರು ಹೇಳಿದ್ದಾರೆ. ಅದರ ಜೊತೆಯಲ್ಲಿ ಒಂದು ಕಾಕತಾಳೀಯ ವಿಚಾರವೊಂದಿದೆ. ೨೫ನೇ ತಾರೀಖಿನಂದು ಮೈಸೂರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಅಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ನೋಡಲು ಬರುತ್ತಿದ್ದಾರೆ. ಅದೇ ದಿವಸ ನೆಡುಮಾರನ್ ಕೂಡ ಬರುತ್ತಿದ್ದಾರೆ. ಹೀಗೆ ಏಕೆ ಎಂಬ ವಿಚಾರವು ನಮಗೆ ಇನ್ನೂ ಗೊತ್ತಾಗಿಲ್ಲ. ನೆಡುಮಾರನ್‌ರವರು ಅಂದು ಮೈಸೂರಿಗೆ ಭೇಟಿ ನೀಡಿ ಅಲ್ಲಿನ

ಜೈಲಿನಲ್ಲಿರುವ ಟಾಡಾ ಕೈದಿಗಳನ್ನು ಭೇಟಿ ಮಾಡಿ ವಿಚಾರ ಮಾಡಿಕೊಂಡು ಪ್ರೋಗ್ರಾಂ ಹಾಕಿಕೊಂಡಿದ್ದಾರೆಂದು ತಿಳಿದು ಬರುತ್ತದೆ. ಇಬ್ಬರೂ ಅಂದು ಯಾವುದಾದರೂ ಮಾತುಕತೆಯಲ್ಲಿ ಸೇರುತ್ತಾರೋ ಎಂಬುದು ಕೂಡ ಗೊತ್ತಿಲ್ಲ. ಈ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ನಮ್ಮೂರಿಗೆ ಬರುತ್ತಿರುವುದನ್ನು ಸ್ವಾಗತಿಸುತ್ತಾ, ತಮಿಳುನಾಡಿನಿಂದ ನೆಡುಮಾರನ್‌ರವರು ಮೈಸೂರಿಗೆ ಅಂದೇ ಬರುತ್ತಿರುವುದು ಏಕೆ ಎಂಬುದು ನನ್ನ ಪ್ರಶ್ನೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಭಾಷಣ ಮಾಡುತ್ತಿದ್ದಾರೆ. ತಮ್ಮ ಅಪೇಕ್ಷೆಯಂತೆ ದೇವಸ್ಥಾನಕ್ಕೆ ಹೋದರೆ ವಿಗ್ರಹವನ್ನು ನೋಡಿಕೊಂಡೇ ಇರಬೇಕೆಂದು ಅಲ್ಲ. ನಾನು ಎಲ್ಲಿದ್ದರೂ ನನ್ನ ಕಿವಿ ಭಾಷಣ ಮಾಡುವವರ ಕಡೆಗೆ ಇರುತ್ತದೆ.

ಶ್ರೀ ಎ. ರಾಮದಾಸ್:— ನನ್ನ ಬಿನ್ನಹ ಏನೆಂದರೆ ೨೫ನೇ ತಾರೀಖಿನಂದು ತಾವುಗಳು ಮೈಸೂರಿಗೆ ಬರುತ್ತಾ ಇದ್ದೀರಿ, ಹಾಗೆಯೇ ನೆಡುಮಾರನ್‌ರವರು ಕೂಡ ಬರುತ್ತಿದ್ದಾರೆ, ಡಾ: ಜಗಜೀವನ್‌ರಾಮ್‌ರವರ ಪುತ್ಥಳಿ ಅನಾವರಣ ಕಾರ್ಯಕ್ರಮ ಅಂದು ಇದೆ, ಅದೇ ರೀತಿಯಲ್ಲಿ ಟಾಡಾ ಕೈದಿಗಳ ಬಿಡುಗಡೆಗೆ ಸರಕಾರದವರು ತೆಗೆದುಕೊಂಡ ಕ್ರಮಗಳನ್ನು ನೋಡಿಕೊಂಡು ಕೈದಿಗಳ ಜೊತೆಗೆ ಮಾತನಾಡುವ ಕಾರ್ಯಕ್ರಮವನ್ನು ನೆಡುಮಾರನ್‌ರವರು ಹಾಕಿಕೊಂಡಿದ್ದಾರೆ. ಅಂದರೆ ರಾಜ್ಯ ಸರಕಾರವು ಕೊಟ್ಟ ಭರವಸೆಗಳನ್ನು ನೆಡುಮಾರನ್ ನೋಡಿಕೊಂಡು ಹೋಗಲು ಬರುತ್ತಿದ್ದಾರೋ ಎಂಬುದು ನನ್ನ ಪ್ರಶ್ನೆ. ಇನ್ನೊಂದು ವಿಚಾರ ತಿರುವಳ್ಳುವರ್‌ರವರ ಪ್ರತಿಮೆಯನ್ನು ಅನಾವರಣ ಮಾಡುವಂಥಾದ್ದು, ಇದರ ಬಗ್ಗೆ ತಾವುಗಳು ಅವೊತ್ತೇ ಹೇಳಿದ್ದೀರಿ. ಆದರೆ ನಾನು ತಿಳಿದಿರುವ ಪ್ರಕಾರ ಬೆಂಗಳೂರಿನಲ್ಲಿರುವ ತಿರುವಳ್ಳುವರ್ ಪ್ರತಿಮೆಯನ್ನು ಡಾ: ರಾಜ್‌ಕುಮಾರ್‌ರವರು ಅನಾವರಣ ಮಾಡಬೇಕು, ಅದರಲ್ಲಿ ಮುಖ್ಯ ಅತಿಥಿಗಳಾಗಿ ನೆಡುಮಾರನ್‌ರವರು ಬರಬೇಕೆನ್ನುವ ವಿಚಾರವನ್ನು ಹೇಳಿದ್ದೇವೆ ಎನ್ನುವ ವಿಚಾರ ಕೂಡ ಎಲ್ಲಾ ಕಡೆಗಳಲ್ಲಿ ಬಂದಿದೆ. ಇದು ನಿಜವೇ? ಈ ವಿಚಾರವನ್ನು ಸರಕಾರದವರು ಸ್ಪಷ್ಟಪಡಿಸಬೇಕೆಂದು ಕೇಳಬಯಸುತ್ತೇನೆ. ತಾವುಗಳು ಇವೊತ್ತು ಸದಾಶಿವ ಆಯೋಗದ ಕಾರ್ಯಾಚರಣೆ ಪ್ರಾರಂಭವಾಗುತ್ತದೆ ಎಂದು ಹೇಳಿದ್ದೀರಿ. ನಾನು ಒಬ್ಬ ಶಾಸಕನಾಗಿ ನೋವಿನಿಂದ, ನನಗೆ ಅರಿವು ಇರುವ ರೀತಿಯಲ್ಲಿ ಒಂದು ವಿಚಾರವನ್ನು ತಮ್ಮಲ್ಲಿ ಹೇಳಿಕೊಳ್ಳುತ್ತೇನೆ. ಸರಕಾರದಲ್ಲಿನ ಉನ್ನತ ಅಥವಾ ಕೆಳಮಟ್ಟದ ಯಾವುದೇ ಸಿಬ್ಬಂದಿವರ್ಗದವರು ಇದ್ದರೂ ಕೂಡ ಕೆಸಿಎಸ್‌ಆರ್ ನಿಯಮಗಳ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಸದಾಶಿವನ್ ಆಯೋಗದ ಕಾರ್ಯ ಏನು ನಡೆಯಬೇಕಾಗಿದೆ ಅದನ್ನು ನಿಲ್ಲಿಸುವುದಕ್ಕೋಸ್ಕರವಾಗಿ ತಮ್ಮ ಪೋಲೀಸ್ ಅಧಿಕಾರಿಗಳು ನ್ಯಾಯಾಲಯಕ್ಕೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರಲ್ಲ ಅದಕ್ಕೆ ರಾಜ್ಯ ಸರಕಾರದ ಪರ್ಮಿಷನ್ ತೆಗೆದುಕೊಂಡಿದ್ದಾರೆಯೇ? ಅದನ್ನು ಸರಕಾರ ಹೇಳಬೇಕು. ಎರಡನೆಯದಾಗಿ ಸರಕಾರವೇ

ಹೋಗಿ ಆ ಸ್ಟೇಯನ್ನು ಹೈಕೋರ್ಟ್‌ನಲ್ಲಿ ವೆಕೇಟ್ ಮಾಡಿಸಿತು. ಹೈಕೋರ್ಟ್ ಸಿಂಗಲ್ ಬೆಂಚ್‌ನಲ್ಲಿ ವೆಕೇಟ್ ಮಾಡಿಸಿದ ಮೇಲೆ ಮತ್ತೆ ಡಿವಿಜನಲ್ ಬೆಂಚ್‌ನಲ್ಲಿ ಅದೇ ಅಧಿಕಾರಿಗಳು ಸರಕಾರದ ವಿರುದ್ಧ ಅಫಿಟವಿಟನ್ನು ಹಾಕಿ ಮತ್ತೆ ಸ್ಟೇ ತಂದಿದ್ದಾರೆನ್ನುವುದಾದರೆ ಸರಕಾರದ ಮೇಲೆ ಪೋಲೀಸ್ ಅಧಿಕಾರಿಗಳಿಗೆ, ಇಲಾಖೆಗೆ ವಿಶ್ವಾಸವಿದೆಯೇ? ಇಲ್ಲವೆ? ಅಥವಾ ಅಲ್ಲಿರುವಂಥ ಒಂದು ತಂಡ ಯಾವರೀತಿಯಲ್ಲಿ ಕೆಲಸ ಮಾಡುತ್ತಿದೆ? ಇಲಾಖೆಯಲ್ಲಿ ವಿಭಾಗವೇನಾದರೂ ಏರ್ಪಟ್ಟಿದೆಯೇ ಎಂಬ ಭಯ ನಮ್ಮಲ್ಲಿ ಮೂಡಿದೆ. ಅದಕ್ಕೂ ತಾವುಗಳು ಪರ್ಮಿಷನ್‌ನ್ನು ಕೊಟ್ಟಿದ್ದೀರಾ? ತಾವುಗಳು ವೀರಪ್ಪನ್‌ಗೆ ಯಾವುದೇ ಮೊತ್ತದ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದೀರಿ. ಆದರೆ ಜನರ ಮನಸ್ಸಿನಲ್ಲಿ ಇದು ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಟಾಡಾ ಕೈದಿಗಳನ್ನು ಬಿಟ್ಟಿಲ್ಲ, ಹಣವನ್ನು ಕೊಟ್ಟಿಲ್ಲ, ಬೇರೆ ಏನೂ ಆಗಿಲ್ಲವೆನ್ನುವುದಾದರೆ ರಾಜ್‌ಕುಮಾರ್‌ರವರನ್ನು ಏತಕ್ಕಾಗಿ ಕರೆದುಕೊಂಡು ಹೋದರು ಮತ್ತು ಏತಕ್ಕಾಗಿ ಬಿಟ್ಟರು? ಎಂಬುದು ಪ್ರಶ್ನೆ. ಮಾನ್ಯಮುಖ್ಯಮಂತ್ರಿಯವರು ಪತ್ರಿಕೆಗಳಲ್ಲಿ ಬಂದಿರುವುದೆಲ್ಲವೂ ನಿಜವೇ? ಎಂಬ ಪ್ರಶ್ನೆಯನ್ನು ನನಗೂ ಕೇಳಬಹುದು. ನಾನು ನಿಜ ಮತ್ತು ಸುಳ್ಳು ಎಂಬ ವಿಚಾರಕ್ಕೆ ವಿಮರ್ಶೆ ಮಾಡಬಯಸುವುದಿಲ್ಲ. ಆದರೆ ರಾಮಸ್ವಾಮಿಯವರಂಥ ಜವಾಬ್ದಾರಿಯುಳ್ಳ ಜರ್ನಲಿಸ್ಟ್ ಕೂಡ ಈ ವಿಚಾರದಲ್ಲಿ ತಮ್ಮದೇ ಆದ ಒಂದು ವಿಚಾರವನ್ನು ಹೇಳುತ್ತಾ ತುಘಲಕ್ ಪತ್ರಿಕೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ರಾಜ್ಯ ಸರಕಾರ ವೀರಪ್ಪನ್‌ಗೆ ಸುಮಾರು 25 ಕೋಟಿ ರೂಪಾಯಿಗಳನ್ನು ಹಣದ ರೂಪದಲ್ಲಿ ಮತ್ತು ಗೋಲ್ಡ್ ಬಿಸ್ಕೆಟ್ ರೂಪದಲ್ಲಿ ಕೊಟ್ಟಿರುವಂತಾದ್ದು ಇದೆ ಎಂದು ಪತ್ರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಇದನ್ನು ನಿಜವೆಂದು ನಾನೇನೂ ಹೇಳುತ್ತಾ ಇಲ್ಲ. ಆದರೆ ಇಂಥ ಸಂಶಯಗಳನ್ನು ದೂರಮಾಡುವುದು ಸರಕಾರದ ಕರ್ತವ್ಯವು ಕೂಡ ಆಗಿದೆ ಎಂಬುದನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ಜನರ ಮನಸ್ಸಿನಲ್ಲಿ ಇಂಥ ಸಂಶಯಗಳು ಬರಬಾರದೆನ್ನುವ ದೃಷ್ಟಿಯಿಂದ ಸರಕಾರದವರು ಈ ಬಗ್ಗೆ ಸ್ಪಷ್ಟೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಚಂದ್ರೇಗೌಡ :— ಹಾಗೆ ಹಣವನ್ನು ಸರಕಾರದವರು ಕೊಡುವುದಾದರೆ ಆದಕ್ಕೆ ಇಲ್ಲಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಲ್ಲವೆ?....

ಶ್ರೀ ಎ. ರಾಮದಾಸ್ :— ಇನ್ನೊಂದು ಪ್ರಮುಖವಾದ ವಿಚಾರವೆಂದರೆ ರಾಜ್‌ಕುಮಾರ್‌ರವರ ಅಪಹರಣವಾದ ನಂತರದಲ್ಲಿ ಬಿಡುಗಡೆಯಾಗುವ ಮಧ್ಯದಲ್ಲಿ, ೨೯ ದಿವಸಗಳ ಕಾಲ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಮಧ್ಯದಲ್ಲಿ ಇರತಕ್ಕಂಥ ಚೆಕ್‌ಪೋಸ್ಟ್‌ಗಳನ್ನು ತೆಗೆದಿದ್ದೀರಿ. ಅದು ಫಾರೆಸ್ಟ್ ಕಮರ್ಷಿಯಲ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್‌ಗಳಿಗೆ ಸಂಬಂಧಪಟ್ಟ ಚೆಕ್‌ಪೋಸ್ಟ್‌ಗಳಾಗಿದ್ದುವು. ಇದು ಯಾವ ಡಿಮ್ಯಾಂಡ್‌ಗಳ ಮೇಲೆ ತೆಗೆದುಹಾಕಿದ್ದೀರಿ? ಯಾರ ಬೇಡಿಕೆಗಳ ಮೇಲೆ ತೆಗೆದು ಹಾಕಿದ್ದೀರಿ ಮತ್ತು ಅದರ

ಹಿಂದಿರುವ ಕಾರಣಗಳೇನು? ಆ ಎರಡೂ ಚೆಕ್‌ಪೋಸ್ಟ್‌ಗಳನ್ನು ಮುಚ್ಚಬೇಕೆಂದು ಗೋಪಾಲನ್ ವೀರಪ್ಪನ್ ಹತ್ತಿರ ಹೋಗಿದ್ದಾಗ ಹೇಳಿದ್ದನೆ? ಇದು ಬಹಳ ಪ್ರಮುಖವಾದಂಥ ವಿಚಾರವಾಗಿದೆ. ನಾನು ಏಕೆ ಈ ಮಾತನ್ನು ಕೇಳುತ್ತಿದ್ದೇನೆ ಅಂದರೆ ಇದರ ಹಿಂದೆ ಬಹಳ ದೊಡ್ಡ ಲಾಬಿ ಇದೆ. ಇಲ್ಲಿ ಕಲ್ಲಿನ ಲಾಬಿ ಹಾಗೂ ಕಾಡಿನ ಲಾಬಿಗಳು ಬಹಳಷ್ಟು ಕೆಲಸವನ್ನು ಮಾಡಿವೆ. ಹಾಗೆ ಕಲ್ಲಿನ ಲಾಬಿಯವರು, ಫಾರೆಸ್ಟ್ ಕಂಟ್ರಾಕ್ಟರ್‌ಗಳು ಇದರ ಮೇಲೆ ಇನ್‌ಫ್ಲೂಯೆನ್ಸ್‌ನ್ನು ಬೀರಿದ್ದರೆ? ೨೯ ದಿನಗಳ ನಂತರ ಚೆಕ್‌ಪೋಸ್ಟ್‌ಗಳನ್ನು ಮುಚ್ಚಿ ಅನಂತರ ಕೆಲವು ದಿನಗಳ ನಂತರ ಪ್ರಾರಂಭ ಮಾಡಿದ್ದೀರಿ ಎಂಬ ಬಗ್ಗೆ ವಿವರಗಳನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ಪ್ರಕಾರದಲ್ಲಿ ವೀರಪ್ಪನ್ ಅಕ್ಯುಪೈಡ್ ಕರ್ನಾಟಕ ಏನಿದೆಯಲ್ಲ? ಅಲ್ಲಿ ಗಣಿಗಾರಿಕೆ ಇರಲಿಲ್ಲ. ಪತ್ರಿಕೆಗಳಲ್ಲಿ ಬಂದ ಸುದ್ದಿಗಳ ಪ್ರಕಾರ ವೀರಪ್ಪನ್ ಆಕ್ಯುಪೈಡ್ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ನಮ್ಮ ರಾಜ್ಯ ಸರಕಾರದವರು ಇಂಡೈರೆಕ್ಟ್ ಆಗಿ ಒಪ್ಪಿದ್ದಾರೆ ಎಂಬ ವಿಚಾರಗಳನ್ನು ಪ್ರಚಾರ ಮಾಡಿವೆ. ಈ ದೃಷ್ಟಿಯಲ್ಲಿ ಈ ಪ್ರದೇಶದಲ್ಲಿ ಗಣಿಗಾರಿಕೆಗೆ ತಾವುಗಳು ಪರ್ಮಿಷನ್ ಕೊಡುತ್ತೀರೋ ಇಲ್ಲವೋ? ಎಂಬುದು ಬಹಳ ಪ್ರಮುಖವಾದ

5.50 ಪಿ.ಎಂ.

ವಿಚಾರವಾಗಿದೆ. ಹೀಗಾಗಿ ಈ ವಿಚಾರಕ್ಕೂ ಕೂಡ ಸರ್ಕಾರ ಒಪ್ಪಿದೆ. ಈ ಒಪ್ಪಿಗೆ ಕೂಡ ಡಾ: ರಾಜ್‌ಕುಮಾರ್‌ರವರ ಬಿಡುಗಡೆಗೆ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದೆ ಎನ್ನುವಂಥ ಮಾತುಗಳನ್ನು ನಾವೆಲ್ಲರೂ ಕೇಳುತ್ತಿದ್ದೇವೆ. ಇವತ್ತು ವೀರಪ್ಪನ್‌ನ ಒಂದು ಕ್ಷಮಾದಾನದ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ತಾವು ಇವತ್ತು ನೇರವಾದ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೀರಿ. ವೀರಪ್ಪನ್ ವಿರುದ್ಧ ಕಾರ್ಯಾಚರಣೆಯನ್ನು ನಾವು ಮಾಡುತ್ತಿದ್ದೇವೆ, ಬಹಳ ಸಂತೋಷ. ಹಾಗೆ ಕಾರ್ಯಾಚರಣೆಯನ್ನು ಮಾಡತಕ್ಕ ವಿಚಾರದಲ್ಲಿ ಇವತ್ತು ಒಮ್ಮತದ ಮನಸ್ಸಿನಿಂದ, ಒಕ್ಕೊರಲಿನಿಂದ ಎಲ್ಲರೂ ಕೂಡ ಅದು ಆಗಬೇಕೆನ್ನುವ ವಿಚಾರವನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಆದರೆ ಇದೇ ತಿಂಗಳು ಯಾರು ಇದರ ಸಂಧಾನಕ್ಕೋಸ್ಕರ ಹೋಗಿದ್ದರಲ್ಲ ನೆಡುಮಾರನ್‌ರವರು, ಅವರೇ ಇವತ್ತು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ನಾವು ವೀರಪ್ಪನ್ ಅವರಿಗೆ ಸಮಾಧಾನ ಮಾಡುವ ವಿಚಾರದಲ್ಲಿ ಸರ್ಕಾರಗಳ ಒಪ್ಪಿಗೆ ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದರ ಜೊತೆಯಲ್ಲಿ ಬಹಳ ಆಶ್ಚರ್ಯದ ವಿಚಾರವೆಂದರೆ ಈ ಒಂದು ದೃಷ್ಟಿಯಲ್ಲಿ ಇದೇ ತಿಂಗಳ 26ನೇ ತಾರೀಖು ಕೊಳತ್ತೂರಿನಲ್ಲಿ ವಿಶೇಷವಾಗಿ ಎನ್‌ಹೆಚ್‌ಆರ್‌ಸಿ ಯಾವುದು ಇಂಟರ್‌ಫಿಯರ್ ಆಗುವುದಿಲ್ಲವೆಂದು ಹೇಳಿತ್ತು. ಅದರ ವಿರುದ್ಧವಾಗಿ ವೀರಪ್ಪನ್‌ಗೆ ಕ್ಷಮಾದಾನವನ್ನು ನೀಡಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡು ಇವತ್ತು ಎಲ್‌ಟಿಟಿಇ-ಯ ಅಡಿಯಲ್ಲಿ ಕೊಳತ್ತೂರು ಮಣಿಯವರು ಆರ್ಗನೈಜ್ ಮಾಡಿರುವ ಒಂದು ದೊಡ್ಡ ರ‍್ಯಾಲಿ ಯಾವುದು ಇದೆ, ಅದಕ್ಕೆ ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಯಾದಂಥವರು ಕೂಡ ನಾವು ಭಾಗವಹಿಸುತ್ತಿದ್ದೇವೆ ಎನ್ನುವಂಥ ಮಾತನ್ನು ಅವರೇ ಹೇಳಿದ್ದಾರೆ. ಅಲ್ಲಿ ನೆಡುಮಾರನ್‌ರವರು ಕೂಡ

ಭಾಗವಹಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಪಾಂಪ್ಲೆಟ್ಸ್‌ಗಳನ್ನು ಕೊಳತ್ತೂರಿನಲ್ಲಿ ಒಂದು ದೊಡ್ಡ ಕಾರ್ಯಕ್ರಮವೇನು ನಡೆಯುತ್ತಿದೆ ಇದಕ್ಕೆ ಸಂಬಂಧಪಟ್ಟ ಪಾಂಪ್ಲೆಟ್‌ಗಳನ್ನು ಮೈಸೂರಿನಲ್ಲಿ ಟಾಡಾ ಕೈದಿಗಳು ಅವತ್ತಿನ ದಿವಸ ಕೋರ್ಟಿಗೆ ಬಂದರೋ, ಅವತ್ತಿನ ದಿವಸ ಕೋರ್ಟಿನ ಆವರಣದಲ್ಲಿ ಸಾವಿರಾರು ಪಾಂಪ್ಲೆಟ್‌ಗಳನ್ನು ಹಂಚಲಾಗಿದೆ. ಎಲ್‌ಟಿಟಿಇ-ಯ ಸಿಂಬಲ್ ಇರುವ, ಅದರ ಫ್ಲಾಗ್ ಇರುವಂಥ ಅದರ ಹೆಸರಿನಲ್ಲಿ ಮುದ್ರಣವಾಗಿರುವಂಥ ಪಾಂಪ್ಲೆಟ್‌ಗಳನ್ನು ಮೈಸೂರು ಮಹಾನಗರದಲ್ಲಿ ಕಳೆದ ಮೂರು ದಿವಸಗಳ ಹಿಂದೆ ಎಲ್ಲವನ್ನೂ ಹಂಚಿದ್ದಾರೆ. ಇದರಲ್ಲಿ ಅವರು ಕೂಡ ಭಾಗವಹಿಸುತ್ತಿದ್ದಾರೆ ಎನ್ನುವ ಮಾತುಗಳು ಕೂಡ ಅದರಲ್ಲಿದೆ. ಹೀಗಾದರೆ ರಾಜ್ಯ ಅದರ ಬಗ್ಗೆ ಯಾವ ಚಿಂತನೆಯನ್ನು ಮಾಡಿದೆ? ಇದರ ಹಿಂದೆ ಯಾವ ಶಕ್ತಿಗಳು ಅಡಗಿವೆ ಎನ್ನುವುದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಸೋಮಶೇಖರ್‌ರವರು ಈಗ ಇಲ್ಲಿ ಇಲ್ಲ. ಅವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಿದರು. ಅವತ್ತು ನೀವು ನಾವೆಲ್ಲ ಕುಳಿತಿದ್ದೆವು. ಇವತ್ತು ಒಬ್ಬ ದಕ್ಷ ಅಧಿಕಾರಿ ಡಿಜಿಪಿ-ಯವರು ಇದ್ದಾರೆ, ಅದರ ಬಗ್ಗೆ ನಾನು ಯಾವುದೇ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂದು ಡಿಜಿಪಿ-ಯಾಗಿದ್ದರಲ್ಲ, ಅಂದು ಅವರ ಪೀರಿಯಡ್‌ನಲ್ಲಿ ವೀರಪ್ಪನನ್ನು ಹಿಡಿಯುತ್ತೇವೆ ಎಂದು ಹೇಳಿ ಯಾವ ಸಮಯದಲ್ಲಿ ಹಿಂದಿನ ಸರ್ಕಾರ ಇತ್ತು, ಆ ಪೀರಿಯಡ್‌ನಲ್ಲಿ ಸುಮಾರು ಆರು ಕೋಟಿ, ಐವತ್ತೊಂಭತ್ತು ಲಕ್ಷದ ಹದಿಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರು ಹಣವನ್ನು ಖರ್ಚು ಮಾಡುವುದರ ಜೊತೆಗೆ ಬಹಳ ಒಂದು ಒಳ್ಳೆಯ ಮಾತನ್ನು ಹೇಳಿದರು. ಅವರು ರಿಟೈರ್ಡ್ ಆದ ದಿವಸ ಆಡಿದ ಮಾತನ್ನು ನಾನು ಪತ್ರಿಕೆಯಲ್ಲಿ ಓದಿದೆ. ರಿಟೈರ್ಡ್ ಆದ ದಿವಸ ಅವರಿಗೊಂದು ಬೀಳ್ಕೊಡುಗೆ ಸಮಾರಂಭವಿತ್ತು. ಅದರಲ್ಲಿ ಮಾತನಾಡುತ್ತಾ ಒಂದು ವಿಚಾರವನ್ನು ಹೇಳಿದರು. ನಾನು ನನ್ನ ಪೀರಿಯಡ್‌ನಲ್ಲಿ ಬಹಳ ತೃಪ್ತಿಕರವಾದಂಥ ಕೆಲಸವನ್ನು ಮಾಡಿದ್ದೇನೆ ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೋಸ್ಕರವಾಗಿ ಮಾಡಿದ ಕರ್ತವ್ಯದಿಂದ ನನ್ನ ಆತ್ಮಕ್ಕೆ ತೃಪ್ತಿಯಾಗಿದೆ. ಆದರೆ ಒಂದು ನೋವು ಮಾತ್ರ ನನ್ನ ಮನಸ್ಸನ್ನು ಕಾಡುತ್ತಿದೆ, ಅದು ನನ್ನ ಪೀರಿಯಡ್‌ನಲ್ಲಿ ವೀರಪ್ಪನನ್ನು ಬಂಧನ ಮಾಡಲಿಕ್ಕಾಗುವುದಿಲ್ಲವೆಂದು ಅವರನ್ನು ಹಿಡಿದು ಅಂಥ ದೇಶದ್ರೋಹಿಯನ್ನು ಈ ದೇಶಕ್ಕೆ ಒಪ್ಪಿಸಬೇಕಾಗಿತ್ತು. ಆ ಕೆಲಸವನ್ನು ಮಾಡಲಿಲ್ಲವಲ್ಲ ಎನ್ನುವಂಥ ನೋವು ನನ್ನ ಮನಸ್ಸನ್ನು ಕಾಡುತ್ತಿದೆ ಎಂದು ಯಾವ ಡಿಜಿಪಿ-ಯವರು ಹೇಳಿದ್ದರೋ ಅವರೇ ಇವತ್ತು ಆ ವಿಚಾರದಲ್ಲಿ ಸರ್ಕಾರದ ವಿಚಾರಗಳನ್ನು ಇಟ್ಟುಕೊಂಡು ಇವತ್ತು ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದಾರೆ, ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಇವತ್ತು ವೀರಪ್ಪನ್‌ಗೆ ಕ್ಷಮಾದಾನವನ್ನು ಕೊಡಬೇಕೆನ್ನುವಂಥ ಮಾತನ್ನು ಕೂಡ ಹೇಳಿದ್ದಾರೆ. ಹೀಗಾಗಿ 26ನೇ ತಾರೀಖು ನಡೆಯುತ್ತಿರುವಂಥ ಸಮಾರಂಭದಲ್ಲಿ ಕ್ಷಮಾದಾನವನ್ನು ಕೊಡಬೇಕು ಎನ್ನುವಂಥ ಕಾರ್ಯಕ್ರಮ ಏನಿದೆ, ಕೊಳತ್ತೂರಿನಲ್ಲಿ ನಡೆಯುತ್ತಿರುವ ಎಲ್‌ಟಿಟಿಇ-ರ್‍ಯಾಲಿ...

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಕ್ಷಮಾದಾನದ ಪ್ರಶ್ನೆ ಯಾವಾಗ ಬರುತ್ತದೆ? After the court decides, then the power comes to either the Governor or the President of India under the scheme of parden. ಯಾವುದೇ ಒಂದು ಕೋರ್ಟಿಗೂ ಹಾಜರಾಗಿಲ್ಲ. ಕ್ಷಮಾದಾನದ ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಎಸ್. ಸುರೇಶ್ ಕುಮಾರ್ :— ಇಲ್ಲ, ರಾಮದಾಸ್‌ರವರು ತಪ್ಪು ಮಾಡಿದರು. ಕ್ಷಮಾದಾನ ಅಲ್ಲ, ನೀನು ಹೋಗಪ್ಪ ಎಂದು ಹೇಳಿ ಜೀವದಾನ ಕೊಟ್ಟುಬಿಡಬೇಕಾಗಿತ್ತು.

ಶ್ರೀ ಎಸ್.ಎಸ್. ಪಾಟೀಲ್ :— ಪೂಲನ್ ದೇವಿಗೆ ಶಿಕ್ಷೆ ಮಾಡಿದರಲ್ಲ, ಯಾವ ರೀತಿ ಮಾಡಿದರು?

ಶ್ರೀ ಡಿ.ಬಿ. ಚಂದ್ರೇಗೌಡ :— ಪೂಲನ್‌ದೇವಿಗೆ ಶಿಕ್ಷೆಯಾಗಿತ್ತು, 13 ವರ್ಷ ಜೈಲಿನಲ್ಲಿದ್ದಳು. ಆ ಸಮಯದಲ್ಲಿ ಕ್ಷಮಾದಾನವನ್ನು ಕೊಟ್ಟರು. ಇಲ್ಲಿ ಟ್ರಯಲ್ಲೇ ಆಗಿಲ್ಲ ಸ್ವಾಮಿ.

ಶ್ರೀ ಎಸ್.ಎಸ್. ಪಾಟೀಲ್ :— ನಾವು ಕೇಳುತ್ತಿರುವುದು, ತಾವು ಜೆಪಿ ಆಗುತ್ತೀರೋ ಹೇಗೆ ಎಂದು ಕೇಳುತ್ತಿದ್ದೇನೆ. ಜೆಪಿಯವರೇ ಮೊದಲು ಬಿಡಿಸಿಕೊಂಡು ಬಂದರು.

ಶ್ರೀ ಡಿ.ಬಿ. ಚಂದ್ರೇಗೌಡ :— ಬಿಡಿಸಿಕೊಂಡು ಬಂದರು. ಟ್ರಯಲ್ ಆಯಿತು. ಶಿಕ್ಷೆ ಕೊಟ್ಟರು. She was in Jail. ಆಮೇಲೆ ಪ್ರೆಸಿಡೆನ್ಷಿಯಲ್ ಪವರ್ಸ್‌ನ್ನು ಉಪಯೋಗಿಸಿ ಪಾರ್ಡನ್ ಮೂಲಕ ಅದನ್ನು ಕೊಟ್ಟರು. ಕ್ಷಮಾದಾನ ಕೊಡುವ ಅಧಿಕಾರ ಬರುವುದು after the conviction, not before the conviction. ನಾವು ಕ್ಷಮಾದಾನವನ್ನು ಕೊಡುತ್ತೇವೆಂದರೂ ಕೊಡುವವರು ಯಾರು? ಯಾರಿಗೆ ಶಿಕ್ಷೆಯಾಗಿದ್ದರೆ ಅವರಿಗೆ ಕ್ಷಮಾದಾನದ ಪ್ರಶ್ನೆ. ಶಿಕ್ಷೆಯೇ ಆಗದಿದ್ದರೆ ಹೇಗೆ ಕ್ಷಮಾದಾನದ ಪ್ರಶ್ನೆ ಬರುತ್ತದೆ?

ಶ್ರೀ ಎ. ರಾಮದಾಸ್ :— ಯಾರು ಆ ಮಾತನ್ನು ಹೇಳಿದ್ದರೋ ಅವರೇನೆ ಇವತ್ತು ವೀರಪ್ಪನ್‌ಗೆ ಜೀವದಾನ ಮಾಡಬೇಕು, ಯಾವುದೇ ಕಾರ್ಯಾಚರಣೆಯನ್ನು ಮಾಡಬಾರದೆಂದು ಹೇಳಿ 26 ನೇ ತಾರೀಖು ನಡೆಯುತ್ತಿರುವಂಥ ರ್‍ಯಾಲಿಯಲ್ಲಿ ಮುಖ್ಯ ಅತಿಥಿಗಳಾಗಿದ್ದಾರೆ. ಒಂದು ಕಡೆ ರಾಮಲಿಂಗಂ ಅವರ ಪುತ್ರ, ಇನ್ನೊಂದು ಕಡೆ ಶ್ರೀನಿವಾಸಲು, ಇನ್ನೊಂದು ಕಡೆ ಕಾರ್ಯಾಚರಣೆ ಮಾಡಿಯೇ ಮಾಡುತ್ತೇವೆಂದು ಹೇಳಿ ಸರ್ಕಾರಕ್ಕೆ ಛೇಂಬರ್‌ಗೆ ಸ್ಟೇಟ್‌ಮೆಂಟ್ ಬರುವುದಕ್ಕೂ ಮೊದಲೇ ಇವತ್ತು ದಕ್ಷ ಅಧಿಕಾರಿಗಳು

ಅವರದೇ ಆದಂಥ ರೀತಿಯಲ್ಲಿ ಸ್ಟೇಟ್‌ಮೆಂಟ್‌ನ್ನು ಕೊಟ್ಟರು. ನಿಜ. ಇವತ್ತು ಮುಖ್ಯಮಂತ್ರಿಗಳು ಹೇಳುವಂಥ ಸಮಯದಲ್ಲಿ...

ಶ್ರೀ ಡಿ.ಬಿ. ಚಂದ್ರೇಗೌಡ :— ನೀವು ಇಬ್ಬರು ಮುಖ್ಯಮಂತ್ರಿಗಳ ಹೇಳಿಕೆಯನ್ನು ಒಪ್ಪುತ್ತೀರೋ? ಯಾವುದೇ ಜವಾಬ್ದಾರಿ ಇಲ್ಲದೆ ಹೊರಗಡೆ ಯಾರಾದರೂ ಹೇಳಿದರೆ ಅವರ ಮಾತನ್ನು ಒಪ್ಪುತ್ತೀರೋ? ಅಷ್ಟು ಹೇಳಿ.

ಶ್ರೀ ಎ. ರಾಮದಾಸ್ :— ಇಬ್ಬರು ಮುಖ್ಯಮಂತ್ರಿಗಳ ವಿಚಾರವನ್ನು ಈಗಾಗಲೇ ನಾನು ಹೇಳಿದೆ. ಯಾರ್‍ಯಾರ ಜವಾಬ್ದಾರಿ ಏನಿತ್ತು? ಅವರ ಜವಾಬ್ದಾರಿಯನ್ನು ಅವರು ಮಾಡಿದ್ದರೆ ಇಷ್ಟು ಸಮಸ್ಯೆಯಾಗುತ್ತಿರಲಿಲ್ಲವೆಂದು ಹೇಳಿದೆ.

ಶ್ರೀ ಡಿ.ವಿ.. ಸದಾನಂದಗೌಡ :— ಅವರು ಹೇಳಿದ್ದೇನೆಂದರೆ, ಇಬ್ಬರು ಮುಖ್ಯಮಂತ್ರಿಗಳೂ ಕೂಡ ಜವಾಬ್ದಾರಿಯಿಂದ ಹೇಳಿಕೆ ಮಾಡಿದ್ದರೆ ಅದನ್ನು ಕೇಳುತ್ತೇವೆ. ಆದರೆ ಯಾವುದೇ ಬೇಜವಾಬ್ದಾರಿ ಹೇಳಿಕೆಯಾದರೆ ನಾವು ಕೇಳುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮುಖ್ಯಮಂತ್ರಿಗಳು ಸದನದಲ್ಲಿ ಮಾಡುವ ಹೇಳಿಕೆಯನ್ನು ಬೇಜವಾಬ್ದಾರಿ ಹೇಳಿಕೆ ಎಂದು ಹಗುರವಾಗಿ ಅಂದುಬಿಟ್ಟರೆ ಅದು ಸರಿಯಾದುದಲ್ಲ.

ಶ್ರೀ ಡಿ.ವಿ. ಸದಾನಂದಗೌಡ :— ಹಾಗೆ ಹೇಳಿಲ್ಲ. ನಾನು ಹೇಳಿದ್ದು ಸದನಕ್ಕೆ ಹೇಳುವುದಲ್ಲ. ಹೊರಗಡೆ ಹೇಳಿದ್ದನ್ನು.

ಶ್ರೀ ಎಸ್.ಎಸ್. ಪಾಟೀಲ್ :— ಇಬ್ಬರು ಮುಖ್ಯಮಂತ್ರಿಗಳು ಅಂದರಲ್ಲ. ಈಗ ಇಬ್ಬರು ಇದ್ದಾರಾ?

ಶ್ರೀ ಡಿ.ಬಿ. ಚಂದ್ರೇಗೌಡ :— ಹೌದು. ತಮಿಳುನಾಡು ಮುಖ್ಯಮಂತ್ರಿ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು. ಈ ಇಬ್ಬರೂ ಮುಖ್ಯಮಂತ್ರಿಗಳು ಸ್ಪೆಷಲ್ ಟಾಸ್ಕ್ ಫೋರ್ಸ್‌ನ್ನು ಮಾಡಿ ಈಗಾಗಲೇ ತಮಗೆ ಅದರ ಬಗ್ಗೆ ಗೊತ್ತಿದೆ. ಕರ್ನಾಟಕದಲ್ಲಿ ಸಾಂಗ್ಲಿಯಾನ ಅವರ ನೇತೃತ್ವದಲ್ಲಿ ಒಂದು ಸ್ಪೆಷಲ್ ಟಾಸ್ಕ್ ಫೋರ್ಸನ್ನು ಮಾಡಿ ಆಪರೇಷನನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಇವರಿಬ್ಬರೂ ಮುಖ್ಯಮಂತ್ರಿಗಳಿಗೆ ಬೆಂಬಲವಾಗಿ ಕೇಂದ್ರ ಸರ್ಕಾರದವರು ಅದಕ್ಕೆ ಆಶೀರ್ವಾದ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆ ಹೇಳಿಕೆ ಬಿಟ್ಟು ಯಾರೋ ಜವಾಬ್ದಾರಿ ಇಲ್ಲದೇ ಇರತಕ್ಕಂಥವರು ಹೊರಗಡೆ ಯಾರೋ ಹೇಳಿಕೆ ಮಾಡಿರುವುದನ್ನು ನೀವು ಇದನ್ನು ಮಾಡುತ್ತೀರೋ

ಅಂದರೆ ಆ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗುತ್ತದೆ. ಏಕೆಂದರೆ ಸಂಬಂಧಪಟ್ಟವರು ಇಲ್ಲಿ ಸದನದಲ್ಲಿ ಇಲ್ಲ. ಮುಖ್ಯಮಂತ್ರಿಗಳ ವಿಚಾರವನ್ನು ಮಾತನಾಡಬಹುದು. ಅವರು ಸದಸ್ಯರೂ ಅಲ್ಲ, ಸಂಬಂಧಪಟ್ಟವರೂ ಅಲ್ಲ. ಸಂಬಂಧವಿಲ್ಲದೇ ಇರುವ ವಿಚಾರ ಏಕೆ? ವ್ಯರ್ಥಕಾಲಹರವಾಗುತ್ತದೆ, ಅಷ್ಟೆ.

ಶ್ರೀ ಎ. ರಾಮದಾಸ್ :— ಸಂಬಂಧಪಟ್ಟ ವಿಚಾರವನ್ನು ತಾವು ಹೇಳಿದಿರಿ. ಸಂಬಂಧಪಡದೆ ಇರುವ ವಿಚಾರ ಎಂದು ತಮಗೆ ಅನಿಸಿತಲ್ಲಾ, ತಮ್ಮ ಇಲಾಖೆಯೊಳಗೆ ವಿಶೇಷವಾಗಿ ಪೋಲೀಸ್ ಇಲಾಖೆಯೊಳಗಡೆ ರಿಟೈರ್ಡ್ ಆದವರದೇ ಒಂದು ಗುಂಪು, ಹಾಲಿ ಇರುವಂಥವರ ಒಂದು ಗುಂಪು, ಅಲ್ಲಿ ಯಾವ ರೀತಿಯಾದಂಥ ಕೆಲಸಗಳು ನಡೆಯುತ್ತಿದೆ ಎನ್ನುವಂಥ ನೋವು ನನ್ನ ಮನಸ್ಸನ್ನು ಕಾಡುತ್ತಿದೆ. ನಿಮ್ಮಲ್ಲಿ ಪೋಲೀಸ್ ಇಲಾಖೆಯಲ್ಲಿ ಯಾವ ವ್ಯವಸ್ಥೆಗಳಾಗಿವೆ? ಏನೂ ಆಗಿಲ್ಲವೇ? ಆಗಿರುವಂಥಾದ್ದನ್ನೇ ನಾನು ಹೇಳುತ್ತಿರುವುದು. ನಿಮ್ಮ ಇಲಾಖೆಯೊಳಗಡೆ ಇರುವಂಥ ಕಂಟ್ರೋಲ್ ಇವತ್ತು ಕಳೆದುಹೋಗಿದೆ. ಹೇಳಿಕೆ ನಿಮಗೆ ಬೇಸರವಾಗಿರಬಹುದು.

SRI D.B. CHANDREGOWDA :— There are two questions. One is right to go to the court is not confined to an individual alone. Even an Officer can go to the court of law and seek redressal. ಹಾಗೆ ಹೋದರು ಎಂದಕೂಡಲೇ ನೀವು ಯಾರೋ ಇಬ್ಬರು ಆಫೀಸರ್ಸ್ ಹೋದರು, ನಿಮಗೆ ಅವರ ಮೇಲೆ ಹತೋಟಿ ಇಲ್ಲವೇ? ಎಂದರೆ That is his fundamental right.

ಶ್ರೀ ಎ. ರಾಮದಾಸ್ :— ನಾನು ಯಾರ ಬಗ್ಗೆ ಹೇಳುತ್ತಿದ್ದೀನಿ?

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಈಗತಾನೆ ಇದರ ಹಿಂದೆ ಮಾತನಾಡುತ್ತಾ ಹೇಳಿದಿರಿ.

ಶ್ರೀ ಎ. ರಾಮದಾಸ್ :— ನೀವು ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಸದಾಶಿವ ಕಮೀಷನ್ ಮುಂದೆ ಇಬ್ಬರು ಪೋಲೀಸ್ ಆಫೀಸರ್ಸ್ ಹೋಗಿದ್ದಾರೆ.

ಶ್ರೀ ಎ. ರಾಮದಾಸ್ :— ನೋ.ನೋ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಪೋಲೀಸ್ ಇಲಾಖೆಯ ಒಳಗಡೆ ಇರುವಂಥ ವ್ಯವಸ್ಥೆಗಳು; ಬಗ್ಗೆ ಹೇಳುತ್ತಿದ್ದೇನೆ ಅಲ್ಲಿ ಇದ್ದಂಥ ಒಬ್ಬರು ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೆ? ಈಗ ಹಾಲಿ ಇರುವಂಥ ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೆ? ಇರುವಂಥ ವ್ಯವಸ್ಥೆಗಳೇನು?

ಅಲ್ಲಿಂದಲೂ ಕೂಡ ನಾನು ಹೇಳಿಕೊಂಡು ಬಂದಿರುವಂಥಾದ್ದು. ತಾವು ಆಗ ಇರಲಿಲ್ಲ. ತಾವು ಇದ್ದಿದ್ದರೆ ತುಂಬಾ ಚೆನ್ನಾಗಿತ್ತು ಎನ್ನುವ ವಿಚಾರವನ್ನು ಹೇಳಿದ್ದೀನಿ. ಇವತ್ತು ಪೋಲೀಸ್ ಇಲಾಖೆ ಬಗ್ಗೆ ಇನ್ನೊಂದು ಬಾರಿ ಹೇಳುತ್ತೇನೆ. ಇವತ್ತು ಇಲಾಖೆಯಲ್ಲಿ ಪೊಲಿಟಿಕಲ್ ಸ್ಪ್ಲಿಟ್ ಆಗಿದೆ. ಆಡಳಿತದಲ್ಲಿ ಸಮನ್ವಯ ಇಲ್ಲ, ಸಾಮರಸ್ಯವಿಲ್ಲ. ಈ ದೃಷ್ಟಿಯಲ್ಲೇ ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ನಾನು ಇಲ್ಲಿ ದಾಖಲೆಗಳ ಸಮೇತವಾಗಿ ಹೇಳುತ್ತಿದ್ದೇನೆ. ಒಂದು ವಿಚಾರ ಮಾತ್ರ ತುಂಬಾ ಸಂತೋಷವಾಗುತ್ತದೆ. ಒಂದು ಸಾಮರಸ್ಯವಿದೆ. ಏನೆಂದರೆ ಹಿಂದಿನ ಸರ್ಕಾರಕ್ಕೂ ಈ ಸರ್ಕಾರಕ್ಕೂ ಸಾಮರಸ್ಯವಿದೆ. ಕಾರ್ಯಾಚರಣೆಯನ್ನು ಯಾವಾಗ ಮಾಡುತ್ತೇವೆ? ಹೇಗೆ ಮಾಡುತ್ತೇವೆ? ಯಾವ ಸಮಯದಲ್ಲಿ ಮಾಡುತ್ತೇವೆ? ನಮ್ಮಲ್ಲಿ ಏನು ಆರ್ಮ್ಸ್ ಇದೆ? ಈ ಬಗ್ಗೆ ಎಲ್ಲಾ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟುಕೊಂಡು ಮಾಡುವಂಥ ಕೆಲಸಗಳ ಅವಶ್ಯಕತೆ ಇವತ್ತು ಇಲ್ಲ. ಇವತ್ತು ಯಾರೂ ಕೂಡ ಹಿಂದೆ ಮಾಡಿದಂಥ ತಪ್ಪನ್ನು ದಯವಿಟ್ಟು ಮಾಡಬೇಡಿ. ನಾವು ನಿಮ್ಮನ್ನು ಈ ಕ್ಷಣ ಬಿಟ್ಟ ಮೇಲೆ ನೀವೇನು ಮಾಡಿದಿರಿ ಎಂದು ನಾವು ಕೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ವೀರಪ್ಪನನ್ನು ಜೀವಂತವಾಗಿ ಹಿಡಿದುಕೊಂಡು ಬಂದರೆ ರಾಜ್ಯಕ್ಕೆ ಬಹಳ ಒಳ್ಳೆಯದು. ಏಕೆಂದರೆ ಬಹಳ ಜನ ರಾಜಕಾರಣಿಗಳಿರಬಹುದು. ಅಲ್ಲಿರುವಂಥ ದೊಡ್ಡ ದೊಡ್ಡ ಉದ್ಯಮಿಗಳಿರಬಹುದು. ಎಲ್ಲಾ ವಿಚಾರಗಳು ಹೊರಗಡೆ ಬರುತ್ತೆ. ಆತನನ್ನು ಹಿಡಿದುಕೊಂಡು ಬರುವಂಥ ಕೆಲಸವನ್ನು ರಾಜ್ಯಸರ್ಕಾರ ಮಾಡಿದಾಗ ನಾವು ಇದೆ ಜಾಗದಲ್ಲಿದ್ದು ಶಹಭಾಷ್‌ಗಿರಿಯನ್ನು ಕೊಡುತ್ತೇವೆ. ಆದರೆ ಅನವಶ್ಯಕವಾದ ಸ್ಟೇಟ್‌ಮೆಂಟ್‌ಗಳನ್ನು ಮಂತ್ರಿಗಳಿರಬಹುದು, ಅಧಿಕಾರಿಗಳಿರಬಹುದು, ಆ ರೀತಿ ಕೊಡುವಂಥ ಕೆಲಸಗಳನ್ನು ದಯವಿಟ್ಟು ಸ್ಟಾಪ್ ಮಾಡಿ. ಕಾರ್ಯಾಚರಣೆಯನ್ನು ಮಾಡುವಂಥ ದೃಷ್ಟಿಯಲ್ಲಿ ತಾವು ಕೆಲಸವನ್ನು ಮಾಡಬೇಕು ಎನ್ನುವ ಪ್ರಮುಖವಾದ ವಿಚಾರವನ್ನು ತಮ್ಮ ಮುಂದೆ ಹೇಳುತ್ತೇನೆ. ಮಾನ್ಯ ಕಾನೂನು ಸಚಿವರು ಗಮನಹರಿಸಬೇಕು. ಮಲೆಮಹದೇಶ್ವರ ಬೆಟ್ಟದ ಸುತ್ತಮುತ್ತ ಇರುವ ಹಳ್ಳಿಗಳಾದ ಸಂದನ್‌ಪಾಳ್ಯ, ಜಲ್ಲಿಪಾಳ್ಯ, ಒಡ್ಡರದೊಡ್ಡಿ, ಅಜ್ಜನಪುರ, ಪಳನಿಮೇಡು ಹಾಗೂ ನಲ್ಲೂರಿನ ಸುಮಾರು 16 ರಿಂದ 18 ವರ್ಷ ವಯಸ್ಸಿನ ಸುಮಾರು 100 ಹುಡುಗರು ಕಳೆದ ಎರಡು ತಿಂಗಳುಗಳಿಂದ ಕಾಣೆಯಾಗಿದ್ದಾರೆ. ವೀರಪ್ಪನ್ ಸಹಚರರು ಅವರ ಕುಟುಂಬದವರಿಗೆ ತಲಾ 25 ರಿಂದ 30ಸಾವಿರ ರೂಪಾಯಿಗಳಷ್ಟು ಹಣ ನೀಡಿದ್ದಾರೆ ಎಂಬ ಸುದ್ದಿಯೂ ಇದೆ. ಆ ಹುಡುಗರೆಲ್ಲರಿಗೂ ಎಲ್.ಟಿ.ಟಿ.ಇ. ಉಗ್ರಗಾಮಿಗಳು ಕಾಡಿನಲ್ಲಿ ಶಸ್ತ್ರಾಸ್ತ್ರ ತರಬೇತಿ ನೀಡಲಾಗುತ್ತಿದೆ ಎಂಬ ಶಂಕೆ ಮೂಡಿದೆ. ಆ ಪ್ರದೇಶದಲ್ಲಿ ಎಲ್.ಟಿ.ಟಿ.ಇ. ಶಾಖೆಯೊಂದು ಸ್ಥಾಪನೆಯಾಗಿದೆಯೆಂದೂ ಕೂಡ ಹೇಳಲಾಗುತ್ತಿದೆ. ಇದರಿಂದಾಗಿ ಹಳ್ಳಿಯ ಜನರು ಭಯಭೀತರಾಗಿದ್ದಾರೆ. ಇದು ಸಣ್ಣ ವಿಚಾರವಲ್ಲ. ಇದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಬಗ್ಗೆ ಹೇಳಬೇಕು. ಇಷ್ಟೇ ಅಲ್ಲದೇ ಗುಂಡ್ಲುಪೇಟೆ, ಟಿ. ನರಸೀಪುರ

ಹಾಗೂ ಕೊಳ್ಳೆಗಾಲದಲ್ಲಿ ಐಎಸ್‌ಐ ಹಾಗೂ ಎಲ್.ಟಿ.ಟಿ.ಇ. ಚಟುವಟಿಕೆ ಹೆಚ್ಚುತ್ತಿದೆ. ಆದುದರಿಂದ ಈ ಬಗ್ಗೆ ಸರ್ಕಾರ ತಕ್ಷಣವೇ ಎಚ್ಚರ ವಹಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ನಾನು ರಾಜ್ಯ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ವಿವರಣೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಈಗ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಆದರೆ ಅವರು ಉತ್ತರ ಕೊಡುವಾಗ ಐ.ಎಸ್‌ಐ. ಚಟುವಟಿಕೆಗಳ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಏನಾದರೂ ಮಾಹಿತಿ ಪತ್ರಗಳು ಬಂದಿವೆಯೇ ಎಂಬ ಬಗ್ಗೆ ಸರ್ಕಾರದವರು ಹೇಳಬೇಕು. ಏಕೆಂದರೆ ಈ ಸದನದಲ್ಲಿ ಗೌರವಾನ್ವಿತ ಸದಸ್ಯರಾದ ರಾಮದಾಸ್‌ರವರು ಐಎಸ್‌ಐ ಚಟುವಟಿಕೆಗಳು ರಾಜ್ಯದ ಕೆಲವು ಸ್ಥಳಗಳಲ್ಲಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಇಂಥ ಚಟುವಟಿಕೆಗಳೇನಾದರೂ ನಡೆಯುತ್ತಿದ್ದರೆ ಕೇಂದ್ರ ಸರ್ಕಾರದವರು ರಾಜ್ಯಕ್ಕೆ ತಿಳಿಸಲೇಬೇಕಾಗುತ್ತದೆ. ಆದಕಾರಣ ಕೇಂದ್ರದ ಗೃಹ ಮಂತ್ರಿಗಳು ಐಎಸ್‌ಐ. ಚಟುವಟಿಕೆಗಳ ಬಗ್ಗೆ ರಾಜ್ಯಕ್ಕೆ ಏನಾದರೂ ಮಾಹಿತಿ ಪತ್ರವನ್ನು ಕಳುಹಿಸಿದ್ದಾರೆಯೇ ಎಂಬ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುವಂತೆ ಮಾನ್ಯ ಸಚಿವರು ಅವರ ಗಮನಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ರಾಜ್ಯದ ಕಾನೂನು ಸುವ್ಯವಸ್ಥೆಯ ಮೇಲೆ ಇದು ಪರಿಣಾಮ ಬೀರುವುದರಿಂದ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಉತ್ತರ ಕೊಡುವಾಗ ಇದರ ಬಗ್ಗೆ ಸರ್ಕಾರ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎ. ರಾಮದಾಸ್ :— ಮಾನ್ಯ ಉಪಾಧ್ಯಕ್ಷರೆ, ರಾಜ್‌ಕುಮಾರ್ ಅಪಹರಣವಾದ ಮೇಲೆ ನಾನು ಈಗಾಗಲೇ ಹೇಳಿದ ಪ್ರದೇಶದಲ್ಲಿ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಲೂಚಿಸ್ತಾನಗಳಂಥ ರಾಷ್ಟ್ರಗಳ ಸಂಪರ್ಕ ಹೊಂದಿರುವ ವ್ಯಕ್ತಿಗಳ ಬಂಧನ ಜುಲೈ 20ರಂದು ಆಗಿದೆ. ಆಗ ಭೂಗತ ಜಗತ್ತಿನ ಮೂವರು ವ್ಯಕ್ತಿಗಳು ಕೂಡ ತಪ್ಪಿಸಿಕೊಂಡಿದ್ದಾರೆಂದು ಪೋಲೀಸ್‌ನವರೂ ಕೂಡ ಹೇಳಿದ್ದಾರೆ. ಈ ಮೂವರು ವ್ಯಕ್ತಿಗಳಿಗೆ ಆಶ್ರಯ ಕೊಟ್ಟಂಥ ವ್ಯಕ್ತಿ ಅಬ್ದುಲ್ ರಶೀದ್ ಎನ್ನುವವನು ಇವೊತ್ತಿನವರೆಗೂ ಸಿಕ್ಕಿಲ್ಲ. ಇದಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನೂ ಇಂದ ಟೆಲಿಫೋನ್ ಡಿಪಾರ್ಟ್‌ಮೆಂಟ್‌ನವರಿಂದ ಹಿಡಿದು ಎಲ್ಲರೂ ಸೀಜ್ ಮಾಡಿದ್ದಾರೆ. ಇದಲ್ಲದೇ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಇಂಥದ್ದೇ ಎಲ್.ಟಿ.ಟಿ.ಇಯವರ ಜೊತೆಯಲ್ಲಿ ಐಎಸ್‌ಐ ಸಂಪರ್ಕವನ್ನು ಹೊಂದಿರುವಂಥ ಎಲ್ಲ ವಿಚಾರಗಳು ಕೂಡ ಇದೆ. ಆದುದರಿಂದ ಇದು ಕೇವಲ ದೂರವಾಣಿ ಇಲಾಖೆಗೆ ಸಂಬಂಧಪಟ್ಟ ವಿಚಾರವೆಂದು ರಾಜ್ಯ ಸರ್ಕಾರ ಸುಮ್ಮನೇ ಕೂರಬಾರದು. ಕೇರಳ ಮತ್ತು ತಮಿಳುನಾಡು ಬಾರ್ಡರ್ ಪ್ರದೇಶಗಳೇನಿವೆ ಇಲ್ಲಿ ಐಎಸ್‌ಐ ಮತ್ತು ಎಲ್‌ಟಿಟಿಇ ಜೊತೆಗೂಡಿ ರಾಷ್ಟ್ರದ್ರೋಹಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕು. ವೀರಪ್ಪನ್ ಹಿಡಿಯುವ

ವಿಚಾರದಲ್ಲಿ ಸರ್ಕಾರ ಬಹಳ ನಿಧಾನವಾಗಿ ಕಾರ್ಯಾಚರಣೆಯನ್ನು ಮಾಡಿದೆ. ನಮಗೆ ಬಂದ ಮಾಹಿತಿಯಂತೆ ಹೇಳುವುದಾದರೆ, ನಾನು ಹೊಡೆದ ಹಾಗೆ ಮಾಡುತ್ತೇನೆ, ಆಗ ನೀನು ಅತ್ತ ಹಾಗೆ ಮಾಡು ಎನ್ನುವ ರೀತಿಯಲ್ಲಿ ವ್ಯವಸ್ಥೆಗಳಾಗಿದೆ ಎನ್ನುವ ಹಾಗೆ ಕಾಣುತ್ತಿದೆ. ಐದು ದಿವಸಗಳ ಕಾಲ ಬಿಟ್ಟು ವೀರಪ್ಪನ್ ಅಲ್ಲಿಂದ ಪರಾರಿಯಾಗುವ ಹಾಗೆ ಮಾಡಿಕೊಂಡುಬಿಟ್ಟಿದ್ದಾರೆ. ಒಂದು ವೇಳೆ ವೀರಪ್ಪನ್ ಜೀವಂತವಾಗಿ ಸಿಕ್ಕಿದರೆ ಅಲ್ಲಿಯ ಸುತ್ತಮುತ್ತಲಿನ ರಾಜಕಾರಣಿಗಳೇನಿದ್ದಾರೆ ಮತ್ತು ಯಾವ ಯಾವ ಗಂಧದ ಕಾರ್ಖಾನೆಗಳಿಗೆ ಗಂಧದ ಮರಗಳನ್ನು ಸಾಗಿಸುತ್ತಿದ್ದನೋ ಅಂಥ ದೊಡ್ಡ ದೊಡ್ಡ ಕೋಟ್ಯಾಧೀಶ್ವರರುಗಳ ವಿಚಾರಗಳು ಎಲ್ಲಿ ಹೊರಗೆ ಬಂದುಬಿಡುತ್ತದೋ ಎಂದು ಹೇಳುವ ವಿಷಯದಿಂದಲೇ ವೀರಪ್ಪನ್ ಹಿಡಿಯುವಲ್ಲಿ ಕಾರ್ಯಾಚರಣೆ ನಿಧಾನವಾಗುತ್ತಿದೆಯೇನೋ ಎನ್ನುವಂಥ ಭಾವನೆ ಎಲ್ಲರಲ್ಲೂ ಮೂಡುತ್ತಿದೆ. ಎರಡು ಗಂಧದ ಮರಗಳ ದೊಡ್ಡ ಕಾರ್ಖಾನೆಗಳ ವ್ಯಕ್ತಿಗಳು ಇದರ ಹಿಂದೆ ಇದ್ದಾರೆ ಎನ್ನುವಂಥ ಮಾತುಗಳು ಕೇಳಿಬರುತ್ತಿವೆ. ಆದುದರಿಂದ ಆ ಒಂದು ಏರಿಯಾವನ್ನು ತಾವು ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾಗಿ ಕೊಟ್ಟು ಅಲ್ಲಿರುವಂಥ ಪೋಲೀಸ್ ತಂಡಗಳ ಜೊತೆ ಕಾರ್ಯಾಚರಣೆಯನ್ನು ಮಾಡಿದರೆ ಇಂದು ಕೂಡ ವೀರಪ್ಪನ್ ಹಿಡಿಯುವಲ್ಲಿ ಯಶಸ್ವಿಯಾಗಬಹುದು ಎನ್ನುವ ವಿಶ್ವಾಸ ನಮಗಿದೆ. ಇಂದು ರಾಜ್ಯದ ಜನರು ಎಲ್ಲರೂ ಈ ವಿಚಾರದಲ್ಲಿ ಗಮನಹರಿಸುತ್ತಿದ್ದಾರೆ. ಇಂದಿರಬಹುದು ಅಥವಾ ಹತ್ತು ವರ್ಷಗಳ ಹಿಂದೆ ಯಾರು ವೀರಪ್ಪನಿಗೋಸ್ಕರವಾಗಿ ಅವನ ಆಶ್ರಯದಲ್ಲಿದ್ದರೋ, ಯಾರು ಸಹಕಾರವನ್ನು ಕೊಡುತ್ತಿದ್ದರೋ ಇಂಥವರುಗಳೆಲ್ಲವನ್ನೂ ತಿಳಿದುಕೊಳ್ಳುವ ಸಲುವಾಗಿ ಸುಪ್ರೀಂಕೋರ್ಟಿನ ಒಬ್ಬ ಜಡ್ಜ್‌ರವರಿಂದ ನ್ಯಾಯಾಂಗ ತನಿಖೆ ಮಾಡಿಸಲು ಸರ್ಕಾರ ಆದೇಶವನ್ನು ಹೊರಡಿಸಬೇಕೆಂದು ಹೇಳುತ್ತೇನೆ. ಈ ಆದೇಶ ಹೊರಡಿಸುವ ಮೂಲಕ ಸರ್ಕಾರ ಪಾರದರ್ಶಕತೆಯನ್ನು ತೋರಿಸಿ ಇಂದು ರಾತ್ರಿಯಿಂದಲೇ ವೀರಪ್ಪನ್ ಹಿಡಿಯಲು ತೀವ್ರ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈಗ ಸರ್ಕಾರ ಕೊಟ್ಟಿರುವ ಉತ್ತರವನ್ನು ನಾನು ಈಗಾಗಲೇ ನೋಡಿದ್ದೇನೆ. ವೀರಪ್ಪನ್ ಹಿಡಿಯಲು ಮಾಡಿರುವ ಪೋಲೀಸ್ ಕಾರ್ಯಾಚರಣೆ ಬಗ್ಗೆ ವಿವರವನ್ನು ಕೊಡಿ ಎನ್ನುವ ಪ್ರಶ್ನೆಗೆ ಉತ್ತರದಲ್ಲಿ ವೀರಪ್ಪನ್ ಗುಂಪು 1984ರಿಂದ ಕರ್ನಾಟಕ ಹಾಗೂ ತಮಿಳುನಾಡು ಅರಣ್ಯಗಳ ಅಂಚಿನಲ್ಲಿ ತನ್ನ ದುಷ್ಕೃತ್ಯಗಳನ್ನು ನಡೆಸುತ್ತಾ ಬಂದಿದೆ. ಈ ತಂಡ ಕರ್ನಾಟಕ ಹಾಗೂ ತಮಿಳುನಾಡು ಅರಣ್ಯಾಧಿಕಾರಿಗಳನ್ನೊಳಗೊಂಡಂತೆ ಇದುವರೆಗೆ 121 ಜನರನ್ನು ಕೊಂದಿದೆ, ಈ ಸಂಬಂಧ ತಮಿಳುನಾಡಿನಲ್ಲಿ 71 ಹಾಗೂ ಕರ್ನಾಟಕದಲ್ಲಿ 61 ಪ್ರಕರಣಗಳು ಗುಂಪಿನ ವಿರುದ್ಧ ದಾಖಲಾಗಿದೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ 60 ಪ್ರಕರಣಗಳಲ್ಲಿ 5

ಪ್ರಕರಣಗಳು ಟಾಡಾ ಕಾಯ್ದೆಯಡಿ ದಾಖಲಾಗಿದೆಯೆಂದು ಇದರಲ್ಲಿ 127 ಜನನ್ನು ದಸ್ತಗಿರಿ ಮಾಡಲಾಗಿದೆಯೆಂದು ಹೇಳುತ್ತಾ ಅಂತಿಮದಲ್ಲಿ ಈ ತಂಡದ ವಿರುದ್ಧ ತೀವ್ರತರವಾದ ಕಾರ್ಯಾಚರಣೆಯನ್ನು ನಡೆಸಿ ಆರಂಭದಲ್ಲಿ 150 ಸದಸ್ಯರಿದ್ದ ವೀರಪ್ಪನ್ ಗುಂಪನ್ನು ಕೇವಲ ಇಬ್ಬರು ಸದಸ್ಯರಿಗೆ ಮಾತ್ರ ಇಳಿಸಲಾಗಿದೆ ಎಂದು ಹೇಳಿದ್ದಾರೆ. ಹಾಲಿ ಗುಂಪಿನಲ್ಲಿ ವೀರಪ್ಪನ್ ಹಾಗೂ ಆತನ ಬಲಗೈ ಭಂಟ ಸೇತುಕುಳಿ ಗೋವಿಂದನ್ ಮಾತ್ರ ಇದ್ದು ಗುಂಪು ಸಂಪೂರ್ಣ ನಿಷ್ಕ್ರಿಯವಾಗಿದ್ದು ಕಾರ್ಯಾಚರಣೆ ಪಡೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ತಮಿಳುನಾಡಿನ ದಟ್ಟ ಅರಣ್ಯದಲ್ಲಿ ಅಡಗಿರುತ್ತಾರೆ ಎಂದು ದಿನಾಂಕ 18-4-2000ದಲ್ಲಿ ಗೃಹ ಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಸಪ್ಲಿಮೆಂಟರಿ ಪ್ರಶ್ನೆಯನ್ನು ನಾನು ಕೇಳಿದಾಗ ವೀರಪ್ಪನ್‌ಗೆ ಬೇಕಾದ ರೇಷನ್ ಕೂಡ ಮುಗಿದು ಹೋಗಿರುವುದರಿಂದ ಆತ ಜೀವಂತವಾಗಿ ಹೊರಗೆ ಬರಬೇಕು ಇಲ್ಲದಿದ್ದರೆ ಸಾಯಬೇಕು, ಇವೆರಡೇ ಈಗ ಉಳಿದಿರತಕ್ಕಂಥಾದ್ದು, ಆದುದರಿಂದ ನೀವೇನು ಯೋಚನೆ ಮಾಡುವ ಅಗತ್ಯವಿಲ್ಲವೆಂದು ನಮಗೆ ಗದರಿಸಿ ಹೇಳಿದರು. ಎರಡು ವರ್ಷಗಳಿಗೆ ಇಬ್ಬರಿಗೆ ಎಷ್ಟು ಹಣ ಖರ್ಚಾಗಿದೆ ಎಂಬುದಕ್ಕೆ ಲೆಕ್ಕ ಕೊಟ್ಟಿದ್ದಾರೆ. ಅದರ ಪ್ರಕಾರ 1998-99ರಲ್ಲಿ 1 ಕೋಟಿ 30ಲಕ್ಷ 67 ಸಾವಿರ 920 ರೂಪಾಯಿಗಳು, ಹಾಗೂ 1999-2000ರಲ್ಲಿ ಅಂದರೆ ದಿನಾಂಕ: 29-2-2000ಕ್ಕೆ 1 ಕೋಟಿ 40 ಲಕ್ಷ 21 ಸಾವಿರ 280 ರೂಪಾಯಿಗಳು. ಈ ಇಬ್ಬರನ್ನು ಹಿಡಿಯುವುದಕ್ಕೆ ಒಟ್ಟಾರೆಯಾಗಿ 2 ಕೋಟಿ 70 ಲಕ್ಷ 89 ಸಾವಿರದ 200 ರೂಪಾಯಿಗಳು ಖರ್ಚಾಗಿರುತ್ತದೆ. ಕೇವಲ ಎರಡು ವರ್ಷಗಳಲ್ಲಿ ಈ ಕಾರ್ಯಾಚರಣೆಗಾಗಿ ಇಷ್ಟು ಹಣ ಖರ್ಚಾಗಿದೆ; ನಾನು ಅದರ ಹಿಂದಿನ ವರ್ಷಗಳ ವಿವರಗಳಿಗೆ ಹೋಗುವುದಿಲ್ಲ. ಇಬ್ಬರಿಗೋಸ್ಕರ ಎರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಏಕೆ ಖರ್ಚು ಮಾಡಿದಿರಿ? ಇದುವರೆಗೆ ಆಗಿರುವ ಖರ್ಚ ಎಷ್ಟು? ಯಾವ್ಯಾವ ಕಾರಣಕ್ಕೆ ಖರ್ಚು ಮಾಡಲಾಗಿದೆ? ಇವೊತ್ತು ಮಾನ್ಯ ಗೃಹ ಸಚಿವರು ನೀಡಿರುವ ಹೇಳಿಕೆ ಬಗ್ಗೆ ಅವರನ್ನು ದೂರುವುದಿಲ್ಲ. ಆದರೆ, ಗೃಹ ಸಚಿವರಿಗೆ ಹೇಳಿಕೆ ನೀಡುವುದಕ್ಕೆ ಉತ್ತರ ತಯಾರಿಸಿಕೊಟ್ಟಿರುವ ನಮ್ಮ ಪೋಲೀಸ್ ಅಧಿಕಾರಿಗಳ ಬೌದ್ಧಿಕ ದಿವಾಳಿತನ, ನಿಷ್ಕ್ರಿಯತೆ ಮತ್ತು ಇವರು ಭಾರೀ ದೊಡ್ಡ ಜನರೆಂದು ನಂಬಿಕೊಂಡು ಇವರಿಗೆ ಸಂಬಳ, ಸಾರಿಗೆ ಮತ್ತಿತರ ಸೌಲಭ್ಯಗಳೆಲ್ಲವನ್ನೂ ಕೊಟ್ಟು ಸಾಕಿರತಕ್ಕಂಥ ಈ ನಾಡಿನ ಜನರ ಆಸ್ತಿ ಮತ್ತು ಮಾನ ರಕ್ಷಣೆಯನ್ನು ಯಾವ ರೀತಿ ಮಾಡುತ್ತಾರೆಂಬುದಕ್ಕೆ ಇದೊಂದು ದೊಡ್ಡ ನಿದರ್ಶನವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಇಂಟೆಲಿಜೆನ್ಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಸುಮಾರು ಹನ್ನೆರಡು ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಹಣ ಖರ್ಚಾಗಿದೆಯೆಂದು ಈಗಾಗಲೇ ಅವರು ಹೇಳಿಕೆ ನೀಡಿದರು. ಇಷ್ಟು ಮೊತ್ತದ ಹಣ ಏತಕ್ಕೋಸ್ಕರ ಖರ್ಚಾಯಿತು? ವಿಶೇಷ ಕಾರ್ಯಾಚರಣೆ ಪಡೆಯನ್ನು ಅಲ್ಲಿಯೇ ಇರಿಸಿರುವುದಕ್ಕೆ ಇಷ್ಟು ದಿವಸಗಳವರೆಗೆ ಎಷ್ಟು ಖರ್ಚಾಗಿದೆ? ಇದೆಲ್ಲದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ

ಪ್ರಸ್ತಾಪಿಸುತ್ತಾರೆಂದು ನಾನು ತಿಳಿದಿದ್ದೇನೆ. ರಾಜ್ಯದ ಜನ ಸಾಮಾನ್ಯರು ಸರ್ಕಾರಕ್ಕೆ ಕೊಟ್ಟಿರುವ ಇಷ್ಟೊಂದು ಹಣವನ್ನು ನಾವು ಅವರಿಗೆ ಕೊಟ್ಟು ಅವರನ್ನೆಲ್ಲಾ ತಯಾರಿಸಿ ಅವರು ನಮ್ಮನ್ನು ಬಚಾವ್ ಮಾಡುತ್ತಾರೆ, ಬದುಕಿಸುತ್ತಾರೆಂದರೆ ಇವೊತ್ತು ಡಾ: ರಾಜ್‌ಕುಮಾರ್ ಅವರನ್ನು ಹೊತ್ತುಕೊಂಡು ಹೋಗಿದ್ದರೆ ನಾಳೆ, ನಾಡಿದ್ದು ಮತ್ತೊಬ್ಬರನ್ನು ಹೊತ್ತುಕೊಂಡು ಹೋಗುತ್ತಾರೆ. ರಾಜ್‌ಕುಮಾರ್ ಅವರನ್ನು ವೀರಪ್ಪನ್ ಅಪಹರಣ ಮಾಡಿದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಎಷ್ಟು ವೆಚ್ಚವಾಯಿತು? ಇವೊತ್ತು ಪೋಲೀಸರು ನಿಷ್ಕ್ರಿಯರಾಗಿದ್ದಾರೆ. ಇವೊತ್ತು ನಿವೃತ್ತರಾಗಿ ಆರು ತಿಂಗಳು ಒಂದು ವರ್ಷ ಕಳೆದ ಮೇಲೆ ಡಿ.ಐ.ಜಿ, ಡಿ.ಜಿ.ಪಿ.ಯವರು ಈ ಕುರಿತ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾರೆ. ನನಗೆ ಆಶ್ಚರ್ಯವಾಗಿರುವುದೇ ಇದು. ಅವರು ಪತ್ರಿಕಾಗೋಷ್ಠಿ ನಡೆಸಿ ಕೆಲವು ವಿವರಗಳನ್ನು ಕೊಡುತ್ತಾರಲ್ಲದೆ ನೆಡುಮಾರನ್ ಬಗ್ಗೆಯೂ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಶ್ರೀ ಬಿ. ಸೋಮಶೇಖರ್ :— ತಾವು ನಿವೃತ್ತರಾದ ಡಿ.ಐ.ಜಿ., ಡಿ.ಜಿ.ಪಿ. ಬಗ್ಗೆ ಹೇಳುತ್ತಿದ್ದೀರಿ. ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವಂಥ ವಿಚಾರಗಳ ಬಗ್ಗೆ ಹಾಲಿ ಡಿ.ಜಿ.ಪಿ.ಯವರು ತಾವೇ ಸ್ವತಃ ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿರುವುದನ್ನು ಓದಿದ್ದೆವು. ಇತ್ತೀಚೆಗೆ ನಡೆದಂಥ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿದ್ದು ಹಾಲಿ ಡಿ.ಜಿ.ಪಿ. ಬಗ್ಗೆ ಸಭೆ ತನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಶ್ರೀ ಆರಗ ಜ್ಞಾನೇಂದ್ರ :— ಇಷ್ಟು ವರಿಷ್ಠಾಧಿಕಾರಿಗಳನ್ನು ನೇಮಿಸಿಕೊಂಡು, ಇವರುಗಳನ್ನು ನಂಬಿಕೊಂಡು ಇವರ ಅಧೀನದಲ್ಲಿರುವ ಪೋಲೀಸ್ ಸಿಬ್ಬಂದಿಯನ್ನು, ಪೋಲೀಸ್ ಅಧಿಕಾರಿಗಳನ್ನು ಮತ್ತು ಅರಣ್ಯ ಅಧಿಕಾರಿಗಳನ್ನು ಮಾಂಗೆ ಕುರಿಗಳನ್ನು ಬಲಿಕೊಡುವಂತೆ ನರಹಂತಕ ವೀರಪ್ಪನ್‌ಗೆ ಇವರುಗಳನ್ನೆಲ್ಲಾ ಬಲಿ ಕೊಟ್ಟಿವಲ್ಲ! ಸರ್ಕಾರಕ್ಕೆ ನನ್ನ ವಿನಂತಿ ಇಷ್ಟೆ ಮೊದಲು ಈ ಅಧಿಕಾರಿಗಳನ್ನು ಬಂಧಿಸಿ, ಅವರುಗಳಿಗೆ ಏನೇನು ಗೊತ್ತಿದೆಯೆಂದು ಬಾಯಿ ಬಿಡಿಸಿದರೆ ಆಗ ಎಲ್ಲವೂ ಹೊರಗೆ ಬರುತ್ತದೆ. ನಾನು ವಿಶೇಷವಾಗಿ ಈ ಕುರಿತು ಹೇಳುವುದೇನೆಂದರೆ, ತಮಿಳುನಾಡಿನಿಂದ ನಮ್ಮ ರಾಜ್ಯಕ್ಕೆ ಬಂದಿರುವ ಅಧಿಕಾರಿಗಳಲ್ಲಿ ಈ ರೀತಿಯ ಗೊಂದಲವಿದೆ. ಇವರನ್ನು ನಮ್ಮ ರಾಜ್ಯದ ಪೋಲೀಸ್ ವರಿಷ್ಠಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಇವರ ಮಕ್ಕಳು ಅವರೊಂದಿಗೆ ಸಂಬಂಧ ಹೊಂದಿದ್ದಾರೆ. ಅಂದರೆ, ಇದರ ಅರ್ಥವೇನು? ಯಾರ ಕೈಯಲ್ಲಿ ನಾವು ನಮ್ಮ ಭದ್ರತೆ ಕೊಟ್ಟಿದ್ದೇವೆ? ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ನಮ್ಮ ಇಂಟೆಲಿಜೆನ್ಸ್ ಬಗ್ಗೆ ಮತ್ತು ನಮ್ಮ ರಾಜ್ಯದ ಪೋಲೀಸ್ ವರಿಷ್ಠಾಧಿಕಾರಿಗಳ ಬಗ್ಗೆ ತೀವ್ರ ನಿಗಾ ಇಡುವುದೊಳ್ಳೆಯದು. ಈ ಪೋಲೀಸ್ ಅಧಿಕಾರಿಗಳು ಎಲ್ಲರ ಚಲನವಲನ ವೀಕ್ಷಿಸುತ್ತಾರೆ. ಇವರ ಚಲನವಲನಗಳ ಮೇಲೆ ನಿಗಾ ಇಡುವವರು ಯಾರಿದ್ದಾರೆ? ಇವರ ಚಲನವಲನ, ಕುಟುಂಬದ ಪರಿಸ್ಥಿತಿಗಳು, ಹಿನ್ನೆಲೆ ಮುಂತಾದ ವಿವರಗಳನ್ನೆಲ್ಲಾ ತರಿಸಿಕೊಳ್ಳಬೇಕಾಗುತ್ತದೆ. ಇದನ್ನು ಹುಡುಗಾಟಿಕೆ ಮಾಡಿಕೊಂಡು ಇಡೀ ರಾಜ್ಯದ ಭದ್ರತೆಯನ್ನು ನಾವು ಇವರ ಕೈಗೆ ಒಪ್ಪಿಸಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸುಮಾರು 108 ದಿವಸಗಳ ಕಾಲ ಎರಡೂ ರಾಜ್ಯಗಳ ಜನರು ಕಾಡುಗಳ್ಳನ

ಮುಂದೆ ಮೊಣಕಾಲೂರಿ ನಮಸ್ಕಾರ ಮಾಡುವಂತಾಯಿತಲ್ಲ, ಇಂತಹ ಪರಿಸ್ಥಿತಿಗೆ ತಂದವರು ಯಾರು? ಕಳೆದ 10-12 ವರ್ಷಗಳಿಂದ ಎರಡೂ ರಾಜ್ಯಸರ್ಕಾರಗಳು ಆಡಳಿತ ನಡೆಸುತ್ತಿದ್ದಂಥ ಕಾಲದಲ್ಲಿ ಈ ಅಧಿಕಾರಿಗಳು ಹೇಗೆ ನಡೆದುಕೊಂಡಿದ್ದಾರೆಂಬುದನ್ನು ಈ ರಾಜ್ಯದ ಜನರಿಗೆ ಹೇಳಬೇಕಾಗುತ್ತದೆ, ಇವರನ್ನು ಮೊದಲು ಬಂಧಿಸಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಎರಡೂ ಸರ್ಕಾರಗಳೆಂದು ಹೇಳುತ್ತಿದ್ದೀರಲ್ಲ, ಆ ಕುರಿತು ವಿವರಿಸಿ.

ಶ್ರೀ ಅರಗ ಜ್ಞಾನೇಂದ್ರ :— ಅದನ್ನು ಹೇಳಿದ್ದು ನಾನಲ್ಲ. ವೀರಪ್ಪನ್ ಉಪದ್ರವ ಆರಂಭವಾದ ನಂತರ ಎರಡೂ ರಾಜ್ಯಗಳಲ್ಲಿ ಆಳಿರುವ ಸರ್ಕಾರಗಳ ಬಗ್ಗೆ ತನ್ನ ಇತ್ತೀಚಿನ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆಯಲ್ಲ. ಈ ರೀತಿಯಲ್ಲಿ ಹೇಳುವಂತಾದ್ದು ಇಡೀ ರಾಜ್ಯಕ್ಕೆ ಶೋಭೆ ತರುವಂತಾದ್ದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯದತ್ತ ತಾವು ಗಮನಹರಿಸಬೇಕು. ಈಗ ನಾವು ಈ ಸದನದಲ್ಲಿ ಬಹಳ ಮಹತ್ವದ ವಿಚಾರದ ಬಗ್ಗೆ ಚರ್ಚಿಸುತ್ತಿದ್ದು, ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಏನು ಹೇಳಿದರೆಂಬುದನ್ನು ತಾವು ಗಮನಿಸಿದ್ದೀರೆಂದು ಭಾವಿಸಿದ್ದೇನೆ. ಈ ರಾಷ್ಟ್ರದಲ್ಲಿ , ಈ ರಾಜ್ಯದಲ್ಲಿ ಪ್ರಾಮಾಣಿಕತೆ, ನಿಷ್ಠೆಗೆ ಹೆಸರಾಗಿ ಈ ರಾಜ್ಯದ ಭದ್ರತೆಗೆ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ದುಡಿದಿರುವ ಅನೇಕ ಅಧಿಕಾರಿಗಳಿದ್ದಾರೆ. ಮಾನ್ಯ ಗೌರವಾನ್ವಿತ ಸದಸ್ಯರು ಯಾವ ಅಧಿಕಾರಿ ಬಗ್ಗೆ ರೆಫರ್ ಮಾಡುತ್ತಾ ಮಾತನಾಡುತ್ತಿದ್ದಾರೋ ಅವರ ಬಗ್ಗೆ ನನಗೆ ಗೊತ್ತಿದೆ. ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಈ ರಾಜ್ಯದ ಸಂರಕ್ಷಣೆಗೋಸ್ಕರ ದುಡಿದಿರುವವರನ್ನು ರಾಜ್ಯದ್ರೋಹಿ, ರಾಷ್ಟ್ರದ್ರೋಹಿ ಎಂದು ಹೇಳಿ ಅವರನ್ನು ಬಂಧಿಸಬೇಕೆಂದರು. ಮುಖ್ಯಮಂತ್ರಿಗಳಾದ ತಾವು ಈ ಸದನದ ಸಭಾನಾಯಕರಾಗಿದ್ದು ತಮಗೆ ಒಂದು ದೊಡ್ಡ ಜವಾಬ್ದಾರಿಯಿದ್ದು ಮಾನ್ಯ ಸದಸ್ಯರು ಮಾತನಾಡಿ ಈ ರೀತಿ ಹೇಳಿರುವಂಥ ಸಂದರ್ಭದಲ್ಲಿ ತಾವು ಇದರ ಬಗ್ಗೆ ಏನಾದರೂ ವಿವರಣೆ ಕೊಡಬೇಕು. ಅವರ ಸೇವೆಯನ್ನು ತಾವು ಉಪಯೋಗಿಸಿಕೊಳ್ಳದಿದ್ದರೆ ಅವರು ಬೀದಿಯಲ್ಲಿ ಹೋಗುವ ಜನರ ಮುಂದೆ ಸಹ ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. After all they are retired. They are living a very honourable and respectful life. ನಮ್ಮ ಕಾನೂನನ್ನು ರಕ್ಷಿಸಿಕೊಳ್ಳಬೇಕೆಂದು, ಸದನದಲ್ಲಿ ನಮಗೆ ಮಾತನಾಡಲು ಅವಕಾಶ ಸಿಗುತ್ತದೆಂದು ಹೇಳುವಂಥ ಸಂದರ್ಭದಲ್ಲಿ ಇದನ್ನು ಎಲ್ಲಾ ಸರ್ಕಾರಗಳೂ ಮಾಡಿರುವಂತಾದ್ದೇ, ಹೌದು. ಎಲ್ಲಾ ಸರ್ಕಾರಗಳ ಸಂದರ್ಭದಲ್ಲೂ ಈ ರೀತಿ ಆಗಲಿಲ್ಲ. ಕಳೆದ ವರ್ಷ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಉಗ್ರಗಾಮಿಗಳು ಅಪಹರಿಸಿ ಅದನ್ನು ಆಫ್ಘಾನಿಸ್ತಾನದ ಕಂದಹಾರ್‌ನಲ್ಲಿ ಇಳಿಸಿದ್ದರಲ್ಲ, ಆಗ ನಮ್ಮ ಪಕ್ಷದ ಅಧ್ಯಕ್ಷರು ದುಬೈಗೆ ಹೋಗಿದ್ದರಲ್ಲ, ಆ ಸಂದರ್ಭದಲ್ಲಿ ಯಾರೂ ಕೂಡ ರಕ್ಷಣೆಗೆ ಬರುವುದಕ್ಕಾಗಿರಲಿಲ್ಲ. ಹಿಂದಿನ ಸರ್ಕಾರಗಳೆಲ್ಲವೂ

ಅದಕ್ಕೆ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಇವೆಲ್ಲವೂ ಇದೆ. ಮಾನ್ಯ ಸಭಾನಾಯಕರಾಗಿ ಮುಖ್ಯಮಂತ್ರಿಗಳಾದ ತಾವು ಈ ಕಾರ್ಯಾಚರಣೆ ಬಗ್ಗೆ ಅನೇಕ ವಿಚಾರಗಳನ್ನು ಹೇಳುವುದಕ್ಕೆ ಆಗದಿರಬಹುದು. ಆದರೆ, ಈ ಕುರಿತು ಸದನದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಸದನದಿಂದ ರಾಜ್ಯದ ಜನತೆಗೆ ಈ ರೀತಿಯ ಸಂದೇಶ ಹೋದಾಗ, ಮಾನ್ಯ ಸದಸ್ಯರು ತಪ್ಪು ತಿಳಿವಳಿಕೆಯಿಂದ ಹೇಳುತ್ತಿರಬಹುದು ಅಥವಾ ಅವರಿಗೆ ಆ ಕುರಿತ ಮಾಹಿತಿಯೂ ಇಲ್ಲದಿರಬಹುದು. ಆದುದರಿಂದ, ತಾವು ಇದಕ್ಕೆ ಮಾರ್ಗದರ್ಶನ ಮಾಡುವುದು ಸೂಕ್ತ. ಇಲ್ಲದಿದ್ದರೆ, ಚರ್ಚೆ ಎಲ್ಲಿಂದಲ್ಲಿಗೋ ಹೋಗುವ ಸಾಧ್ಯತೆಯಿದೆಯೆಂದು ಜ್ಞಾಪಿಸುವುದಕ್ಕೆ ಮಾನ್ಯ ಉಪಾಧ್ಯಕ್ಷರು ನನಗೆ ಅನುಮತಿ ಕೊಟ್ಟಿರುವುದರಿಂದ ಮತ್ತು ನಾನು ಮಾತನಾಡಲು ಮಾನ್ಯ ಸದಸ್ಯರು ಈಲ್ಡ್ ಆಗಿರುವುದರಿಂದ ಹೇಳಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:— ನಾನು ಕ್ಷಣ ಕಾಲ ವಿಚಲಿತನಾಗಿದ್ದೆ. ಸದನದಲ್ಲಿ ಸ್ವಲ್ಪ ಗಂಭೀರ ಸ್ವರೂಪದ ಚರ್ಚೆಗಳಾಗಬೇಕಾಗುತ್ತದೆ. ಅದರಲ್ಲೂ ಸದನದಲ್ಲಿ ಇಲ್ಲದಿರುವವರ ವಿಚಾರದಲ್ಲಿ ಸಾರಾಸಗಟಾಗಿ ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಕಾಲದಲ್ಲಿ ಸ್ವಲ್ಪ ಇತಿಮಿತಿಯನ್ನು ನಮಗೆ ನಾವೇ ನಿಯಂತ್ರಿಸಿಕೊಳ್ಳಬೇಕಾದ್ದು ಜನತಂತ್ರ ವ್ಯವಸ್ಥೆಯಲ್ಲಿ ಬಹಳ ಅಗತ್ಯವೆಂದು ನನ್ನ ಅನುಭವದ ಮಾತಾಗಿದೆ. ಕೆಲವು ಪೋಲೀಸ್ ಅಧಿಕಾರಿಗಳು ಯಾವ ನೆಲದಲ್ಲಿ ಹುಟ್ಟಿದರು ಎನ್ನುವುದಕ್ಕಿಂತಲೂ ಬಹಳ ಪ್ರಾಮುಖ್ಯವಾದುದು ಯಾವ ರಾಜ್ಯಕ್ಕೆ ಅವರ ಸೇವೆಯನ್ನು ಮೀಸಲಿರಿಸಲಾಗಿದೆ ಎಂಬುದಾಗಿದೆ. ಒಂದು ರಾಜ್ಯಕ್ಕೆ ಅವರ ಸೇವೆಯನ್ನು ಮೀಸಲಿರಿಸಿದಾಗ ತಮ್ಮ ಸೇವಾವಧಿಯ ಮೂವತ್ತು ವರ್ಷಗಳಲ್ಲಿ ಅವರು ಯಾವ ರೀತಿ ಸೇವೆ ಸಲ್ಲಿಸಿದರು ಎಂಬುದು ಬಹಳ ಪ್ರಾಮುಖ್ಯವಾದ ವಿಚಾರವಾಗಿದೆ. ನನ್ನ ಗಮನಕ್ಕೆ ಬಂದಿರುವಂತೆ ಹಿಂದಿನ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅವರನ್ನು ನಾನು ಕಳೆದ ಇಪ್ಪತ್ತೈದು ವರ್ಷಗಳಿಂದಲೂ ನೋಡಿದ್ದೇನೆ. ಕಳೆದ ಒಂದು ವರ್ಷದಿಂದ ಮುಖ್ಯಮಂತ್ರಿಯಾಗಿ ಅವರ ಸೇವೆಯನ್ನು ಗಮನಿಸಿದ್ದು, ಅತ್ಯಂತ ಸಮರ್ಥವಾದ ರೀತಿಯಲ್ಲಿ ಅವರು ಈ ರಾಜ್ಯದ ಜನರ ಸೇವೆ ಮಾಡಿದ್ದಾರೆಂದು ಹೇಳಬಯಸುತ್ತೇನೆ. ರಾಜ್ಯಾಂಗ ಪ್ರತಿಯೊಬ್ಬರಿಗೂ ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡುತ್ತದೆ. ಎಲ್ಲಿಯವರೆಗೆ ಅವರು ಸೇವಾವಧಿಯಲ್ಲಿರುತ್ತಾರೋ ಅಲ್ಲಿಯವರೆಗೆ ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ಅವರು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಆದರೆ, ಒಮ್ಮೆ ಅವರು ನಿವೃತ್ತರಾದ ನಂತರ, ಮಾನ್ಯ ಸದಸ್ಯರು ಸದನದ ಹೊರಗಡೆ ಏನೆಲ್ಲಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವರಿಗೆ ರಾಜ್ಯಾಂಗ ಹೇಗೆ ಅವಕಾಶ ಕೊಡುತ್ತದೋ ಅದೇ ರೀತಿಯ ಅವಕಾಶವನ್ನು ನಿವೃತ್ತ

6.20 ಪಿ.ಎಂ.

ಡಿಜಿಪಿ, ಡಿಜಿಪಿ ಮತ್ತು ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೂ ಕೊಡುತ್ತದೆ. ಅವರು ಪತ್ರಿಕಾ ಸಭೆಯನ್ನು ಮಾಡಿದರು, ಯಾರು ಬೇಕಾದರೂ ಪತ್ರಿಕಾ ಸಭೆ ಮಾಡಬಹುದು. ಅದಕ್ಕೆ

ನಾವು ನಿರ್ಬಂಧವನ್ನು ಹಾಕುತ್ತೇವೆಯೇ? ಅವರು ಪತ್ರಿಕಾ ಸಭೆ ಮಾಡಿದರು ಎಂದು ಅವರನ್ನು ಬಂಧಿಸಿ ಎಂದು ನೀವು ನನಗೆ ಕೇಳುತ್ತೀರಾ? ಅವರದ್ದೇ ಆದ ಅಭಿಪ್ರಾಯಗಳು ಇರಬಹುದು, ಅದಕ್ಕೆ ಸಾಕಾದಷ್ಟು ಆಧಾರಗಳು ಇರಬಹುದು, ಆದರೆ ಅದು ತಪ್ಪು, ಇದು ದೇಶದ್ರೋಹ ಎಂದು ಹೇಳಿದರೆ ಸರಿಯಾದಂಥ ಬೆಳವಣಿಗೆಯಲ್ಲ. ಇದರ ಬಗ್ಗೆ ಇಲ್ಲಿ ಮುಕ್ತವಾದಂಥ ಚರ್ಚೆಯಾಗುತ್ತಿರುವುದರಿಂದ ನನಗೆ ಬಹಳ ಸಂತೋಷವಾಗಿದೆ. ಆ ರೀತಿ ಮುಖ್ಯವಾದ ವಿಚಾರದ ಬಗ್ಗೆ ಇಲ್ಲಿ ಚರ್ಚೆ ಮಾಡುವಾಗ ಧರ್ಮದಂಡವನ್ನು ಬೀಸಬೇಕಾದರೆ ಯಾರ್‍ಯಾರದ್ದೋ ಮೇಲೆ ಬೀಸಿದರೆ ಸರಿಯಲ್ಲ, ಬೀಸುವ ಮೊದಲು ಇತಿಮಿತಿಗಳನ್ನು ಗಮನಿಸುವುದು ಒಳಿತು ಎಂಬ ಮಾತನ್ನು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ಹಿನ್ನೆಲೆಯಲ್ಲಿ, ಇವತ್ತಿನ ನಡವಳಿಕೆಗಳು, ಇವತ್ತು ಆದಂಥ ಕಾರ್ಯನೀತಿಯ ಬಗ್ಗೆ ವಿಮರ್ಶೆ ಮಾಡಬೇಕೆಂದು ಮಾನ್ಯ ಅರಗಜ್ಞಾನೇಂದ್ರರವರು ಹೇಳಿದರು. ಏಕೆಂದರೆ ಜವಾಬ್ದಾರಿ ಸ್ಥಾನದಲ್ಲಿ ಇರುವವರು ಪತ್ರಿಕಾ ಹೇಳಿಕೆಗಳನ್ನು ಕೊಡುವಾಗ ಆ ಜವಾಬ್ದಾರಿ ಸ್ಥಾನದಲ್ಲಿ ಇದ್ದುಕೊಂಡೇ ಇಂಥ ವಿಚಾರಗಳು ಗೊತ್ತಿದೆಯೆಂದು ಹೇಳಿಕೆಯನ್ನು ಮಾಡಿದಾಗ ಈ ರೀತಿ ವ್ಯವಸ್ಥೆಗೆ ಅವರ ಪರೋಕ್ಷವಾದ ಬೆಂಬಲವಿದೆಯೆಂದು ಅರ್ಥಬರುತ್ತದೆ. ಆದ್ದರಿಂದ ಇದರ ಬಗ್ಗೆ ತನಿಖೆಯಾಗಬೇಕೆಂದು ಈ ರೀತಿಯಾದ ವಾದಗಳನ್ನು ಮಂಡಿಸಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಪತ್ರಿಕಾ ಹೇಳಿಕೆಗಳ ಆಧಾರದ ಮೇಲೆ ಸದನದಲ್ಲಿ ವಿಚಾರವನ್ನು ಪ್ರಸ್ತಾಪ ಮಾಡುವುದರ ಮೂಲಕ ಆ ವಿಚಾರಕ್ಕೆ ಗಂಭೀರತೆಯನ್ನು ನೀಡಿ ಅದರ ಬಗ್ಗೆ ಪರಿಶೀಲನೆ ಮಾಡಿ ಅದರ ತಪ್ಪು, ಒಪ್ಪುಗಳನ್ನು ಸದನಕ್ಕೆ ತಿಳಿಸಬೇಕೆಂದು ಅರಗ ಜ್ಞಾನೇಂದ್ರರವರು ಇದನ್ನು ಪ್ರಸ್ತಾಪ ಮಾಡಿದ್ದಾರೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ನಾನು ಫೋಟೋವಿನ ಸಮೇತ ಅದನ್ನು ತಮಗೆ ಕಳಿಸಿಕೊಟ್ಟೆ. ಅದರ ಹಿಂಭಾಗದಲ್ಲಿರುವ ಫೋಟೋ ಇರಬಹುದು, ಇದು ಬೇರೆ ಪ್ರಶ್ನೆ. ಆದರೆ ನಾವು ಯಾವ ಭಾವನೆಯಲ್ಲಿ ಅದನ್ನು ಓದುತ್ತೇವೆಯೋ ಆ ಭಾವನೆಯಲ್ಲಿ ನಾವು ಅರ್ಥೈಸುತ್ತೇವೆ. ವಿರೋಧ ಪಕ್ಷದಲ್ಲಿ ಕುಳಿತಿರುವ ನಾವು ಸರ್ಕಾರದ ತಪ್ಪುಗಳನ್ನು ಹೇಳುವುದು ಜವಾಬ್ದಾರಿಯಾಗಿರುತ್ತದೆ. ಆದರೆ ಆಡಳಿತ ನಡೆಸುವ ತಮಗೆ ಇವರು ಈ ರೀತಿಯಾದ ಮುಜುಗರಕ್ಕೆ ನಮ್ಮನ್ನು ಸಿಲುಕಿಸುತ್ತಾರೆ ಎಂಬ ಭಾವನೆ ಬರುತ್ತದೆ. ಎಲ್‌ಟಿಟಿ.ಯ ಜೊತೆಗೆ ಅವರಿಗೆ ಸಂಪರ್ಕವಿರಬಹುದು ಎಂಬುದು ಪತ್ರಿಕಾ ಮಾಧ್ಯಮಗಳ ಮೂಲಕ ತಿಳಿದು ಬಂದಕಾರಣ ಉನ್ನತಾಧಿಕಾರಿಗಳು ಈ ರೀತಿ ನಡೆದುಕೊಂಡಿದ್ದಾರೆ ಎಂಬ ಸಂಶಯವನ್ನು ಅವರು ವ್ಯಕ್ತಮಾಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಬಹಳ ಹಿರಿಯರು, ಆಡಳಿತದ ಅಪಾರ ಅನುಭವವನ್ನು ಹೊಂದಿದ್ದು ಈ ಹಿಂದೆ ಗೃಹ ಸಚಿವರಾಗಿದ್ದರು. ನಾನು ಈಗ ಹೇಳಿದಂಥ ಮಾತುಗಳು ಎಲ್ಲಾ ಪೋಲೀಸ್ ಅಧಿಕಾರಿಗಳಿಗೂ

ಅನ್ವಯವಾಗುವುದಿಲ್ಲ. ಬಹಳ ಜನ ಪೋಲೀಸ್ ಅಧಿಕಾರಿಗಳು ತಮ್ಮ ಜೀವನ್ನು ಒತ್ತೇ ಇಟ್ಟು ಕೆಲಸ ಮಾಡುತ್ತಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಎರಡೂ ರಾಜ್ಯದ ಜನರು, ನಾವು ನೀವೆಲ್ಲರೂ ಮಾನಸಿಕವಾಗಿ ಅನುಭವಿಸಿರುವ ನೋವಿನ ಬಗ್ಗೆ ಹೇಳುತ್ತಿದ್ದೇನೆ. ನಾವೆಲ್ಲರೂ ಆಯ್ಕೆಯಾಗಿ ಬಂದಿದ್ದರೂ ಅದರ ಬಗ್ಗೆ ಮಾತನಾಡಲು ಬಾಯಿಬಿಡದಿರುವ ವಾತಾವರಣವಿತ್ತು. ಜನರು ಶಾಸಕರಾದ ನೀವೇನು ಮಾಡುತ್ತೀರಿ? ಬೆಂಗಳೂರಿನಲ್ಲಿ ಕುಳಿತು ಏನು ಮಾಡುತ್ತೀರಿ ಎಂದು ಬೈದಿದ್ದು, ಜನರಿಗೆ ನಮ್ಮ ಮೇಲೆ ಏನೋ ಒಂದು ರೀತಿ ಸಂಶಯ, ನಾವೆಲ್ಲ ನಿಮ್ಮ ಜೊತೆ ಕೈಜೋಡಿಸಿದ್ದೇವೆ ಎಂಬ ಸಂಶಯ, ರಾಜ್ಯದ ಗೌರವದ ಪ್ರಶ್ನೆ, ರಾಜ್‌ಕುಮಾರ್‌ರವರ ಜೀವನ ಪ್ರಶ್ನೆಯೆಂದು ನಾವೆಲ್ಲರೂ ಗಂಭೀರವಾಗಿ ಕುಳಿತಿದ್ದೆವು, ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾದ ಮೇಲೂ ನಾವು ಗಂಭೀರವಾಗಿಯೇ ಕುಳಿತು ತಮ್ಮಿಂದ ಒಂದು ಹೇಳಿಕೆಯನ್ನು ದಯಮಾಡಿಕೊಡಿ, ಜನರು ಕೇಳುತ್ತಿದ್ದಾರೆಂದು ಕೇಳಿಕೊಂಡಿದ್ದೆವು. ವಿರೋಧ ಪಕ್ಷದಲ್ಲಿರುವ ನಾವು ರಾಜಕಾರಣದಲ್ಲಿ ಆಡಳಿತ ಪಕ್ಷದವರನ್ನು ತಿದ್ದುವುದಕ್ಕಾಗಿಯೇ ಇರುವುದು, ಹಾಗಿದ್ದಮೇಲೆ ನಾವೇ ಪತ್ರಿಕಾ ಹೇಳಿಕೆಯನ್ನು ಮಾಡಬಹುದಿತ್ತು. ಆದರೆ ನಾವು ಆ ಕೆಲಸವನ್ನು ಮಾಡಲಿಲ್ಲ. ಆದರೆ ಇತ್ತೀಚೆಗೆ ನಿವೃತ್ತಿಯಾಗಿರುವ ಪೋಲೀಸ್ ಉನ್ನತಾಧಿಕಾರಿಗಳು ಈ ರೀತಿ ಇದೆಯೆಂದು ಗೌಪ್ಯವಾಗಿ ತಮ್ಮ ಹತ್ತಿರ ಮಾತನಾಡಬಹುದಿತ್ತು. ನಿವೃತ್ತ ಪೋಲೀಸ್ ಉನ್ನತಾಧಿಕಾರಿಯ ಮಗ ಗ್ರಾನೈಟ್ ವ್ಯವಹಾರದಲ್ಲಿದ್ದು ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದಿದ್ದಾರೆಂದು ತಿಳಿದು ಬಂದಿದೆ, ಇದಕ್ಕೆ ತಮ್ಮ ಅನುಮತಿ ಇಲ್ಲವೆಂದು ತಾವು ಹೇಳಿದ್ದೀರಿ. ಹಾಗಿದ್ದರೆ ಅವರು ಯಾವ ಅನುಮತಿ ಮೇರೆಗೆ ಕಾಡಿಗೆ ಹೋಗಿದ್ದರು. ಅವರು ವೀರಪ್ಪನ್‌ಗೆ ಹೇಗೆ ಆಪ್ತರಾದರು?

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಉಪಾಧ್ಯಕ್ಷರೆ, ಯಾರಾದರೂ ಕಾಡಿಗೆ ಹೋಗಬೇಕಾದರೆ ಪಾಸ್‌ಪೋರ್ಟ್, ವೀಸಾವನ್ನೇನಾದರೂ ನಿಗದಿ ಮಾಡಿದ್ದಾರೆಯೇ ಕಾಡಿಗೆ ಯಾರು ಬೇಕಾದರೂ ಹೋಗಬಹುದು. ನಾನಾ ವಿಧಕೋಸ್ಕರ ಕಾಡಿಗೆ ಹೋಗುತ್ತಾರೆ. ಆದ್ದರಿಂದ ಅವರ ಮೇಲೆ ನಿಯಂತ್ರಣವನ್ನು ಹೇಗೆ ಮಾಡುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ :— ಹಾಗಿದ್ದರೆ ಎಸ್. ರಮೇಶ್‌ರವರು ಕಾಡಿಗೆ ಹೋದರು, ಅವರನ್ನೇಕೆ ತಾವು ಅರೆಸ್ಟ್ ಮಾಡಿದಿರಿ?

ಶ್ರೀ ಎಸ್.ಎಂ. ಕೃಷ್ಣ :— ಅವರು ವೀರಪ್ಪನ್‌ನನ್ನು ಹಿಡಿಯಲು ಹೋಗುತ್ತೇವೆಂದು ಹೇಳಿದ್ದರಿಂದ ಅವರ ಜೀವನವನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಹಾಗೆ ಮಾಡಿದೆವು.

ಶ್ರೀ ಅರಗ ಜ್ಞಾನೇಂದ್ರ :— ಅವರು ತಮ್ಮಿಂದ ರಕ್ಷಣೆಯನ್ನೇ ಕೇಳಿರಲಿಲ್ಲ?

ಶ್ರೀ ಎಸ್.ಎಂ. ಕೃಷ್ಣ:— ಕೇಳಿದ್ದರು, ಅವರ ವಿಚಾರದಲ್ಲಿ ತಾವು ತಪ್ಪು ತಿಳಿದುಕೊಂಡಿದ್ದೀರಿ. ರಮೇಶ್‌ರವರು ಕಾಡಿಗೆ ಹೋಗುವುದಾಗಿ ಹೇಳಿದರು. ಆಗ ನಾನು ನಿಮಗೆ ರಸ್ತೆ ಗೊತ್ತಿದೆಯೆ? ಯಾರನ್ನು ಹುಡುಕಿಕೊಂಡು ಹೋಗುತ್ತೀರಿ ಎಂದರೆ ಡಾ: ರಾಜ್‌ಕುಮಾರ್‌ರವರನ್ನು ಹುಡುಕಿಕೊಂಡು ಹೋಗುತ್ತಿದ್ದರು, ಅವರು ವೀರಪ್ಪನನ್ನು ಹುಡುಕಿಕೊಂಡು ಹೋಗುತ್ತಿರಲಿಲ್ಲ. ನಿಮ್ಮನ್ನು ಕಾಯಲು ನಿಮ್ಮ ಜೊತೆ ಎಷ್ಟು ಜನ ಪೋಲೀಸರನ್ನು ಕಳಿಸಲಿ ಎಂದು ಕೇಳಿದಾಗ ಅವರು, ಹಾಗಾದರೆ ನನ್ನನ್ನು ಇಲ್ಲೇ ಅರೆಸ್ಟ್ ಮಾಡಿಸಿಬಿಡಿ ಎಂದರು. ಅವರನ್ನು ಅರೆಸ್ಟ್ ಮಾಡಿಸಿದ್ದು ನಿಜ, ಹಾಗಾದಮೇಲೆ ಅವರು ಮನೆಗೆ ಹೋಗಬೇಕಾಗಿತ್ತು, ಆದರೆ ಅವರು ಮತ್ತೆ ಐದಾರು ಕಾರುಗಳನ್ನು ತೆಗೆದುಕೊಂಡು ಮೈಸೂರಿಗೆ ಕಾಡಿಗೆ ಹೋಗುತ್ತಿದ್ದೇನೆಂದರು, ಆಗ ಮತ್ತೆ ಮಂಡ್ಯದಲ್ಲಿ ಅವರನ್ನು ತಡೆಯಲಾಯಿತು. ಏಕೆಂದರೆ ಈಗಾಗಲೇ ಮೇರು ನಟರನ್ನು ಹಿಡಿದುಕೊಂಡಿರುವುದರಿಂದ ನಾಡೇ ಸಂಕಟದಲ್ಲಿದೆ, ನಾವೆಲ್ಲರೂ ಪರಿತಪಿಸುತ್ತಿರುವ ಕಾಲದಲ್ಲಿ ಮತ್ತೊಬ್ಬರು ರಾಜಕಾರಣಿ ಕಾಡಿಗೆ ಹೋಗಿ ಬರಲಿಲ್ಲವೆಂದರೆ ಆನೆಗಳು, ಕರಡಿಗಳು, ಮತ್ತೊಂದು ಅವರನ್ನು ಹಿಡಿಯಿತು ಎಂದರೆ ಆಗ ಮತ್ತೆ ಮುಖ್ಯಮಂತ್ರಿ ಕೃಷ್ಣ ರಾಜೀನಾಮೆ ಕೊಡಬೇಕು ಎಂದು ಕೇಳುತ್ತೀರಿ. ಏಕೆಂದರೆ ತಮ್ಮ ಪಕ್ಷದ ಒಂದು ಜೀವವನ್ನೇ ಕಾಪಾಡಲು ಆಗಲಿಲ್ಲ, ಆದ್ದರಿಂದ ರಾಜೀನಾಮೆ ಕೊಡಿ ಎಂದು ಆಗುತ್ತದೆ, ಆದ್ದರಿಂದ, ಮುಖ್ಯಮಂತ್ರಿಯ ಕುರ್ಚಿಯನ್ನು ಉಳಿಸಿಕೊಳ್ಳುವ ಸಲುವಾಗಿ ರಮೇಶ್‌ರವರನ್ನು ಅರೆಸ್ಟ್ ಮಾಡಿಸಿದೆವು.

ಶ್ರೀ ಅರಗ ಜ್ಞಾನೇಂದ್ರ:— ಎಸ್. ರಮೇಶ್ ರವರಿಗೆ ದಾರಿ ಗೊತ್ತಿರಲಿಲ್ಲ ಅರೆಸ್ಟ ಮಾಡಿದಿರಿ, ಆದರೆ ನಿವೃತ್ತ ಡಿ.ಜಿ.ಪಿ. ರಾಮಲಿಂಗಂರವರ ಮಗ ರಾಮ್‌ಕುಮಾರ್‌ರವರಿಗೆ ದಾರಿ ಗೊತ್ತಿತ್ತಲ್ಲ, ಹೇಗೆ?

ಶ್ರೀ ಎಸ್.ಎಂ. ಕೃಷ್ಣ:— ಇದನ್ನು ಅವರಿಗೇ ಕೇಳಬೇಕು. ಅವರು ನಾನು ಹೋಗುತ್ತೇನೆಂದು ನನಗೆ ಹೇಳಿದ್ದರೆ ಅವರಿಗೂ ಇದೇ ಮೋಕ್ಷ ಮಾಡುತ್ತಿದ್ದೆ.

ಶ್ರೀ ಅರಗ ಜ್ಞಾನೇಂದ್ರ:— ನಮ್ಮ ಗೃಹ ಸಚಿವರಿಂದ ವೀರಪ್ಪನ್‌ನ ಬಳಿ ಇಬ್ಬರೇ ಇಬ್ಬರು ಇದ್ದಾರೆ, ಎಲ್ಲಾ ನಿಷ್ಕ್ರಿಯಗೊಂಡಿದ್ದಾರೆ ಎಂದು ಹೇಳಿಕೆ ಕೊಡಿಸಿದ್ದು ಯಾರು? ಅವರಿಗೆ ಜವಾಬ್ದಾರಿ ಬೇಕಲ್ಲ? ಇಲ್ಲಿ ಎಲ್ಲೋ ಒಂದು ಕಡೆ ಗೊಂದಲ ಇದೆಯೆಂದು ಆಯಿತಲ್ಲ, ಅವರಿಗೆ ಏನೂ ಗೊತ್ತಿಲ್ಲವೆಂಬುದು ಆಯಿತಲ್ಲ, ಈ ಪತ್ರಿಕೆ, ಮಾಹಿತಿ ನೋಡಿದಮೇಲೆ ನಮಗೆ ಗೊಂದಲಮಯ ಉಂಟಾಗಿದೆ. ನಾಳೆ ತಾವು ಇದರ ಬಗ್ಗೆ ಉತ್ತರವನ್ನು ಕೊಡುವಾಗ ನಮಗೆಲ್ಲ ಧೈರ್ಯ ತುಂಬುವುದಾದರೆ ನನ್ನ ಅಭ್ಯಂತರವೇನಿಲ್ಲ.

ಶ್ರೀ ಎಸ್.ಎಂ. ಕೃಷ್ಣ:— ತಮಗೆಲ್ಲ ಧೈರ್ಯ ತುಂಬುವುದಕ್ಕಾಗಿಯೇ ನಾನು ಇದರ ಬಗ್ಗೆ ನೀಡಿದ ಹೇಳಿಕೆಯಲ್ಲಿ anti- nationals, secessionists, extremist groups, communal fundamentalists ಇವರೆಲ್ಲರನ್ನು ಮಟ್ಟ ಹಾಕುತ್ತೇವೆಂದು ನಾನು ಹೇಳಿದ್ದೇನೆ.

ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಇದು ಇವತ್ತು ಅಥವಾ ನಿನ್ನೆಯ ಹುಣ್ಣು ಅಲ್ಲ. ಕಳೆದ ಹಲವಾರು ವರ್ಷಗಳಿಂದ ನಮ್ಮ ಈ ರಾಜ್ಯದಲ್ಲಿ ಬೆಳೆಸಿಕೊಂಡು ಬಂದಿರತಕ್ಕ ಹುಣ್ಣು ಇದಾಗಿದೆ. ಹಿಂದೆ ಅನೇಕ ತಪ್ಪುಗಳಾಗಿವೆ. ಕೃಪಾಕರ ಮತ್ತು ಸೇನಾನಿಯವರನ್ನು ಕಾಡಿಗೆ ಎಳೆದುಕೊಂಡಾಗಲೇ ನಾವು ಎಚ್ಚೆತ್ತುಕೊಂಡು ಈ ಹುಣ್ಣನ್ನು ನಿವಾರಣೆ ಮಾಡಬೇಕಾಗಿತ್ತು. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿ ಕೇಂದ್ರದಿಂದ ನೇರವಾಗಿ ಕಾರ್ಯಪಡೆಯನ್ನು ಕರೆಸಿ ಕಾಡಿಗೆ ನುಗ್ಗಿಸಿ ಏನಾದರೂ ಕಾರ್ಯಾಚರಣೆ ನಡೆಸಿದ್ದಲ್ಲಿ ಬಹುಶಃ ಕಳೆದ 108ದಿನಗಳ ಕಷ್ಟ ಮತ್ತು ನಷ್ಟಗಳನ್ನು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳೆರಡೂ ಸಹಾ ಅನುಭವಿಸುತ್ತಿರಲಿಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಮುಂದೆ ಈ ರೀತಿಯ ಯಾವುದೇ ತಪ್ಪುಗಳಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಇವತ್ತಿನ ದಿವಸ ನಾವಿಲ್ಲಿ ಈ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಈಗಾಗಲೇ ಕಾಡಿಗೆ ಹೋಗಿದ್ದವರ ಹಿನ್ನೆಲೆ ಬೇರೆ ಬೇರೆ ರೀತಿ ಇದೆ, ಬೇರೆ ಬೇರೆ ಪಾತ್ರಗಳನ್ನು ಅವರು ಇಲ್ಲಿ ವಹಿಸಿದ್ದಾರೆ. ಡಾ: ಭಾನು ಅವರು ನಾನು ರಾಜಕುಮಾರ್‌ರವರಿಗೆ ಚಿಕಿತ್ಸೆ ನೀಡಲು ಹೋಗಿದ್ದೆವು ಎಂದು ಪೇಪರ್ ಸ್ಟೇಟ್‌ಮೆಂಟ್ ಅನ್ನು ಕೊಟ್ಟಿದ್ದರು. ಇವರ ಡಿಗ್ರಿ ಏನು? ಇವರ ವ್ಯವಹಾರಗಳೇನು? ಇವೆಲ್ಲವನ್ನೂ ಕೂಡ ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಏನೂ ಡಿಗ್ರಿ ಇಲ್ಲದಿದ್ದವರು ಅಥವಾ ಡಾಕ್ಟರ್ ಅಲ್ಲದಿದ್ದವರು ಅಷ್ಟು ದೊಡ್ಡ ವ್ಯಕ್ತಿಯನ್ನು ಚಿಕಿತ್ಸೆ ಮಾಡಲಿಕ್ಕೆ ಹೋಗಿದ್ದರು. ಏನೂ ಟ್ರೀಟ್‌ಮೆಂಟ್ ಮಾಡಲು ಗೊತ್ತಿಲ್ಲದಿದ್ದವರು ಏನಾದರೊಂದು ಇಂಜೆಕ್ಷನ್ ಅನ್ನು ಅವರಿಗೆ ಚುಚ್ಚಿ ಇನ್ನೇನಾದರೂ ಅನಾಹುತ ಮಾಡಿದ್ದರೆ, ಆ ವೀರಪ್ಪನ್ ಕೊಲೆ ಮಾಡುವುದೇ ಬೇಡ, ಇವರೇ ಹೋಗಿ ಕೊಲೆ ಮಾಡಿದಂತಾಗುತ್ತಿತ್ತು. ಈ ಪರಿಸ್ಥಿತಿಯ ಬಿಡುಗಡೆಯಲ್ಲಿ ಪಾತ್ರವಹಿಸಿದವರ ಹಿನ್ನೆಲೆಯನ್ನು ನಾವು ನೋಡಿದಾಗ, ಕರ್ನಾಟಕ ಮತ್ತು ತಮಿಳುನಾಡಿನ ಬಾರ್ಡರ್ ಆದಂತಹ ಈ ಕಾಡು ಎಲ್.ಟಿ.ಟಿ.ಇ. ತರಬೇತಿ ಕೇಂದ್ರವಾಗುತ್ತಿದೆಯೇನೋ ಎಂಬ ಸಂದೇಹ ಉಂಟಾಗುತ್ತಿದೆ. ಇವತ್ತು ಶ್ರೀಲಂಕಾದಲ್ಲಿ ಏನೊಂದು ಕ್ಷೋಭೆ ಹರಡಿದೆಯೋ ಅದೇ ರೀತಿ ಕ್ಷೋಭೆ ಇವತ್ತಿನ ದಿವಸ ಈ ಎರಡೂ ರಾಜ್ಯಗಳ ನಡುವೆ ಹರಡಿದರೆ, ಅಂತಹ ಒಂದು ಪರಿಸ್ಥಿತಿ ಈ ಎರಡೂ ರಾಜ್ಯಗಳ ನಡುವೆ ಉಂಟಾದರೆ ನಾಳೆ ಇನ್ನೇನು ಗತಿಯಾಗುತ್ತದೆಯೋ? ಇವತ್ತು ಒಬ್ಬ ಸಾಮಾನ್ಯ ದಂತಚೋರ ಅಥವಾ ದಂತವನ್ನು ಮಾರಾಟ ಮಾಡತಕ್ಕಂಥ ವ್ಯಕ್ತಿ ಇಡೀ ಎರಡು ಸರ್ಕಾರಗಳನ್ನು ಬಗ್ಗಿಸತಕ್ಕಂಥ ಮತ್ತು ಕೇಂದ್ರ ಸರ್ಕಾರವೂ ಕೂಡ ಇದರಲ್ಲಿ ಮಧ್ಯೆ ಪ್ರವೇಶಿಸತಕ್ಕಂಥ ಸ್ಥಿತಿಯನ್ನು ನಿರ್ಮಾಣ ಮಾಡಿದ ಎಂದರೆ ಹೇಗೆ? ಇವತ್ತು ಕಂದಾಹಾರದ ಪ್ರಕರಣದ ಬಗ್ಗೆ ಇಲ್ಲಿ ಪ್ರಸ್ತಾಪಿಸಬಹುದು. ಅದು ವಿದೇಶೀ ಶಕ್ತಿಯ ಕೈವಾಡದಿಂದ ಆದದ್ದು. ಅದು ನಮ್ಮ ನಿಯಂತ್ರಣದಲ್ಲಿ ಇರಲಿಲ್ಲ, ಅದರಲ್ಲಿ ವಿದೇಶಿ ಕೈವಾಡ ಇತ್ತು. ಆದರೆ ಈ ಪ್ರಕರಣ ನಮ್ಮ ದೇಶದೊಳಗೇ ನಡೆದಿದೆ. ಇದು ನಮ್ಮ

ಆಂತರಿಕವಾದ ಸಮಸ್ಯೆಯಾಗಿತ್ತು. ಆಂತರಿಕವಾಗಿ ಇರತಕ್ಕಂಥ ಸಣ್ಣ ಪುಟ್ಟ ಕಳ್ಳರನ್ನು ನಾವು ನಿಯಂತ್ರಣ ಮಾಡಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ ವಿದೇಶಿ ಶಕ್ತಿಗಳನ್ನು ನಿಯಂತ್ರಣ ಮಾಡುವುದಾದರೂ ಹೇಗೆ? ನಾವು ಕನಿಷ್ಠಪಕ್ಷ ಈ ಆಂತರಿಕವಾಗಿರತಕ್ಕಂಥ ಭದ್ರತೆ ಮತ್ತು ನಮ್ಮ ಜನರ ಪ್ರಾಣಗಳನ್ನು ಉಳಿಸುವ ದೃಷ್ಟಿಯಿಂದ ನಮ್ಮ ಇಡೀ ವ್ಯವಸ್ಥೆಯಲ್ಲಿ ಉಂಟಾಗಿರುವ ಲೋಪವನ್ನು ಸರಿಪಡಿಸುವ ಅಗತ್ಯ ಇಂದು ಬಂದಿದೆ. ಈ ಒಂದು ಘಟನೆಯನ್ನು ಹಿನ್ನೆಲೆಯಲ್ಲಿ ಈ ಎಲ್ಲಾ ಅಂಶಗಳ ಮೇಲೆ ಬೆಳಕು ಚೆಲ್ಲಿ ಇದನ್ನು ಪುನರ್ ಪರಿಶೀಲಿಸಿ ಪೋಲೀಸ್ ವ್ಯವಸ್ಥೆ ಮತ್ತು ಇಂಟೆಲಿಜೆನ್ಸ್ ವ್ಯವಸ್ಥೆ ಇವೆಲ್ಲವನ್ನೂ ಕೂಡ ವಿಮರ್ಶೆ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ನನಗನ್ನಿಸುತ್ತದೆ. ದಯಮಾಡಿ ಈ ಹಿನ್ನೆಲೆಯಲ್ಲಿ ಸರ್ಕಾರ ವಿಚಾರ ಮಾಡಿನೋಡಬೇಕು. ಯಾರ್‍ಯಾರು ಈ ಘಟನೆಗಳಿಗೆ ಹೇಗೆ ಹೇಗೆ ಸಂಬಂಧ ಹೊಂದಿದ್ದಾರೆ ಎಂಬುದನ್ನೂ ನೋಡಬೇಕು. ಈ ಪ್ರಕರಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆ ಬಹಳ ಅಪೂರ್ಣವಾಗಿದೆ. ನಮ್ಮ ಜನರ ಸಂದೇಹ ನಿವಾರಣೆಯಾಗುವಂತಹ ರೀತಿಯಲ್ಲಿ ಆ ಹೇಳಿಕೆ ಇಲ್ಲ. ಕ್ಯಾಸೆಟ್‌ಗಳಲ್ಲಿ ಏನಿತ್ತು? ನಡೆದಿರತಕ್ಕಂಥ ಪತ್ರ ವ್ಯವಹಾರಗಳೇನು? ಇದರಲ್ಲಿ ಇನ್ನೇನು ಆಗಿದೆ ಎನ್ನುವುದನ್ನೆಲ್ಲಾ ದಯವಿಟ್ಟು ಸರ್ಕಾರ ಈ ಸದನದ ಮುಂದೆ ತನ್ಮೂಲಕ ಜನತೆಯ ಮುಂದೆ ಇಡತಕ್ಕಂಥ ಅವಶ್ಯಕತೆ ಇದೆ. ಜನತೆಯ ಸಂದೇಹ ನಿವಾರಣೆಯಾಗಲು ಇದು ಅವಶ್ಯಕವಾಗಿದೆ. ಅನೇಕ ದಿವಸಗಳಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಮಾನಸಿಕವಾಗಿ ಎಷ್ಟು ಕ್ಷೋಭೆ ಅಥವಾ ನೋವು ಉಂಟಾಗಿತ್ತೋ ಅದೇ ಅನುಭವವನ್ನು ಈ ರಾಜ್ಯದ ಸಾಮಾನ್ಯ ಜನ ಅನುಭವಿಸಿದ್ದಾರೆ. ವೀರಪ್ಪನ್‌ನಂತಹ ಒಬ್ಬ ಸಾಮಾನ್ಯ ವ್ಯಕ್ತಿ ಅಸಾಮಾನ್ಯವಾಗಿ ಇಡೀ ವಿಶ್ವದ ಹೀರೋ ಆಗದಂತೆ ನೋಡಿಕೊಳ್ಳಬೇಕು. ವೀರಪ್ಪನ್ ಒಬ್ಬ ಮಹಾನ್ ವ್ಯಕ್ತಿ ಎನ್ನುವಂತೆ ಪ್ರತಿಬಿಂಬಿಸಿದರೆ ಕಷ್ಟವಾಗುತ್ತದೆ. ಇವತ್ತು ಊರು ಊರುಗಳಲ್ಲಿ ದಂತ ಕಡಿಯುವಂತಹ ಕಳ್ಳರಿಗೆ ಅಥವಾ ಅಲ್ಲಿ ಇಂತಹ ಕೆಲಸ ಮಾಡತಕ್ಕಂಥ ಜನಗಳಿಗೆ ಒಂದು ರೀತಿಯ ಶಕ್ತಿ ಬರುತ್ತದೆ. ವೀರಪ್ಪನ್ ಇಡೀ ಒಂದು ಸರ್ಕಾರವನ್ನೇ ಬಗ್ಗಿಸಿದ್ದಾನೆ, ನಾವು ಏನಾದರೂ ಪ್ರಯತ್ನ ಮಾಡಿದರೆ ನಮ್ಮಿಂದಲೂ ಅದು ಸಾಧ್ಯವಾಗಬಹುದೇನೋ ಎಂಬ ಭಾವನೆ ಅವರಿಗೆ ಬರುತ್ತದೆ. ಪ್ರತಿಯೊಂದು ಊರಿನಲ್ಲಿರುವ ಇಂತಹ ಕಳ್ಳರಿಗೆ ಧೈರ್ಯ ಬರಬಾರದು. ಅಂತಹವರ ಧೈರ್ಯ ಉಡುಗಿ ಹೋಗಬೇಕು. ಊರು ಊರುಗಳಲ್ಲಿ ಶಾಂತಿ ನೆಲಸಬೇಕು. ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕಂಥ ಕೃತ್ಯ ಕೆಲವು ಅಯೋಗ್ಯರ ಕೈಯಲ್ಲಿ ಸಿಕ್ಕಬಾರದು. ಅದಕ್ಕಿಂತ ಸರ್ಕಾರಿ ವ್ಯವಸ್ಥೆ ಶಕ್ತಿಯುತವಾಗಿದೆ ಎಂಬ ಭಾವನೆ ಜನತೆಗೆ ಬರಬೇಕು. ಈ ನಿಟ್ಟಿನಲ್ಲಿ ಈ ಎಲ್ಲಾ ಹಿನ್ನೆಲೆಯನ್ನು ವಿಚಾರಣೆ ಮಾಡಲಿಕ್ಕೆ ನ್ಯಾಯಾಧೀಶರೊಬ್ಬರ ನೇಮಕವಾಗಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ, ಮಾನ್ಯ ಉಪಾಧ್ಯಕ್ಷರಿಗೆ ಇಷ್ಟು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :— ಮಾನ್ಯ ಉಪಾಧ್ಯಕ್ಷರೇ, ನನಗೆ ಈಗ ಮಾತನಾಡುವ ಹಂಬಲ ಇಲ್ಲ. ಏಕೆಂದರೆ ಈ ವಿಷಯದಲ್ಲಿ ಬೇಕಾದುದಕ್ಕಿಂತಲೂ ಜಾಸ್ತಿ ಚರ್ಚೆ ನಡೆದಿದೆ ಎಂಬುದು ನನ್ನ ಅನಿಸಿಕೆಯಾಗಿದೆ. 108 ದಿವಸಗಳು ನಾವು ನೋವು ಅನುಭವಿಸಿದ್ದೇವೆ, ಇನ್ನೂ ನಾವು ನೋವನ್ನು ಅನುಭವಿಸಬಾರದು ಎಂಬುದು ನನ್ನ ಅನಿಸಿಕೆಯಾಗಿದೆ. ಮಾನ್ಯ ಚಂದ್ರೇಗೌಡರ ಆಗಲೇ ಮಾತನಾಡುತ್ತಾ, ನನ್ನನ್ನು ಅಥವಾ ನಿಮ್ಮನ್ನು ಏಕೆ ಹಿಡಿದುಕೊಂಡು ಹೋಗುತ್ತಾನೆ? ಎಂದು ಹೇಳಿದರು. ಅದೇ ರೀತಿ ಮಾನ್ಯ ರಾಜ್‌ಕುಮಾರ್‌ರವರೂ ಸಹಾ ಒಂದು ವೇಳೆ ವೀರಪ್ಪನ್ ನನ್ನನ್ನು ಹಿಡಿದುಕೊಂಡು ಹೋದರೆ ನಾನು ಶರ್ಟ್ ಪಂಚೆ ಬಿಟ್ಟು ಬರುತ್ತೇನೆ ಎಂದಿದ್ದರು. ಆದರೆ ವೀರಪ್ಪನ್ ರಾಜ್‌ಕುಮಾರ್‌ರವರಿಗೆ ಶರ್ಟ್ ಮತ್ತು ಪಂಚೆ ಕೊಟ್ಟು ಕಳುಹಿಸಿದ. ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯ ಖರ್ಗೆಯವರ ಶರ್ಟ್ ಮತ್ತು ಪಂಚೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅನೇಕ ಜನ ಮುಗ್ಧರು, ಯಾರು ಬೆಂಗಳೂರು ಮತ್ತು ಮೈಸೂರು ಅಥವಾ ರಾಜ್ಯದ ಇತರ ಕಡೆಗಳಲ್ಲಿ ವ್ಯವಹಾರ ನಡೆಸುತ್ತಿದ್ದರೋ, ಅವರ ಶರ್ಟ್ ಪಂಚೆಗಳಂತೂ ಈಗ ಹೋಗಿದೆ. ಅವರ ವ್ಯಾಪಾರ ವಹಿವಾಟು ಕಡಿಮೆಯಾಗಿದ್ದರಿಂದ ಅವರ ಶರ್ಟ್ ಮತ್ತು ಪಂಚೆ ಹೋದಂತಾಗಿದೆ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಶ್ರೀ ಕರೀಂರವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಈ ನಾಡಿನ ಮಾನವನ್ನು ಎತ್ತಿ ಹಿಡಿಯುವಲ್ಲಿ ಬಹಳ ದೊಡ್ಡ ಮಹತ್ತರವಾದಂತಹ ಕೆಲಸವನ್ನು ಅವರು ಮಾಡಿದರು. ಸರ್ಕಾರ ಟಾಡಾ ಖೈದಿಗಳನ್ನು ಬಿಡುಬೇಕು ಎನ್ನುವಂತಹ ಪ್ರಯತ್ನ ಮಾಡಿದಾಗ ಅವರು ಸುಪ್ರೀಂ ಕೋರ್ಟ್‌ಗೆ ಅದರ ವಿರುದ್ಧ ಮೊಕದ್ದಮೆಯೊಂದನ್ನು ಹೂಡಿ ಅದಕ್ಕೆ ಸ್ಟೇ ತೆಗೆದುಕೊಂಡು ಬಂದಿದ್ದಕ್ಕಾಗಿ ಕರೀಂ ಅವರಿಗೆ ತುಂಬು ಹೃದಯದ ಅಭಿನಂದನೆಯನ್ನು ನಾನು ಸಲ್ಲಿಸುತ್ತೇನೆ. ಒಂದು ವೇಳೆ ಟಾಡಾ ಖೈದಿಗಳನ್ನು ಬಿಟ್ಟಿದ್ದರೆ ಅನಾಹುತವಾಗುತ್ತಿತ್ತು. ಕರ್ತವ್ಯದಲ್ಲೇ ಮಡಿದ ಹರಿಕೃಷ್ಣ, ಶಕೀಲ್, ಶ್ರೀನಿವಾಸ ಇನ್ನೂ ಮುಂತಾದವರ ಕುಟುಂಬದಲ್ಲಿ ಮುಸುಕಿದ್ದ ಕಾರ್ಮೋಡ ಇನ್ನಷ್ಟು ದೊಡ್ಡದಾಗಿ ದೊಡ್ಡ ಕತ್ತಲೆಯೇ ಕವಿಯುತ್ತಿತ್ತು. ಅವರು ವೀರಪ್ಪನ್‌ನನ್ನು ಹಿಡಿಯುವುದಕ್ಕೋಸ್ಕರ ಬಹಳ ಕಷ್ಟಪಟ್ಟು ತಮ್ಮ ಪ್ರಾಣವನ್ನೇ ತ್ಯಜಿಸಿದ್ದರು. ವೀರಪ್ಪನ್‌ನ ಸಂಗಡಿಗರನ್ನು ಬಿಟ್ಟಿದ್ದರೆ ಇವರ ಕುಟುಂಬದವರ ಪರಿಸ್ಥಿತಿ ಇನ್ನೂ ಚಿಂತಾಜನಕವಾಗುತ್ತಿತ್ತು. ಆದುದರಿಂದ, ನಾನು ಕರೀಂ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಷಯದ ಚರ್ಚೆ ಮಾಡುವಾಗ ಪೋಲೀಸ್ ಅಧಿಕಾರಿಗಳು ಸರಿಯಾಗಿ ಕರ್ತವ್ಯವನ್ನು ನಿಭಾಯಿಸಿಲ್ಲ ಎಂಬ ಅಂಶ ಪ್ರಸ್ತಾಪವಾಯಿತು. ಮಾನ್ಯ ರಾಮದಾಸ್‌ರವರು ಮಾತನಾಡುತ್ತಾ ಇಂಟೆಲಿಜೆನ್ಸ್ ಇಲಾಖೆಯು ತನ್ನ ಕರ್ತವ್ಯ ಸರಿಯಾಗಿ ನಿಭಾಯಿಸಿಲ್ಲ ಎನ್ನುವಂತಹ ಮಾತನ್ನು ಆಗಲೇ ಹೇಳಿದರು. ಇಂಟೆಲಿಜೆನ್ಸ್‌ನವರು ರಾಜ್‌ಕುಮಾರ್‌ರವರಿಗೆ ಅವರ ಅಪಹರಣದ ಬಗ್ಗೆ ಸುಳಿವು ಕೊಟ್ಟಿದ್ದರು. ಸೆಕ್ಯೂರಿಟಿ ತೆಗೆದುಕೊಳ್ಳದೇ ಅಲ್ಲಿಗೆ ಹೋಗಬೇಡಿ ಎಂದು ಅವರಿಗೆ ಹೇಳಿದ್ದರು. ಆದಾಗ್ಯೂ ಅವರು

ಸೆಕ್ಯೂರಿಟಿ ತೆಗೆದುಕೊಳ್ಳದೇ ಅಲ್ಲಿಗೆ ಹೋದರು. ಇಂಟೆಲಿಜೆನ್ಸ್ ಅಧಿಕಾರಿಗಳಿಗೆ ಅವರು ತಮ್ಮ ಭೇಟಿಯ ಬಗ್ಗೆ ಅಧಿಕಾರಿಗಳಿಗೆ ಮೊದಲೇ ತಿಳಿಸದೇ ಇರುವುದು ಅಧಿಕಾರಿಗಳ ತಪ್ಪು ಎಂದು ನಾನು ಹೇಳುವುದಿಲ್ಲ. ಅಧಿಕಾರಿಗಳು ರಾಜ್ಯದಲ್ಲಿ ಯಾರ್ಯಾರು ಎಲ್ಲೆಲ್ಲಿ ಹೋಗುತ್ತಾರೆ ಎಂದು ಪ್ರತಿಯೊಬ್ಬರ ಬಗ್ಗೆ ಗಮನ ಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ನಾವು ಗಮನಿಸಬೇಕಾಗುತ್ತದೆ. ನಾವು ನಮ್ಮ ಕರ್ತವ್ಯವನ್ನು ಮಾಡದೇ ಅಧಿಕಾರಿಗಳ ಮೇಲೆ ತಪ್ಪನ್ನು ಹೊರಿಸಿದರೆ ಅವರು ಜವಾಬ್ದಾರರಾಗುವುದಲ್ಲ. ಇವತ್ತು ಹಿಂದಿನ ಕೆಲವು ಅಧಿಕಾರಿಗಳ ಬಗ್ಗೆ ಇಲ್ಲಿ ಚರ್ಚೆ ನಡೆಯಿತು. ನನಗೂ ಕೂಡ ಹಿಂದಿನ ಎಲ್ಲಾ ಪೋಲೀಸ್ ಅಧಿಕಾರಿಗಳ ಬಗ್ಗೆ ಗೌರವ ಇದೆ. ಈ ಪತ್ರಿಕೆಯಲ್ಲಿ ಅವರ ಬಗ್ಗೆ ಚರ್ಚೆ ಏಕೆ ಬಂದಿತು? ಎನ್ನುವುದರ ಬಗ್ಗೆ ಸರ್ಕಾರ ಸ್ವಲ್ಪ ವಿಷಯವನ್ನು ತಿಳಿಸಿದರೆ ಅವರ ಮೇಲೆ ಬಂದಂತಹ ಅಪಾದನೆಗಳು ಹೋಗಲಿಕ್ಕೆ ಅವಕಾಶವಾಗುತ್ತದೆ. ಇಷ್ಟನ್ನು ನಾನು ಸರ್ಕಾರದಿಂದ ಕೇಳುಕೊಳ್ಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :— ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆಯ ಹಿನ್ನೆಲೆಯಲ್ಲಿ ಇವತ್ತು ಇಲ್ಲಿ ಚರ್ಚೆ ನಡೆಯುತ್ತಿದೆ. ವೀರಪ್ಪನ್ ಅನ್ನು ಬಂಧಿಸಬೇಕಾಗಿತ್ತು ಎನ್ನುವ ವಿಚಾರದಲ್ಲಿ ಕೂಡ ಇವತ್ತು ಚರ್ಚೆ ನಡೆದಿದೆ. ವೀರಪ್ಪನ್ ಅನ್ನು ಬಂಧಿಸುವಲ್ಲಿ ಹಿಂದಿನ ಎಲ್ಲಾ ಸರ್ಕಾರಗಳೂ ಕೂಡ ವಿಫಲವಾಗಿರುವಾಗ ನಾವು ಈ ಸರ್ಕಾರದ ಮೇಲೆ ಮಾತ್ರ ವೀರಪ್ಪನ್ ಬಂಧಿಸದಿರುವ ಬಗ್ಗೆ ದೂಷಿಸುವುದು ಅಷ್ಟೊಂದು ಉತ್ತಮವಾದಂತಹ ಸಂಪ್ರದಾಯವಲ್ಲವೆಂದು ನನಗನ್ನಿಸುತ್ತದೆ. ಹಿಂದೆ ವೀರಪ್ಪನ್ ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿರಲಿಲ್ಲ. ವೀರಪ್ಪನ್ ಹಿಂದೆ ಅನೇಕ ಜನ ಪೋಲೀಸ್ ಅಧಿಕಾರಿಗಳನ್ನು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕೊಲೆ ಮಾಡಿದ್ದಾನೆ. ಅವತ್ತೇ ಹಿಂದಿನ ಸರ್ಕಾರಗಳು ಅವನನ್ನು ಬಂಧಿಸಬೇಕಾಗಿತ್ತು. ಕೇಂದ್ರ ಸರ್ಕಾರದವರೂ ಕೂಡ ಅವನನ್ನು ಬಂಧಿಸಲು ಹಿಂದೆಯೇ ರಾಜ್ಯ ಸರ್ಕಾರಗಳಿಗೆ ನೆರವು ಕೊಡಬೇಕಾಗಿತ್ತು. ಅವರೂ ಕೂಡ ಹಿಂದೆ ಅಂತಹ ನೆರವು ಕೊಟ್ಟಿಲ್ಲ. ಕೇಂದ್ರದ ನೆರವು ಕೇಳಿ ಪತ್ರ ವ್ಯವಹಾರ ಮಾಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೋಗಿ ನೆರವು ಯಾಚಿಸಿದ್ದರೂ ಕೂಡ ಅವರಿಂದ ಸರಿಯಾದ ಒಂದು ಉತ್ತರ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಅನೇಕ ಸಲ ಎಲ್ಲಾ ವಿರೋಧ ಪಕ್ಷಗಳ ನಾಯಕರುಗಳ ಸಭೆ ಕರೆದು ಈ ದಿಸೆಯಲ್ಲಿ ನನಗೆ ಸಲಹೆಗಳನ್ನು ಕೊಡಿ ಎಂದು ಕೇಳಿದರು. ನಾವೆಲ್ಲರೂ ಅಂತಹ ಸಭೆಗಳಲ್ಲಿ ಭಾಗವಹಿಸಿ ಸಲಹೆಗಳನ್ನು ಕೊಟ್ಟ ನಂತರ ಮಾನ್ಯ ಮುಖ್ಯಮಂತ್ರಿಗಳು ಆ ಸಲಹೆಗಳನ್ನು ಆಧಾರವಾಗಿಟ್ಟುಕೊಂಡು ಅವರದೇ ಆದಂತಹ ಬುದ್ಧಿವಂತಿಕೆಯಿಂದ ಇವತ್ತು ಡಾ: ರಾಜ್‌ಕುಮಾರ್‌ರವರ ಪ್ರಾಣವನ್ನು ಉಳಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಬೇರೆ ಯಾರಾದರೂ ಮುಖ್ಯಮಂತ್ರಿಗಳು ಆಗಿದ್ದಲ್ಲಿ

ಕಷ್ಟವಾಗುತ್ತಿತ್ತು. ನಾನು ಯಾರ ಮೇಲೂ ಅಪಾದನೆ ಹೊರಿಸುವುದಕ್ಕೆ ಹೋಗುವುದಿಲ್ಲ. ಬೇರೆಯವರು ಮುಖ್ಯಮಂತ್ರಿಯಾಗಿದ್ದಲ್ಲಿ ಆತುರಪಟ್ಟು ಪೋಲೀಸ್ ಪಡೆಯನ್ನು ಅಥವಾ ಮಿಲಿಟರಿಯನ್ನು ಕಾಡಿಗೆ ಕಾರ್ಯಾಚರಣೆ ನಡೆಸಲು ಕಳುಹಿಸುತ್ತಿದ್ದರು. ಆಗ ಡಾ: ರಾಜ್‌ಕುಮಾರ್‌ರವರ ಪ್ರಾಣ ಉಳಿಯುತ್ತಿರಲಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಡಾ: ರಾಜ್‌ಕುಮಾರ್‌ರವರ ಪ್ರಾಣ ಉಳಿಸುವುದಕ್ಕೋಸ್ಕರ 108 ದಿವಸಗಳ ಕಾಲ ಶಾಂತಿಯುತವಾಗಿ ಕಾದರು. ಈ ಕೆಲಸವನ್ನು ನಾನು ಮಾಡಲೇಬೇಕು ಎಂಬ ಛಲವನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಂಡು, ನಮ್ಮೆಲ್ಲರ ಅಭಿಪ್ರಾಯಗಳನ್ನು ಅವರು ಕೇಂದ್ರೀಕೃತವಾಗಿಟ್ಟುಕೊಂಡು ಉತ್ತಮವಾದಂತಹ ಸಾಧನೆ ಮಾಡಿದ್ದಾರೆ ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಪ್ರಕರಣದಲ್ಲಿ ಸರ್ಕಾರದ ಒಂದೇ ಒಂದು ವೈಫಲ್ಯ ಏನೆಂದರೆ, ಪೋಲೀಸ್ ಅಧಿಕಾರಿಗಳು ಡಾ: ರಾಜ್‌ಕುಮಾರ್‌ರವರು ಕೇಳಲಿ ಬಿಡಲಿ ಅವರಿಗೆ ಸೆಕ್ಯೂರಿಟಿಯನ್ನು ಕೊಡಬೇಕಾಗಿತ್ತು. ಅದು ಪೋಲೀಸ್ ಅಧಿಕಾರಿಗಳ ಕರ್ತವ್ಯವೂ ಸಹಾ ಆಗಿತ್ತು. ಅದನ್ನು ಬಿಟ್ಟು ಡಾ: ರಾಜ್‌ಕುಮಾರ್‌ರವರು ನಮಗೆ ಅವರ ತಮಿಳುನಾಡಿನ ಭೇಟಿಯ ಬಗ್ಗೆ ತಿಳಿಸಿದರಲ್ಲ, ಅವರು ಸೆಕ್ಯೂರಿಟಿ ಪಡೆಯಲು ನಿರಾಕರಿಸಿದ್ದರು ಎಂದು ರಾಜ್ಯದ ಪೋಲೀಸ್ ಇಲಾಖೆ ನೀಡುವ ಉತ್ತರ ಅಷ್ಟೊಂದು ಸಮಂಜಸವಾದುದಲ್ಲ. ಪೋಲೀಸ್ ಇಲಾಖೆ ಗಣ್ಯ ವ್ಯಕ್ತಿಗಳಿಗೆ ರಕ್ಷಣೆ ನೀಡುವ ತಮ್ಮ ಕರ್ತವ್ಯದಲ್ಲಿ ವಿಫಲವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ಕೆಲವು ಎಂ.ಪಿ. ಮತ್ತು ಎಂ.ಎಲ್.ಎ.ಗಳು ಈ ಪ್ರಕರಣದ ಹಿಂದೆ ಇದ್ದಾರೆ ಎಂದು ಹೇಳಿದರು. ಅಂತಹವರು ಯಾರು ಎಂದು ತಿಳಿಯಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾದರೆ ಒಂದು ತನಿಖೆಯನ್ನು ನಡೆಸಿ, ಆ ತನಿಖೆಯನ್ನು ನ್ಯಾಯಾಧೀಶರ ಮುಖಾಂತರವಾದರೂ ಆಗಬಹುದು, ಅಥವಾ ಒಬ್ಬ ನಿವೃತ್ತ ನ್ಯಾಯಾಧೀಶರಿಂದಲಾದರೂ ತನಿಖೆ ಮಾಡಬಹುದು, ಯಾರು, ಶಾಸಕರು? ಯಾರು ಆ ಎಂ.ಪಿ.ಗಳು, ಅವನ ಹಿಂದೆ ಇದ್ದಾರೆ? ಏಕೆ ಇಷ್ಟರಮಟ್ಟಿಗೆ ಆ ವೀರಪ್ಪನ್ ಬೆಳೆದ? ನಾವು ಒಂದು ದೊಡ್ಡ ಯುದ್ಧವನ್ನೇ ಮಾಡಿ ಇನ್ನೊಂದು ದೇಶವನ್ನು ನಡುಗಿಸಿದಂತಹವರು ಒಬ್ಬ ಸಣ್ಣ ವ್ಯಕ್ತಿಯನ್ನು ಹಿಡಿದು ಶಿಕ್ಷೆ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿತ್ತು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಇದರಲ್ಲಿ ನಾವು ಹಿನ್ನಡೆ ಸಾಧಿಸಿದ್ದೇವೆ. ಅದೇ ರೀತಿಯಲ್ಲಿ ವೀರಪ್ಪನ್ ಒಬ್ಬ ಸಾಮಾನ್ಯ ಮನುಷ್ಯನಾದರೂ ಕೂಡ ಅವನಿಗೆ ಅನೇಕ ಜನ ಹಿಂಬಾಲಕರು ಇದ್ದಾರೆ. ಇವತ್ತು ತಮಿಳುನಾಡಿನ ಕೆಲವು ರಾಜಕಾರಣಿಗಳು ತಮ್ಮ ಅನಿಸಿಕೆಗಳನ್ನು, ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಕೆಲವು ಹೇಳಿಕೆಗಳನ್ನು ಕೊಡಿಸಿದರು. ಅದು ಏನೆಂದರೆ ತಿರುವಳ್ಳರ್ ಪ್ರತಿಮೆ ಆಗಬಹುದು, ಕಾವೇರಿ ನೀರು ಬಿಡುವ ವಿಚಾರ ಆಗಿರಬಹುದು, ಅಥವಾ ಅವರ ಭಾಷೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಬೇಕೆನ್ನುವ ಇಚ್ಛೆ ವೀರಪ್ಪನ್‌ಗೆ ಇರಲಿಲ್ಲ. ಅವರ ಇಚ್ಛೆ ಇದ್ದದ್ದು ಏನೆಂದರೆ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಬೇಕು, ಅವನ ಮೇಲೆ ಇರುವ ಎಲ್ಲಾ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಮತ್ತು ಅವನನ್ನು ಫ್ರೀ

ಆಗಿ ಬಿಡಬೇಕು ಎನ್ನುವ ಆಸೆ ಇತ್ತು. ಆದರೆ ತಮಿಳುನಾಡಿನ ಅನೇಕ ರಾಜಕಾರಣಿಗಳು, ತಮ್ಮ ಒಂದು ಅನಿಸಿಕೆಗಳನ್ನು ಈಡೇರಿಸಿಕೊಳ್ಳಲು ವೀರಪ್ಪನ್ ಕಡೆಯಿಂದ ಅನೇಕ ರೀತಿಯ ಹೇಳಿಕೆಗಳನ್ನು ಕೊಡಿಸಿದರು. ಈ ಒಂದು ಹಿನ್ನೆಲೆಯಲ್ಲಿ ಅನೇಕ ಸಲ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿರೋಧಪಕ್ಷದ ನಾಯಕರನ್ನು ಕರೆದು ಅಲ್ಲಿ ಅವರ ಸಲಹೆಗಳನ್ನು ಪಡೆದುಕೊಂಡು ನಕ್ಕೀರನ್ ಗೋಪಾಲ್ ಆಗಬಹುದು,ಅಥವಾ ಇನ್ನೂ ಅನೇಕ ಜನರನ್ನು ಸಂಧಾನಕ್ಕೆ ಕಳುಹಿಸುವ ವಿಚಾರದಲ್ಲಿ ಸೌಮ್ಯವಾಗಿ ನಡೆದು ಅವರ ಮನಸ್ಸನ್ನು ಗೆದ್ದುಕೊಂಡು ಇವತ್ತು ಡಾಕ್ಟರ್ ರಾಜಕುಮಾರ್ ಅವರ ಪ್ರಾಣವನ್ನು ಉಳಿಸುವುದಕ್ಕೆ ಎಲ್ಲಾ ರೀತಿಯ ಸಾಹಸವನ್ನು ಮಾಡಿದ್ದಾರೆ. ನಾನು ನಮ್ಮ ಪಕ್ಷದ ವತಿಯಿಂದ ಅವರನ್ನು ಶ್ಲಾಘಿಸುತ್ತೇನೆ. ಆದರೆ ಸರ್ಕಾರ ಇನ್ನು ಮುಂದೆ ಗಣ್ಯ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆಯನ್ನು ನೀಡಬೇಕಾಗುತ್ತದೆ. ಇವತ್ತು ಉದಾಹರಣೆಗೆ ನಾವು ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯಾದಾಗಲೂ ಅಷ್ಟೇ, ಸೆಕ್ಯೂರಿಟಿ ಪ್ರಾಬ್ಲಂ ಬಿಟ್ಟರೆ ಬೇರೆ ಯಾವ ಪ್ರಾಬ್ಲಂ ಇರಲಿಲ್ಲ. ಪೋಲೀಸ್ ಇಲಾಖೆಯ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಮೊದಲೇ ಈ ವಿಷಯವನ್ನು ತಿಳಿದುಕೊಂಡು ಕಂಟ್ರೋಲ್ ಮಾಡಬಹುದಿತ್ತು. ಆದರೆ ಅವರು ಆ ಕೆಲಸ ಮಾಡಲಿಲ್ಲ. ಅದೇ ರೀತಿಯಲ್ಲಿ ಶ್ರೀರಾಜೀವ್ ಗಾಂಧಿಯವರ ಹತ್ಯೆಯಾಯಿತು. ಅವರು ಮಹಾತ್ಮರು. ಅವರು ಪ್ರಧಾನ ಮಂತ್ರಿಗಳಾಗಿದ್ದವರು. ಅವರ ಹತ್ಯೆಯಾಗಿದ್ದು ಪೋಲೀಸ್ ಇಲಾಖೆಯ ನಿರ್ಲಕ್ಷತೆಯಿಂದ ಆದದ್ದೇ ಹೊರತು ರಾಜಕಾರಣಿಗಳಿಂದ ಅಲ್ಲ. ಆದ್ದರಿಂದ ಸರ್ಕಾರ ಇನ್ನು ಮುಂದೆ ಇಂತಹ ಅಕ್ರಮ ಅನ್ಯಾಯಗಳಿಗೆ ಸರ್ಕಾರ ಬದ್ಧ ಅಲ್ಲ, ಸರ್ಕಾರದ ಅಧಿಕಾರ ಬದ್ಧ ಅಲ್ಲ, ಸಮಾಜವೇ ಬದ್ಧ ಎನ್ನುವ ಮಾತನ್ನು ಹೇಳಿ, ನಿಜವಾಗಿಯೂ ನಾವೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಇಂತಹ ಅನಾಹುತಗಳು ಆಗುವುದಿಲ್ಲ. ನಮ್ಮ ನಮ್ಮಲ್ಲಿ ರಾಜಕೀಯ ದ್ವೇಷಗಳು, ನಮ್ಮ ಸರ್ಕಾರ ಅಧಿಕಾರಕ್ಕೆ ಬರಬೇಕು, ನಮ್ಮ ಪಕ್ಷ ಅಧಿಕಾರಕ್ಕೆ ಬರಬೇಕು, ಅನೇಕ ಜನರು ಹೇಳುತ್ತಿದ್ದರು ಈ ಒಂದು ಘಟನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕಾಗುತ್ತದೆ, ಅವರು ಅಧಿಕಾರದಲ್ಲಿ ಇರುವಂತೆ ಇಲ್ಲ ಎಂದು ಮಾತನಾಡುತ್ತಿದ್ದರು. ಆದರೆ, ಕರ್ನಾಟಕ ಮಾತೆಯ ಆಶೀರ್ವಾದ ಈ ಸರ್ಕಾರಕ್ಕೆ ಇತ್ತು, ಆದ್ದರಿಂದ, ಡಾಕ್ಟರ್ ರಾಜ್‌ಕುಮಾರ್ ಅವರಿಗೆ ಪರಮಾತ್ಮ ಅನ್ಯಾಯ ಮಾಡಲಿಲ್ಲ. ಈ ಮಧ್ಯೆ ಇನ್ನೂ ಕೆಲವು ಘಟನೆಗಳಿಗೆ ಪೂರಕವಾಗಿ ತಮಿಳುನಾಡಿನ ಅನೇಕ ರಾಜಕಾರಣಿಗಳು ಇಲ್ಲಿಗೆ ಬಂದು ಅನೇಕ ವಿಷಯಗಳನ್ನು ತಿಳಿಸಿ ಅಲ್ಲಿಂದ ವಿಷಯಗಳನ್ನು ತಿಳಿದು ಅವರು ಲಾಭ ಮಾಡಿಕೊಂಡರು. ಇಂತಹ ಸಂದರ್ಭದಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ, ಮತ್ತು ರಾಜ್‌ಕುಮಾರ್ ಪ್ರಕರಣದಲ್ಲಿ ವೀರಪ್ಪನ್‌ಗೆ ಯಾರು ಶಾಸಕರು ಮತ್ತು ಎಂ.ಪಿ.ಗಳು ಸಹಕಾರ ಮಾಡಿದ್ದಾರೆ ಅದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಿಸಿ ರಾಜ್ಯದ ಜನತೆಗೆ ಆ ವಿಷಯವನ್ನು ತಿಳಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸಿ. ಗುರುಸ್ವಾಮಿಯವರು ಮಾತನಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಉಪಾಧ್ಯಕ್ಷರೇ, ನಾವು ಬೆಳಿಗ್ಗೆ 10-00 ಗಂಟೆಗೆ ಬಂದಿದ್ದೇವೆ, ಈಗಾಗಲೇ 6 ಗಂಟೆ 45 ನಿಮಿಷಗಳು ಆಗಿದೆ, ತಾವು ರಾತ್ರಿ ಎಲ್ಲಾ ಕುಳಿತುಕೊಳ್ಳಿ ಅಂದರೆ ಹೇಗೆ?

ಉಪಾಧ್ಯಕ್ಷರು :— ಇವತ್ತು ಇನ್ನೂ ಸ್ವಲ್ಪ ಸಮಯ ಕುಳಿತುಕೊಂಡು ಇವತ್ತು ಚರ್ಚೆ ಮುಗಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾವು ಒಣ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ನಾವು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಬೇಕಾಗುತ್ತದೆ. ನಾಳೆ ಚರ್ಚೆ ಮುಂದುವರಿಸೋಣ. ಇದರ ಮೇಲೆ ತಮ್ಮ ಇಷ್ಟ.

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ರಾಜ್‌ಕುಮಾರ್ ಅವರ ಬಿಡುಗಡೆ ಆಗಲಿ, ಆಮೇಲೆ ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆ ಮಾಡೋಣ ಎಂದು ಹೇಳಿದ್ದರು. ತಾವು ಒಂದೇ ದಿವಸದಲ್ಲಿ ಮುಗಿಸೋಣ ಅಂದರೆ ಹೇಗೆ?

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅಧ್ಯಕ್ಷರೇ, ಸುದೀರ್ಘ ಚರ್ಚೆ ಅಂದರೆ 224 ಜನ ಶಾಸಕರು ಮಾತನಾಡಬೇಕೆಂದು ಅರ್ಥವೇ? ಇವತ್ತು ಮಾತನಾಡುವವರೆಲ್ಲಾ ಮಾತನಾಡಲಿ ನಾಳೆ ನಾನು 15 ನಿಮಿಷ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

+ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಬಹಳ ಗಂಭೀರವಾಗಿ ಈ ಒಂದು ಚರ್ಚೆ ನಡೆಯುತ್ತಿದೆ. ಡಾಕ್ಟರ್ ರಾಜಕುಮಾರ್ ಅವರ ಅಪಹರಣ ಏನು ಆಯಿತು, ಅವರು ಸುಮಾರು 108 ದಿವಸಗಳ ಕಾಲ ವೀರಪ್ಪನ್ ಮತ್ತು ಅವನ ಸಹಚರರ ಜೊತೆಯಲ್ಲಿ ಇದ್ದರು ಮತ್ತು ಅವರ ಬಿಡುಗಡೆಯ ವಿಚಾರದಲ್ಲಿ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ, ವಿರೋಧಪಕ್ಷದವರು ಯಾವ ರೀತಿ ಸಹಕಾರ ನೀಡಿದರು ಎನ್ನುವುದನ್ನು ನಾವು ಚರ್ಚೆ ಮಾಡುವಂತಹ ಒಂದು ಸಂದರ್ಭ ಇದೆ. ಈ ಒಂದು ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ 13 ಪುಟಗಳ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿರುವುದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಮುಖಾಂತರ ಈ ನಾಡಿನ ಜನಗಳಿಗೆ ಯಾವ ವಿಚಾರದಲ್ಲಿ ಸ್ಪಷ್ಟೀಕರಣವನ್ನು ಕೊಡಬೇಕಾಗಿತ್ತೋ ಆ ಸ್ಪಷ್ಟೀಕರಣವನ್ನು ಕೊಡುವುದರಲ್ಲಿ ವಿಫಲರಾಗಿದ್ದಾರೆ ಎನ್ನುವ ಮಾತನ್ನು ನಾನು ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಡಾಕ್ಟರ್ ರಾಜಕುಮಾರ್ ಅವರ ಅಪಹರಣವಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಬಹಳ ಚುರುಕಾಗಿ ಕಾರ್ಯಪ್ರವೃತ್ತರಾದರು. ತಕ್ಷಣವೇ ಅವರು ತಮಿಳುನಾಡಿಗೆ ಹೋಗಿ, ಅಲ್ಲಿನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಹಿರಿಯ ಅಧಿಕಾರಿಗಳ ಜೊತೆ, ಮತ್ತು ಡಾಕ್ಟರ್ ರಾಜಕುಮಾರ್ ಅವರ ಕುಟುಂಬದವರ ಜೊತೆ ಹೋಗಿ ಚರ್ಚೆ ಮಾಡಿ ಡಾಕ್ಟರ್ ರಾಜಕುಮಾರ್ ಅವರ ಬಿಡುಗಡೆಯನ್ನು ಸಂಧಾನದ ಮೂಲಕವೇ ಮಾಡತಕ್ಕಂಥಾದ್ದು ಸೂಕ್ತ ಎನ್ನತಕ್ಕಂಥಾ ಒಂದು ತೀರ್ಮಾನಕ್ಕೆ ಬಂದು ಶ್ರೀಗೋಪಾಲ್ ಅವರನ್ನು ಸಂಧಾನಕ್ಕೆ ಕಳುಹಿಸಿ ಕೊಡುವಂತಹ ಒಂದು ಕಾರ್ಯವನ್ನು ಹಮ್ಮಿಕ್ಕೊಂಡರು. ಇದಾದನಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಈ ನಾಡಿನ ಪ್ರತಿಯೊಬ್ಬರೂ ಸಹ ವಿರೋಧಪಕ್ಷದ ನಾಯಕರಾದಿಯಾಗಿ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದಾರೆ. ಯಾರೂ ಕೂಡ ಅವರನ್ನು ಟೀಕೆ ಮಾಡಲಿಲ್ಲ. ಈ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರತಕ್ಕಂಥವರು ಬಹುಶಃ ಕೃಷ್ಣ ಅವರು ಆಗಿರಬಹುದು ಅಥವಾ ಬೇರೆ ಯಾರೇ ಆಗಿರಬಹುದು ಡಾಕ್ಟರ್ ರಾಜಕುಮಾರ್ ಅಪಹರಣವಾದಂತಹ ಸಂದರ್ಭದಲ್ಲಿ ಬಹಳ ಜವಾಬ್ದಾರಿಯಿಂದ ವರ್ತನೆ ಮಾಡತಕ್ಕಂಥಾದ್ದು ಅವರ ಕರ್ತವ್ಯ. ಆ ಒಂದು ಕರ್ತವ್ಯವನ್ನು ಅವರು ಮಾಡಿದ್ದಾರೆ ಎನ್ನುವಂತಹ ಒಂದು ಭಾವನೆಯನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಆದರೆ ಈ ನಾಡಿನ ಸಂಘ ಸಂಸ್ಥೆಯವರು, ವಿರೋಧಪಕ್ಷದವರು ಮುಖ್ಯಮಂತ್ರಿಗಳ ಮೇಲೆ ಒಂದು ವಿಶ್ವಾಸವನ್ನು ಇಟ್ಟುಕೊಂಡಿದ್ದರು, ಆ ವಿಶ್ವಾಸಕ್ಕೆ ತಕ್ಕಂತೆ ಈ ಉತ್ತರದಲ್ಲಿ ಬರಲಿಲ್ಲ. ಅವರು ಕೆಲವು ವಿಚಾರಗಳಲ್ಲಿ ಸ್ಪಷ್ಟೀಕರಣ ನೀಡಬೇಕಾಗಿತ್ತು. ಆತನ

6.50 ಪಿಎಂ .

ಕಂಡೀಶನ್‌ಗಳನ್ನು ಫುಲ್‌ಫಿಲ್ ಮಾಡುವುದರಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಮಾತ್ರ ಹೇಳಿದ್ದಾರೆಯೇ ಹೊರತು ಇನ್ನು ಅನೇಕ ಗಂಭೀರ ವಿಚಾರಗಳ ಬಗ್ಗೆ ವಿವರಣೆ ಕೊಡುವುದರಲ್ಲಿ ವಿಫಲರಾಗಿದ್ದಾರೆಂದು ಹೇಳಬಯಸುತ್ತೇನೆ. ಈ ವಿಷಯಗಳೆಂದರೆ ಸಂಧಾನಕಾರರು ಯಾರು? ಕರ್ನಾಟಕ ಸರ್ಕಾರದವರು ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸಿದರೆ ಅಥವಾ ತಮಿಳುನಾಡು ಸರ್ಕಾರ ಬಿಡುಗಡೆ ಮಾಡಿಸಿತೆ? ಅಥವಾ ಗೋಪಾಲ್ ಮತ್ತು ಇತರ ಸಂಧಾನಕಾರರು ಬಿಡುಗಡೆ ಮಾಡಿಸಿದರೆ? ಅಥವಾ ಕಡೆಯ ಸಂಧಾನದಲ್ಲಿ ನೆಡುಮಾರನ್‌ರವರು ಬಿಡುಗಡೆ ಮಾಡಿಸಿದರೆ? ಎಂಬ ಬಗ್ಗೆ ಜನತೆಗೆ ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಸರ್ಕಾರವೇನೋ ನೆಡುಮಾರನ್‌ರವರನ್ನು ಕಳುಹಿಸಿಲ್ಲವೆಂದು ಹೇಳಿದೆ, ರಾಜ್‌ಕುಮಾರ್‌ರವರ ಅಪಹರಣ ತಮಿಳುನಾಡಿನಲ್ಲಿ ಆದ್ದರಿಂದ ಸಂಧಾನಕಾರರನ್ನು ಕಳುಹಿಸುವುದು ತಮಿಳುನಾಡು ಸರ್ಕಾರದ ಜವಾಬ್ದಾರಿಯಾಗಿತ್ತು ಎಂದು ಹೇಳಿದೆ. ನಾನು ಹೇಳುವುದೇನೆಂದರೆ, ನೆಡುಮಾರನ್‌ರವರನ್ನು ಕರುಣಾನಿಧಿಯವರು ಸಂಧಾನಕಾರರಾಗಿ ಕಾಡಿಗೆ ಕಳುಹಿಸದೇ ಹೋಗಿದ್ದರೆ ಬಿಡುಗಡೆ ಕಷ್ಟವಾಗುತ್ತಿತ್ತು. ರಾಜ್‌ಕುಮಾರ್ ಬಿಡುಗಡೆ ಎರಡ್ನೂರು ದಿನಗಳ

ಹಿಂದೆ ಅವರ ಮಕ್ಕಳುಗಳು ನೆಡುಮಾರನ್‌ರವರನ್ನು ಭೇಟಿ ಮಾಡಿಯಾದ ಮೇಲೆ ನೆಡುಮಾರನ್‌ರವರು ಕಾಡಿಗೆ ಹೋಗಿದ್ದಾರೆ. ರಾಜ್‌ಕುಮಾರ್‌ರವರ ಅಪಹರಣವಾದ ನಂತರದ ದಿನವೇ ಮುಖ್ಯಮಂತ್ರಿಗಳು ರಾಜ್ ಕುಟುಂಬದವರೊಡನೆ ಮತ್ತು ಅಧಿಕಾರಿಗಳೊಡನೆ ಚರ್ಚಿಸಿ ಚೆನ್ನೈಗೆ ಹೋಗಿರುವುದು ಸಂತೋಷಕರವಾದ ಬೆಳವಣಿಗೆಯೇ ಆಗಿತ್ತು. ಆದರೆ, ರಾಜ್‌ಕುಮಾರ್‌ರವರ ಬಿಡುಗಡೆಯಾದ ಮೇಲೆ ತಾವು ಚೆನ್ನೈಗಾಗಲಿ ಅಥವಾ ಈರೋಡಿಗಾಗಲಿ ಅವರನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ಹೋಗದಿರುವುದೇ ನಮಗೆ ಸಂದೇಹವಾಗಿದೆ. ಇದಕ್ಕೆ ಕಾರಣವೇನು ಎಂಬ ಬಗ್ಗೆ ಸಭಾನಾಯಕರು ಹೇಳಬೇಕು. ರಾಜ್‌ಕುಮಾರ್ ಬಿಡಿಸುವಲ್ಲಿ ಇದ್ದ ಕಾಳಜಿ ಬಿಡುಗಡೆಯಾದ ಮೇಲೆ ಅವರನ್ನು ಬರಮಾಡಿಕೊಳ್ಳಲು ಮುಖ್ಯಮಂತ್ರಿಗಳು ಏಕೆ ಹೋಗಲಿಲ್ಲ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ರಾಜ್ ಕುಟುಂಬದವರೊಡನೆ ಚರ್ಚಿಸಿಯೇ ನೀವು ಸಂಧಾನದ ಪ್ರಯತ್ನವನ್ನು ಮಾಡಲು ತೀರ್ಮಾನ ತೆಗೆದುಕೊಂಡಿದ್ದರೂ ಕೂಡ ರಾಜ್ ಕುಟುಂಬದವರು ಕರ್ನಾಟಕ ಬಂದಾಗ ಕರೆದೊಯ್ದಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸದನಕ್ಕೆ ಸ್ಪಷ್ಟೀಕರಣ ಕೊಡಬೇಕು. ಇನ್ನು ರಾಜ್ ಅಪಹರಣಕ್ಕೆ ಸಂಬಂಧಪಟ್ಟಂತೆ ಎಲ್.ಟಿ.ಟಿ.ಇ.ರವರ ಕೈವಾಡ ವೀರಪ್ಪನ್ ಮೇಲೆ ಪ್ರಭಾವ ಇತ್ತೇ ಅಥವಾ ತಮಿಳು ಉಗ್ರಗಾಮಿಗಳ ಕೈವಾಡವಿತ್ತೇ ಎಂಬ ಬಗ್ಗೆ ಕೂಡ ಸದನಕ್ಕೆ ಸ್ಪಷ್ಟೀಕರಣ ಕೊಡಬೇಕಾಗಿತ್ತು. ಈ ಅಪಹರಣದಲ್ಲಿ ಎಲ್.ಟಿ.ಟಿ.ಇ. ಮತ್ತು ತಮಿಳು ಉಗ್ರಗಾಮಿಗಳ ಕೈವಾಡವಿದೆ ಎಂದು ಪತ್ರಿಕಾ ಮಾಧ್ಯಮಗಳಲ್ಲಿ ಸುದ್ದಿ ಬರುತ್ತಲೇ ಇದೆ. ವೀರಪ್ಪನ್ ಇತಿಹಾಸವನ್ನು ನಾವು ನೋಡಿದರೆ ಯಾವತ್ತೂ ಕೂಡ ಇಂಥ ಒಂದು ಬೇಡಿಕೆಗಳು ಇರಲೇ ಇಲ್ಲ. ಹಿಂದೆ ವೀರಪ್ಪನ್ ಗಂಧದ ಮರ ಕಳ್ಳ ಸಾಗಾಣಿಕೆಗೆ, ಕಾಡಾನೆಗಳ ವಿಚಾರದಲ್ಲಿ ಅಥವಾ ಅವರ ಕಡೆಯವರನ್ನು ಬಿಡುಗಡೆ ಮಾಡಿಸಲು ಹೋರಾಟ ಮಾಡುತ್ತಿದ್ದನೇ ಹೊರತು ಎಲ್.ಟಿ.ಟಿ.ಇ. ವಿಚಾರದಲ್ಲಾಗಲಿ ಅಥವಾ ತಮಿಳು ಉಗ್ರವಾದಿಗಳ ವಿಚಾರದಲ್ಲಾಗಲಿ ಬೇಡಿಕೆ ಇಟ್ಟಿದ್ದ ಉದಾಹರಣೆಗಳು ಹಿಂದೆ ಇಲ್ಲ. ನನ್ನ ಕ್ಷೇತ್ರದಿಂದ 8 ಕಿ.ಮೀ. ದೂರದಲ್ಲಿ ರಾಜ್‌ಕುಮಾರ್ ಅಪಹರಣವಾಗಿರುವುದರಿಂದ ಆ ಕ್ಷೇತ್ರದ ವಿದ್ಯಮಾನಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ನಾನು ಹಲವಾರು ಟೀಕೆಗಳನ್ನು ಅನುಭವಿಸಬೇಕಾಯಿತು ಎಂದು ಹೇಳಿದ್ದಾರೆ. ಅದನ್ನು ಕೇಳಿ ನನಗೆ ಅತ್ಯಂತ ನೋವಾಯಿತು. ಈ ಮುಖ್ಯಮಂತ್ರಿಗೆ ಕೊಟ್ಟಷ್ಟು ಸಹಕಾರವನ್ನು ಯಾವ ಮುಖ್ಯಮಂತ್ರಿಗೂ ವಿರೋಧ ಪಕ್ಷದವರು, ಸಂಘಸಂಸ್ಥೆಗಳವರು ಕೊಟ್ಟಿಲ್ಲವೆಂದು ನಾನು ಹೇಳಬಯಸುತ್ತೇನೆ. ನಾಲ್ಕು ಕ್ಯಾಸೆಟ್‌ಗಳಲ್ಲಿ ಏನು ವಿಷಯ ಬಂದಿತ್ತು ಎಂಬ ಬಗ್ಗೆ ಕೂಡ ಹೇಳಬೇಕಾಗಿತ್ತು. ಅದರಲ್ಲಿ ಮೊದಲನೆಯದರಲ್ಲಿ ಸಂಧಾನಕಾರರನ್ನು ಕಳುಹಿಸಿ ಎಂದು ಮಾತ್ರ ಇತ್ತು. ಅನಂತರ ಗೋಪಾಲ್ ಹೋಗಿ ಮೂರು ಬಾರಿ ಮೂರು ಕ್ಯಾಸೆಟ್‌ಗಳನ್ನು ಏನು ತಂದರು ಅದರಲ್ಲಿ ಏನು ವಿಷಯವಿತ್ತು

ಎಂಬ ಬಗ್ಗೆ ಹೇಳಬೇಕಾಗಿತ್ತು. ಒಂದು ವೇಳೆ ಸೀಕ್ರೆಸಿ ಕಾಪಾಡಿಕೊಳ್ಳಬೇಕೆಂದಿದ್ದರೆ ಅದರ ಬಗ್ಗೆಯಾದರೂ ಹೇಳಿಕೆಯಲ್ಲಿ ತಿಳಿಸಬೇಕಾಗಿತ್ತು. ಆದರೆ ಅದನ್ನು ಕೂಡ ಹೇಳಲಿಲ್ಲ. ಗೋಪಾಲ್‌ರವರನ್ನು ಸಂಧಾನಕಾರರಾಗಿ ನೀವು ಕಳುಹಿಸಿದ ಮೇಲೆ ಅವರಿಂದ ಏಕೆ ರಾಜ್‌ಕುಮಾರ್ ಬಿಡುಗಡೆ ಮಾಡಿಸಲು ಆಗಲಿಲ್ಲವೆಂಬ ಬಗ್ಗೆ ಕೂಡ ಹೇಳಬೇಕಾಗಿತ್ತು. ಆದರೆ, ಅದನ್ನು ಕೂಡ ಹೇಳಿಲ್ಲ. ಕಡೆಯ ಬಾರಿ ಸಂಧಾನದಲ್ಲಿ ಗೋಪಾಲ್‌ರವರು ಹೋಗಲೇ ಇಲ್ಲ. ನೆಡುಮಾರನ್ ಹೋಗಿದ್ದಾರೆ. ರಾಜ್‌ಕುಮಾರ್‌ರವರು ಬಿಡುಗಡೆಯಾಗಿ ಬಂದಮೇಲೆ ರಾಜ್‌ಕುಮಾರ್‌ರವರು ನೆಡುಮಾರನ್‌ರವರನ್ನು ರಾಷ್ಟ್ರಪಿತ ರಾಧಾಕೃಷ್ಣನ್‌ರವರಿಗೆ ಹೋಲಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಆದರೆ, ಇಷ್ಟೇ ಒತ್ತನ್ನು ಮುಖ್ಯಮಂತ್ರಿಗಳಿಗೆ ಅವರು ಕೊಡಲಿಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಾಗಪ್ಪ ಮೊದಲು ಬಂದರು. ಇವರು ನಿಜವಾಗಿ ತಪ್ಪಿಸಿಕೊಂಡು ಬಂದರೆ ಅಥವಾ ವೀರಪ್ಪನ್ ಬಿಟ್ಟು ಕಳುಹಿಸಿದನೆ ಎಂಬ ಬಗ್ಗೆ ಜನರಲ್ಲಿ ಇನ್ನೂ ಗೊಂದಲವಿದೆ. ಇದರ ಬಗ್ಗೆ ಕೂಡ ಹೇಳಿಕೆಯಲ್ಲಿ ಹೇಳಲಿಲ್ಲವಾದ್ದರಿಂದ ಅದರ ಬಗ್ಗೆ ಈಗಲಾದರೂ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರಾಜ್‌ಕುಮಾರ್‌ರವರು 108 ದಿವಸಗಳ ಕಾಲ ಯಾವ ರೀತಿಯಲ್ಲಿ ಜೀವನ ನಡೆಸಿದರು, ಏನೇನು ಯಾತನೆಗಳನ್ನು ಅವರು ಅನುಭವಿಸಿದರು, ವೀರಪ್ಪನ್ ಕಾರ್ಯಾಚರಣೆ ಹೇಗಿದೆ, ಎಂಬ ಬಗ್ಗೆ ರಾಜ್‌ಕುಮಾರ್‌ರವರಿಂದ ತಿಳಿದುಕೊಂಡಿರುತ್ತೀರಿ ಎಂದು ಭಾವಿಸುತ್ತೇನೆ. ಆ ವಿಷಯಗಳನ್ನೂ ಕೂಡ ಸದನದಲ್ಲಿ ನೀವು ಹೇಳಬಹುದಾಗಿತ್ತು. ಆದರೆ, ಅದನ್ನು ತಾವು ಹೇಳಿಕೆಯಲ್ಲಿ ಹೇಳಿಯೇ ಇಲ್ಲ. ಇನ್ನು ತಮಿಳುನಾಡಿನ ರಾಜಕೀಯ ಪಕ್ಷಗಳ ಮುಖಂಡರು ಕೊಡುವ ಹೇಳಿಕೆಯನ್ನು ಗಮನಿಸಿದರೆ ರಾಜಕೀಯ ವ್ಯಕ್ತಿಗಳ ಪ್ರಭಾವ ಬಹುಶಃ ಇದರ ಹಿನ್ನೆಲೆಯಲ್ಲಿ ಇದೆಯೇನೋ ಎನ್ನುವ ಅನುಮಾನ ನಮಗೆ ಬರುತ್ತದೆ. ಅದರ ಬಗ್ಗೆ ಕೂಡ ಸ್ಪಷ್ಟೀಕರಣವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಪಾರ್ವತಮ್ಮನವರು ಆಸ್ಪತ್ರೆ ಸೇರಿದಾಗ ಅವರ ಆರೋಗ್ಯದ ವಿಚಾರದಲ್ಲಿ ತಾವು ಡೌಟ್ ಪಟ್ಟಿದ್ದೀರಿ ಎಂಬ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಗಳು ಬಂದುಬಿಟ್ಟವು. ವೈದ್ಯರಿಂದ ಪಾರ್ವತಮ್ಮನವರ ಆರೋಗ್ಯದ ಬಗ್ಗೆ ವರದಿ ತರಿಸಿಕೊಂಡಿರಿ ಎಂಬ ಬಗ್ಗೆ ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಇದು ಸತ್ಯವೇ ಅಥವಾ ಸುಳ್ಳೇ ಎಂಬ ಬಗ್ಗೆ ತಾವು ಹೇಳಿಕೆಯಲ್ಲಿ ಹೇಳಿಯೇ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಸದಸ್ಯರು ಈಗ ಏನು ಹೇಳುತ್ತಿದ್ದಾರೆ ಅದರಲ್ಲಿ ಲವಲೇಶವಾದಂಥ ಸತ್ಯಾಂಶವು ಇಲ್ಲ. ಒಂದು ಸಂಸಾರ ದಾರುಣಾವಸ್ಥೆಯಲ್ಲಿರತಕ್ಕಂಥ ಕಾಲದಲ್ಲಿ ಇಂಥ ಕುಚೋದ್ಯಕರವಾದ ಬರವಣಿಗೆಗಳನ್ನು ಬರೆಯುವುದರ ಮೂಲಕ ಮತ್ತಷ್ಟು ವಾತಾವರಣವನ್ನು ಕಲುಷಿತಗೊಳಿಸತಕ್ಕಂಥ ಒಂದು ಹೀನಾಯಕರವಾದ ಕೃತ್ಯ ಅದು.

ಶ್ರೀ ಸಿ. ಗುರುಸ್ವಾಮಿ :— ರಾಜ್‌ಕುಮಾರ್‌ರವರ ಅಪಹರಣದ ನಂತರ ರಾಜ್ ಕುಮಾರ್ ತಮಿಳುನಾಡಿನ ಅರಣ್ಯದಲ್ಲಿದ್ದರೆ ಅಥವಾ ಕರ್ನಾಟಕದ ಅರಣ್ಯದಲ್ಲಿದ್ದರೆ ಎಂಬ ಬಗ್ಗೆ ಕೂಡ ಮುಖ್ಯಮಂತ್ರಿಗಳು ತಿಳಿಸಬೇಕು. ಯಾರು ಅರಕೇಶ್ ಎನ್ನುವ ಒಬ್ಬ ಅಧಿಕಾರಿ ವರದಿ ಕೊಟ್ಟಿದ್ದರು, ಆ ವರದಿಯಲ್ಲಿ ಏನಿದೆ ಎಂದು ತಿಳಿಸಬೇಕು. ಮತ್ತು ಹಿಂದಿನ ಸರ್ಕಾರ ಇದ್ದಾಗ ಟಾಸ್ಕ್‌ಫೋರ್ಸ್, ಬಿಎಸ್‌ಎಫ್ ಎಲ್ಲವೂ ಕೂಡ ಕಾರ್ಯಾಚರಣೆ ಮಾಡಿತ್ತು. ಅದರಲ್ಲಿ ಏನಾದರೂ ಲೋಪವಾಯಿತೆ? ಅಥವಾ ಪ್ರೋಗ್ರೆಸ್ ಏನಾದರೂ ಆಗಿತ್ತೇ? ಹಾಗೂ ಕರ್ನಾಟಕ ಮತ್ತು ತಮಿಳುನಾಡು ಜಂಟಿಯಾಗಿ ಟಾಸ್ಕ್‌ಫೋರ್ಸ್ ಮಾಡಿದಾಗ ಇವರಲ್ಲಿ ಕೋ-ಆರ್ಡಿನೇಷನ್ ಇತ್ತೇ? ಅಥವಾ ನಾನ್ ಕೋ-ಆರ್ಡಿನೇಷನ್ ಇತ್ತೇ? ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಆಗಲಿಲ್ಲವೇ? ಈ ಎಲ್ಲಾ ವಿಚಾರವನ್ನು ತಾವು ಸದನಕ್ಕೆ ತಿಳಿಸಬೇಕು. ತಾವು ಇದರ ಬಗ್ಗೆ ತಿಳಿಸಿದರೆ ಏನು ಲೋಪವಾಗಿದೆ ಎಂದು ಡಿಸ್ಕಸ್ ಮಾಡಿ ಮುಂದೆ ನಾವು ಹೇಗೆ ಕಾರ್ಯೋನ್ಮುಖರಾಗಬೇಕು ಎನ್ನುವ ದಿಕ್ಕಿನಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುತ್ತಾ, ಮಾನ್ಯ ಸಭಾನಾಯಕರು ಇದಕ್ಕೆ ಉತ್ತರ ಕೊಡಬೇಕೆಂದು ಹೇಳಿ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ :— ಮಾನ್ಯ ಉಪಾಧ್ಯಕ್ಷರೆ, ಎಲ್ಲರೂ ಮಾತನಾಡಲಿ, ಅವರು ಮಾತನಾಡುವುದಕ್ಕೆ ಯಾರೂ ಬೇಡ ಎನ್ನುವುದಿಲ್ಲ. ಆದರೆ ಎಲ್ಲಾ ಸದಸ್ಯರು ಮಾತನಾಡುವಾಗ ರಿಪೀಟ್ ಮಾಡುವುದು ಜಾಸ್ತಿಯಾಗಿದೆ. ಹೇಳಿದ್ದನ್ನೇ ಹೇಳುವ ಪರಿಪಾಠ ಕಡಿಮೆಯಾದರೆ ಬೇಗ ಮುಗಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ಏನೇನು ಹೇಳಬೇಕು ಎಲ್ಲಾ ಹೇಳಿದ್ದಾರೆ. ಏನಾದರೂ ಕ್ಲಾರಿಫಿಕೇಷನ್ಸ್ ಇದ್ದರೆ ಕೇಳಲಿ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಕೇಳಿದ ರೀತಿಯಲ್ಲಿ ಕ್ಲಾರಿಫಿಕೇಷನ್ ಕೇಳಿದರೆ ಒಳ್ಳೆಯದು ಎಂದು ನನ್ನ ಭಾವನೆ.

\+ ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಉಪಾಧ್ಯಕ್ಷರೆ, ಡಾ: ರಾಜ್‌ಕುಮಾರ್ 108 ದಿವಸಗಳ ಕಾಡಿನ ವನವಾಸದಿಂದ ಸುರಕ್ಷಿತವಾಗಿ, ಆರೋಗ್ಯವಾಗಿ ಮತ್ತೆ ನಾಡಿಗೆ ಮರಳಿ ಬಂದಿದ್ದು ನಮ್ಮ ನಾಡಿನ ಎಲ್ಲಾ ಜನರಿಗೂ ಸಂತೋಷ ತಂದಿರುವಂತಹ ವಿಚಾರ. ಅದೇ ರೀತಿ ನಮ್ಮ ಭಾಗದ ಪಕ್ಕದ ಜಿಲ್ಲೆಯಾದಂತಹ ಚಾಮರಾಜನಗರದ ಜನತೆಗೂ ಕೂಡ ಬಹಳ ವಿಶೇಷವಾಗಿ ಹೇಳಬೇಕಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅವರ ಅಪಹರಣ ಆಗಿದ್ದು ನಮ್ಮ ಜಿಲ್ಲೆಯ ಪಕ್ಕದಲ್ಲಿ ಇರತಕ್ಕಂಥ, ಕೆಲವೇ ದೂರದ ಪ್ರದೇಶ ದೊಡ್ಡ ಗಾಜನೂರಿನಲ್ಲಿ ಆದದ್ದು ಹಾಗಾಗಿ ಹತ್ತಿರದಲ್ಲಿ ಇರತಕ್ಕಂಥ ನಮ್ಮ ಜನರಿಗೂ ಈ ಒಂದು ವಿಚಾರದಲ್ಲಿ ಹೆಚ್ಚಿನ ಕಾತುರತೆ, ಆಸಕ್ತಿ ಮತ್ತು ಯಾವಾಗ ಡಾ: ರಾಜ್ ಮರಳಿ ಬರುತ್ತಾರೆ ಎನ್ನುವುದಿತ್ತು. ಅದಕ್ಕಿಂತ

ಹೆಚ್ಚಾಗಿ ಕಾವೇರಿ ನೀರಿನ ಒಂದು ವಿಚಾರದಲ್ಲಿ 1992ರಲ್ಲಿ ಆದಂತಹ ಘಟನೆ ಜನರ ಮನಸ್ಸಿನಲ್ಲಿ ಮರೆಮಾಚದೆ ಇರುವಾಗ ಆ ಬಗ್ಗೆ ಕೂಡ ಒಂದು ಭಯದ ವಾತಾವರಣ ನಮ್ಮ ಜಿಲ್ಲೆಯಲ್ಲಿ ಆ ಸಂದರ್ಭದಲ್ಲಿ ಇದ್ದದ್ದನ್ನು ನಾವು ನೋಡಿದ್ದೆವು. ಹೀಗಾಗಿ ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ, ಬೇರೆ ಕಡೆಗಿಂತ ಹೆಚ್ಚಾಗಿ ತಮಿಳರು ನಮ್ಮ ಭಾಗದಲ್ಲೇ ವಾಸಮಾಡುತ್ತಿದ್ದಾರೆ. ಒಟ್ಟು ನಾಲ್ಕು ತಾಲ್ಲೂಕುಗಳಲ್ಲಿ ತಮಿಳರು ಇರುವುದರಿಂದ ನಾವು ಹೆಚ್ಚಿನ ನಿಗಾ ವಹಿಸಬೇಕಾಗಿತ್ತು. ಹಾಗಾಗಿ ಎಲ್ಲರಿಗೂ ಕೂಡ ಆದಷ್ಟು ಬೇಗ ಡಾ: ರಾಜ್‌ಕುಮಾರ್ ಅವರು ನಾಡಿಗೆ ಬರಲಿ ಎನ್ನುವ ಕಾತುರತೆ ಇತ್ತು. ತಡವಾದರೂ ಕೂಡ 108 ದಿವಸಗಳ ನಂತರ ನಾಡಿಗೆ ಬಂದಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತಾ, ಒಂದು ಕಾಕತಾಳೀಯವಾದಂತಹ ರೀತಿಯಲ್ಲಿ ಡಾ: ರಾಜ್‌ಕುಮಾರ್ ಅವರ ಅಪಹರಣ ಜುಲೈ 29ನೇ ತಾರೀಖು ಆಯಿತು, ಅದಕ್ಕೆ ಒಂದು ವಾರ ಅಥವಾ ಹತ್ತು ದಿವಸಗಳ ಮುಂಚೆ ನಮ್ಮ ಶಾಸಕಾಂಗ ಪಕ್ಷದ ನಾಯಕರಾದಂತಹ ಸಿಂಧ್ಯರವರು, ನಾನು ಮತ್ತು ಕೃಷ್ಣಮೂರ್ತಿಯವರು ಜೊತೆಗೆ ಇನ್ನಿತರ ನಮ್ಮ ಪಕ್ಷದ ಮುಖಂಡರು ಮಹದೇಶ್ವರ ಬೆಟ್ಟದ ಪೊನ್ನಾಚಿ ಹಾಗೂ ಇತರ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೆವು. ನಾವು ಅಲ್ಲಿಗೆ ಭೇಟಿ ಕೊಟ್ಟ ಉದ್ದೇಶ ಸುಮಾರು ಎಂಟತ್ತು ವರ್ಷಗಳ ಕಾಲ ಗಣಿಗಾರಿಕೆಯನ್ನು ತಡೆಹಿಡಿದು, ಇದು ವೀರಪ್ಪನ್ ಏರಿಯಾ ಎಂದು ಗುರುತು ಮಾಡಿದ್ದರು, ಆ ಪ್ರದೇಶದಲ್ಲಿ ಏನು ಗಣಿಗಾರಿಕೆಯನ್ನು ನಿಷೇಧ ಮಾಡಿದ್ದರು, ಅಲ್ಲಿ ಮತ್ತೆ ಜುಲೈ 15 ಅಥವಾ 16ನೇ ತಾರೀಖು ಸರ್ಕಾರ ಪರವಾನಗಿ ಕೊಟ್ಟು ಗಣಿಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :— ತಾವು ಮುಖ್ಯಮಂತ್ರಿಗಳಿಗೆ ತಿಳಿಸಿ ಹೋಗಿದ್ದರೋ ಹಾಗೆ ಹೋಗಿದ್ದೀರೋ ನೀವು ತಿಳಿಸಿ ಹೋಗಿದ್ದರೆ ನಿಮ್ಮನ್ನೆ ಕಳುಹಿಸುತ್ತಿದ್ದರು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :— ನಮ್ಮ ನಾಯಕರು ಇದ್ದಿದ್ದರಿಂದ ಧೈರ್ಯವಾಗಿ ನಾವು ಹೋಗಿದ್ದು. ನಾವು ಹೋದಾಗ ಇನ್ನು ಡಾ: ರಾಜ್‌ಕುಮಾರ್ ಅವರ ಅಪಹರಣ ಆಗಿರಲಿಲ್ಲ. ಆಗ ನಾವು ಪತ್ರಿಕಾಗೋಷ್ಠಿ ಕರೆದು ನಾಯಕರೆಲ್ಲಾ ಮಾತನಾಡಿದೆವು. ಇದು ವೀರಪ್ಪನ್ ಏರಿಯಾ ಎಂದು ಡಿಕ್ಲೇರ್ ಮಾಡಿ ಹಿಂದಿನ ಸರ್ಕಾರ ಅಲ್ಲಿ ಗಣಿಗಾರಿಕೆಗೆ ಅನುಮತಿ ಕೊಡಬೇಕು ಎಂದಾಗ ಒತ್ತಾಯ ಇದ್ದರೂ ಕೂಡ, ಕೊಡುವುದಕ್ಕಾಗುವುದಿಲ್ಲವೆಂದು ಪೋಲೀಸ್ ಇಲಾಖೆ ವರದಿ ಇತ್ತು. ಇಷ್ಟೆಲ್ಲಾ ಇದ್ದರೂ ಕೂಡ ಈಗ ಕೊಟ್ಟಿದ್ದಾರೆ. ಆದುದರಿಂದ, ಅಲ್ಲಿಯ ವಾತಾವರಣ ಹೇಗಿದೆ ಎಂದು ಸಮೀಕ್ಷೆ ಮಾಡುವುದಕ್ಕೆ ಹೋದಾಗ ಅಲ್ಲಿನ ಸ್ಥಳೀಯ ಕಾರ್ಮಿಕರು ಕೆಲವರು ನಮಗೆ ಮಳೆ ಇಲ್ಲ, ಗಣಿಗಾರಿಕೆ ಇದ್ದರೆ ಕೂಲಿಯಾದರೂ ಸಿಗುತ್ತದೆ ಎನ್ನುವ ಅಭಿಪ್ರಾಯ ಇದ್ದರೆ, ಇನ್ನೊಂದು ಕಡೆ ಭಯದ ವಾತಾವರಣ ಇತ್ತು. ಏನೆಂದರೂ ಆ

ಭಾಗದಲ್ಲಿ ವೀರಪ್ಪನ್ ಅವನ ಕಾರ್ಯಚಟುವಟಿಕೆ ಹಿಂದೆ ಬಹಳಷ್ಟು ಇತ್ತು. ಈಗ ಸಧ್ಯಕ್ಕೆ ಗಣಿಗಾರಿಕೆ ನಿಂತಿರುವುದರಿಂದ ಅದು ತಟಸ್ಥವಾಗಿದೆ. ಮುಂದೆ ಪ್ರಾರಂಭವಾದಮೇಲೆ ಏನಾಗುತ್ತದೋ, ಮತ್ತೆ ಶುರುವಾಗುತ್ತದೇನೋ ಎನ್ನುವ ಅನುಮಾನ, ಸಂಶಯ ಕೂಡ ಅಲ್ಲಿ ಜನ ವ್ಯಕ್ತಪಡಿಸುತ್ತಿದ್ದರು. ಆದಾದ ನಾಲ್ಕೈದು ದಿನಗಳಲ್ಲಿ ರಾಜ್‌ಕುಮಾರ್ ಅವರ ಅಪಹರಣ ಸುದ್ದಿಯನ್ನು ಕೇಳುವಂತಹ ಸನ್ನಿವೇಶ ನಿರ್ಮಾಣವಾಯಿತು. ಆದುದರಿಂದ, ಇದರಲ್ಲಿ ಏನು ತೋರಿಸುತ್ತಿದೆ ಎಂದರೆ ಸರ್ಕಾರ ವೀರಪ್ಪನ್ ಅವರನ್ನು ಬಂಧನ ಮಾಡುವ ವಿಚಾರದಲ್ಲಿ ಹೊಸ ಸರ್ಕಾರ ಬಂದಾಗಿನಿಂದ ಅಂತಹ ಒಂದು ವಿಶೇಷ ಆಸಕ್ತಿಯನ್ನು ತೋರಿಸದೆ ಇರುವುದು ಈ ಒಂದು ಘಟನೆಗೆ ಕಾರಣವಾಗಿರಬಹುದು ಮತ್ತು ಗುಪ್ತದಳ ಅರಕೇಶ್ ಅವರ ಒಂದು ವರದಿ ಸರ್ಕಾರದ ಮುಂದೆ ಇದ್ದರೂ ಕೂಡ ಡಾ: ರಾಜ್ ಅವರಿಗೆ ಸೂಕ್ತ ರಕ್ಷಣಾ ವ್ಯವಸ್ಥೆಯನ್ನು ಅವರಿಗೆ ಕೊಡಬೇಕಾಗಿತ್ತು. ಸಹಜವಾಗಿ ರಾಜ್‌ಕುಮಾರ್ ಅಪೇಕ್ಷಿಸದೇ ಇರಬಹುದು, ಆದರೆ ಸರ್ಕಾರ ಕೆಲವು ಗಣ್ಯ ವ್ಯಕ್ತಿಗಳ ಬಗ್ಗೆ ವಿಶೇಷ ನಿಗಾ ವಹಿಸುವುದರಲ್ಲಿ ವಿಫಲವಾಗಿದೆ ಎಂದು ಆ ಕಾರಣ ಅವರ ಅಪಹರಣವಾಗಿದೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ನಾನು ಈ ಘಟನೆ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪರಿಣಾಮಗಳು ಏನಾಗಬಹುದು ಎನ್ನುವುದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅರಣ್ಯದ ಗಡಿಪ್ರದೇಶಗಳಲ್ಲಿ ಚೆಕ್‌ಪೋಸ್ಟ್ ಏನಿವೆ ಅದೆಲ್ಲಾ ಅಪಹರಣ ಆಗಿದ್ದಂತಹ ಸಂದರ್ಭದಲ್ಲಿ ಫ್ರೀ ಆಗಿ ಬಿಟ್ಟಿದ್ದರು. ಆಗ ಅನೇಕ ಜನ ಕಾಡಿನ ಒಳಗೆ ಹೋಗಿಬಂದಿರುವವರು, ಹಾಗೂ ಯಾರು ಹೋದರೂ ಕೂಡ ತಡೆಗಟ್ಟುವಂತಹ ಪರಿಸ್ಥಿತಿ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವ ಹಾಗೆ ಸರ್ಕಾರಕ್ಕೆ ಅಥವಾ ಯಾರ ಗಮನಕ್ಕೂ ತರದೆ ಬಹಳಷ್ಟು ಜನರು ಒಳಗೆ ಹೋಗಿ ಬಂದಿರುವಂತಹ ಸಾಧ್ಯತೆಗಳು ಇದೆ. ಏಕೆಂದರೆ ಅದಕ್ಕೆ ಯಾವ ಅನುಮತಿ ಬೇಕಾಗಿಲ್ಲವೆಂದು ತಾವು ತಿಳಿಸಿದ್ದೀರಿ. ನನಗೆ ಗೊತ್ತಿರುವ ಹಾಗೆ ಸಣ್ಣಪುಟ್ಟ ಸೌದೆ ತರುವುದಕ್ಕೆ ಹೋದವರನ್ನು ಕೂಡ ಹಿಡಿದು ಕೇಸ್ ಬುಕ್ ಮಾಡುವಂತಹ ವಿಚಾರ ನಮ್ಮ ಅರಣ್ಯ ಇಲಾಖೆಯಲ್ಲಿ ಇರುವಾಗ, ಆ ಒಂದು ಸಂದರ್ಭದಲ್ಲಿ ಕಾಡಿನ ಒಳಗೆ ಅನೇಕ ಜನ ಹೋಗಿ ಬರುವವರನ್ನು ತಡೆಯುವ ವ್ಯವಸ್ಥೆ ಇಲ್ಲವೆಂದಾಗ ಬಹಳಷ್ಟು ಜನ ಹೋಗಿರುವ ಸಾಧ್ಯತೆಗಳು ಇರುತ್ತವೆ. ಈ ಸಂದರ್ಭವನ್ನು ಬಳಸಿಕೊಂಡು ಅನೇಕ ಜನ ನಾನಾ ರೀತಿಯ ಸಲಕರಣೆಗಳನ್ನು ಆತನಿಗೆ ಒದಗಿಸಿರುವಂತಹ ಬಗ್ಗೆ ನಾವು ಶಂಕಿಸಬೇಕಾಗುತ್ತದೆ. ವೀರಪ್ಪನ್ ಬಗ್ಗೆ ನಮ್ಮ ಭಾಗದಲ್ಲಿ ಈ ಒಂದು ವಿಚಾರದ ಬಗ್ಗೆ ಹಳ್ಳಿ ಮಟ್ಟದಿಂದ ಹಿಡಿದು ಅಧಿಕಾರಿಗಳ ಮಟ್ಟದವರೆಗೂ ಕೂಡ ದಿನ ಚರ್ಚೆ ಸಾಕಷ್ಟು ನಡೆಯುತ್ತಿರುತ್ತದೆ. ವೀರಪ್ಪನ್ ಹಿಂದೆಲ್ಲಾ ಹಣಕಾಸಿನ ಕೊರತೆ ಇದ್ದಾಗ ಅಥವಾ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕಾದಾಗ ಯಾರನ್ನಾದರೂ ಅಪಹರಣ ಮಾಡಿ ಆ ಮೂಲಕ ತನ್ನ

ಕಾರ್ಯವನ್ನು ಸಾಧನೆ ಮಾಡಿಕೊಳ್ಳುತ್ತಿದ್ದುದನ್ನು ನಾವು ಗಮನಿಸಿದ್ದೇವೆ. ಇತ್ತೀಚೆಗೆ ಬಂಡೀಪುರದಲ್ಲಿ ಕೃಪಾಕರ ಮತ್ತು ಸೇನಾನಿ ಅವರನ್ನು ಅಪಹರಣ ಮಾಡುವಂತಹ ಸಂದರ್ಭದಲ್ಲಿ, ಸಣ್ಣ ಪುಟ್ಟ ಅಪಹರಣ ಮಾಡುವುದರಿಂದ ನನಗೆ ಏನೂ ಅನುಕೂಲವಾಗುವುದಿಲ್ಲವೆಂದು ಸರಿಯಾದಂತಹ ವ್ಯಕ್ತಿಗಳನ್ನು ಅಪಹರಣ ಮಾಡಬೇಕು ಅದಕ್ಕೆ ವಿದೇಶಿ ಪ್ರವಾಸಿಗರನ್ನು ಹಾಗೂ ರಾಜ್ಯದ ಗಣ್ಯ ವ್ಯಕ್ತಿಗಳನ್ನು ಅಪಹರಣ ಮಾಡುವುದಕ್ಕೆ ಬಂಡೀಪುರದಲ್ಲಿ ಕ್ಯಾಂಪ್ ಹಾಕುವಂತಹ ಸಂದರ್ಭ ನೋಡಿ ಮಾಡಬೇಕೆಂದು ಹದಿನೈದು ಇಪ್ಪತ್ತು ದಿವಸ ಹೊಂಚು ಹಾಕಿ ಕೊನೆಗೆ ಇಬ್ಬರು ಇಂಟರ್‌ನ್ಯಾಷನಲ್ ಫೋಟೋಗ್ರಾಫರ್ ಅವರನ್ನು ಅಪಹರಣ ಮಾಡಿದ್ದು ನಮ್ಮ ಕಣ್ಮುಂದೆ ಇದೆ. ಇಂತಹ ಎಲ್ಲಾ ಸನ್ನಿವೇಶಗಳು ಇರುವಾಗ ಸರ್ಕಾರ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೆ, ಎಸ್‌ಟಿಎಫ್ ಬಗ್ಗೆ ಒಂದು ವರ್ಷದಿಂದ ಯಾವುದೇ ರಿವ್ಯೂ ಮಾಡಿದ್ದಾಗಲಿ ಅಥವಾ ಕಾರ್ಯಾಚರಣೆ ಮಾಡುವುದಕ್ಕೆ ಯಾವರೀತಿ ಕಾರ್ಯಕ್ರಮ ಮಾಡುತ್ತಿದ್ದಾರೆ ಅದಕ್ಕೆ ಹಣ ಏನು ಒದಗಿಸುತ್ತಿದ್ದೇವೆ ಮತ್ತು ಅಲ್ಲಿರತಕ್ಕಂಥ ಪೋಲೀಸ್‌ಅನ್ನು ಪನಿಷ್‌ಮೆಂಟ್ ಟ್ರಾನ್ಸ್‌ಫರ್ ತರಹ ಎಸ್‌ಟಿಎಫ್‌ಗೆ ಹಾಕಿ ಎಂದು ಹೇಳಿ ಅವರನ್ನು ಅಲ್ಲಿ ಇಡುವಂತಹ ಸನ್ನಿವೇಶಗಳು ಇದೆ. ಅವರಲ್ಲಿ ನಿರಾಸಕ್ತಿ ಭಾವನೆ ತಳೆದು ಈ ಒಂದು ಘಟನೆ ನಡೆಯುವುದಕ್ಕೆ ಕಾರಣವಾಗಿದೆ. ಆದುದರಿಂದ, ಇಂತಹ ಘಟನೆ ಮತ್ತೆ ಮರುಕಳಿಸದಂತೆ ಮಾಡಬೇಕು. ಈಗ ವೀರಪ್ಪನ್ ಮೊದಲ ರೀತಿಯಲ್ಲಿ ಇಲ್ಲ. ಈಗ ಅನೇಕ ಸಂಘಸಂಸ್ಥೆಗಳು ಅವನ ಒಂದು ಸಂಪರ್ಕದಲ್ಲಿ ಇರುವುದರಿಂದ ಅವನ ಬುದ್ಧಿಶಕ್ತಿ ಹೆಚ್ಚಿದೆ ಮತ್ತು ಅವನ ಸಂಪರ್ಕ ಜಾಲ ಕೂಡ ಬಹಳ ವಿಸ್ತಾರವಾಗಿ ಬೆಳೆದಿದ್ದು, ಈ ಸಂದರ್ಭದಲ್ಲಿ ಅನೇಕ ಶಸ್ತ್ರಾಸ್ತ್ರಗಳನ್ನು ಹೊಂದುವುದಕ್ಕೆ ಅವನಿಗೆ ಅವಕಾಶವಾಗಿದೆ ಎಂದು ಸುದ್ದಿ ಗಾಢವಾಗಿದೆ. ಈ ಒಂದು ಕಾರಣದಿಂದ ಆತನನ್ನು ಸದೆ ಬಡಿಯುವುದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಸರ್ಕಾರ ಕೂಡಲೇ ಮಾಡಬೇಕು. ಮತ್ತು ನಮ್ಮ ಭಾಗದಲ್ಲಿ ತಮಿಳರು ಹೆಚ್ಚಿನ ಸಂಖ್ಯೆಯಲ್ಲಿ ಮಾತನಾಡಿರುವವರು ತಮಿಳುನಾಡಿನಿಂದ ಬಂದು ನೆಲೆಸಿರತಕ್ಕಂಥವರು ಇರುವುದರಿಂದ ಅದು ಕೊಳ್ಳೇಗಾಲ ಇರಬಹುದು, ಗುಂಡ್ಲುಪೇಟೆ ಇರಬಹುದು ಅಥವಾ ಚಾಮರಾಜನಗರ ಇರಬಹುದು, ಮಧ್ಯದಲ್ಲಿ ಯಾರೇ ಉಗ್ರಗಾಮಿ ಶಕ್ತಿಗಳು ಬಂದು ಸೇರಿಕೊಂಡರೂ ಸಹ ಅವರನ್ನು ಪತ್ತೆ ಹಚ್ಚುವುದು ಬಹಳ ಕಷ್ಟದ ಕೆಲಸವಾಗುತ್ತದೆ. ಆ ಒಂದು ದೃಷ್ಟಿಯಿಂದ ನನ್ನ ಶಂಕೆ ಏನೆಂದರೆ ಮಲೆಮಾದೇಶ್ವರ ಬೆಟ್ಟದ ಪ್ರದೇಶ ಏನು ಇದೆ, ಅದನ್ನು ಮತ್ತೊಂದು ಜಾಫ್ನಾ ಮಾಡುವಂತಹ ಸನ್ನಿವೇಶ ಎದ್ದು ಕಾಣುತ್ತಿದೆ. ಆದುದರಿಂದ ಈ ಮಲೆಮಾದೇಶ್ವರ ಬೆಟ್ಟ ಮತ್ತೊಂದು ಎಲ್.ಟಿ.ಟಿ.ಇ. ತಾಣವಾಗಬಾರದು. ಅದಕ್ಕೆ ಬೇಕಾದಂತಹ ಪೋಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಈ ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಡಬೇಕು. ನಮ್ಮ ರಾಜ್ಯದ ಅನೇಕ ಪೋಲೀಸ್ ಠಾಣೆಗಳಲ್ಲಿ ಸಾಕಷ್ಟು ಪೋಲೀಸರ ಕೊರತೆ ಇದೆ. ಅವರಿಗೆ ಕೊಟ್ಟಿರುವಂತಹ ವಾಹನಗಳು ಕೂಡ ಹಳೆಯದಾಗಿವೆ ಅವೆಲ್ಲವನ್ನೂ ಬದಲಾಯಿಸಿ ಸುಸಜ್ಜಿತವಾದಂತಹ ಪಡೆ, ವಾಹನಗಳನ್ನು ಫುಲ್‌ಫ್ಲೆಡ್ಜ್ ಪೋಲೀಸ್ ಸ್ಟಾಫ್‌ಅನ್ನು ನಮ್ಮ ಬಾರ್ಡರ್ ತಾಲ್ಲೂಕುಗಳಿಗೆ ಕೊಡುವುದರ

ಮುಖಾಂತರ ಕೇರಳ ಮತ್ತು ತಮಿಳುನಾಡಿನಿಂದ ಇಂತಹ ಒಂದು ದುಷ್ಟಶಕ್ತಿಗಳು ನಮ್ಮ ರಾಜ್ಯದೊಳಗಡೆ ಬರದಂತೆ ತಡೆಯುವಂಥಾದ್ದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮತ್ತೊಂದು ವಿಚಾರವೇನೆಂದರೆ ನಮ್ಮ ಸ್ನೇಹಿತರಾದ ಮಾನ್ಯ ರಾಜುಗೌಡರವರು ಸಹ ಸಭೆಯಲ್ಲಿದ್ದಾರೆ, ಅವರು ನಾನು ಹೇಳುವುದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ. ಹನೂರನ್ನು ಒಂದು ತಾಲ್ಲೂಕು ಕೇಂದ್ರವನ್ನಾಗಿ ಕೂಡಲೇ ಮಾಡಬೇಕು, ಏಕೆಂದರೆ ಕೊಳ್ಳೇಗಾಲ ಒಳ್ಳೆಯ ವಿಶಾಲವಾದಂತಹ ದೊಡ್ಡ ತಾಲ್ಲೂಕಾಗಿದೆ ಮತ್ತೆ ಹನೂರು ಮಲೆಮಾದೇಶ್ವರ ಬೆಟ್ಟದ ಬಳಿಯೇ ಇರುವುದರಿಂದ ಅಲ್ಲಿ ಒಂದು ತಾಲ್ಲೂಕು ಕೇಂದ್ರವನ್ನು ಮಾಡುವುದರಿಂದ ತಾಲ್ಲೂಕು ಮಟ್ಟದ ಒಬ್ಬ ಮ್ಯಾಜಿಸ್ಟ್ರೇಟ್, ಒಂದು ಪೋಲೀಸ್ ಠಾಣೆ ಇವೆಲ್ಲವನ್ನೂ ಮಾಡುವುದರಿಂದ ಎಲ್ಲಾ ಅಧಿಕಾರಿಗಳ ಸಂಚಾರ ಈ ಪ್ರದೇಶದಲ್ಲಿ ನಡೆಯುವುದರಿಂದ ಮಧ್ಯೆ ಈ ಶಕ್ತಿಗಳು ನುಸುಳದಂತೆ ತಡೆಯುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಸಂತೇಮಾರನಹಳ್ಳಿ ಕೂಡ ಈ ಬಾರ್ಡರ್‌ನಲ್ಲಿರುವಂಥಾದ್ದು ಗ್ರಾಮಾಂತರಕ್ಕೆ ಸೇರುವಂತಹ ಪ್ರದೇಶವಾಗಿದೆ. ಆದುದರಿಂದ, ಆದಷ್ಟು ಬೇಗ ತಾಲ್ಲೂಕು ಕೇಂದ್ರವನ್ನು ಈ ಸನ್ನಿವೇಶದಲ್ಲಿ ಮಾಡಿ ಈ ದುಷ್ಟಶಕ್ತಿ ರಾಜ್ಯದೊಳಗೆ ನುಸ್ಸುಳದಂತೆ ಈ ಒಂದು ಸಂದರ್ಭವನ್ನು ಬಳಸಿಕೊಂಡು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ವ್ಯಕ್ತಿಗಳನ್ನು ಅಪಹರಣ ಮಾಡುವಂಥಾದ್ದಕ್ಕೆ ವೀರಪ್ಪನ್ ಬೇಕೆಂದು ಏನು ಇಲ್ಲ. ಈಗ ಯಾರನ್ನು ಬೇಕಾದರೂ ಕಾಡಿಗೆ ಅಥವಾ ಯಾವುದೋ ಒಂದು ಪ್ರದೇಶಕ್ಕೆ ಒಬ್ಬರನ್ನು ಕರೆದುಕೊಂಡು ಹೋಗಿ 5,000 ರೂಪಾಯಿ, 10,000 ರೂಪಾಯಿ ಐದು ಲಕ್ಷ ರೂಪಾಯಿಗಳು ಕೊಡಿ ಎನ್ನುವಂತಹ ಘಟನೆಗಳು ಆಗುವಂತಹ ಸನ್ನಿವೇಶಗಳು ಇರುತ್ತವೆ. ಆದುದರಿಂದ, ಇದಕ್ಕೆ ಸೂಕ್ತವಾದಂತಹ ಬಂದೋಬಸ್ತ್ ಮಾಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮಾನ್ಯ ಮಂತ್ರಿಯವರು ಒಬ್ಬರು ರಕ್ಷಣೆ ಬೇಕೆಂದು ಕೇಳುವಂತಹ ಸನ್ನಿವೇಶ ನಮ್ಮ ಪ್ರದೇಶದಲ್ಲಿರುವಂತಹ ಪರಿಸ್ಥಿತಿ ಇರುವಾಗ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿದಿದ್ದರೆ ಹೇಳುತ್ತಿದ್ದರು. ಇವರು ಮೊನ್ನೆ ದಿವಸ ಮನವಿ ಪತ್ರವನ್ನು ಕೊಟ್ಟಿದ್ದಾರೆ. ಆದುದರಿಂದ ನಾವು ಶಾಸಕರು ಆಗಬಹುದು, ಬೇರೆ ಯಾರೇ ಜನ ಪ್ರತಿನಿಧಿಗಳು ಇರಬಹುದು, ವ್ಯಾಪಾರಸ್ಥರು ಇರಬಹುದು ಅಥವಾ ಅನುಕೂಲಸ್ಥರೂ ಇರಬಹುದು ಹಣವನ್ನು ಹೊಂದಿರುವವರು ಇರಬಹುದು ಯಾವುದೇ ವ್ಯಕ್ತಿಗಳಿರಬಹುದು, ಇವರು ಏಕಾಂಗಿಯಾಗಿ ನಮ್ಮ ಪ್ರದೇಶದಲ್ಲಿ ಓಡಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ದೈವವಶಾತ್ ಕಳೆದ 108 ದಿವಸಗಳಿಂದ ಯಾವುದೇ ಅಹಿತಕರವಾದಂತಹ ಘಟನೆಗಳು ನಮ್ಮ ಭಾಗದಲ್ಲಿ ಆಗಿಲ್ಲ. ಈಗಲೂ ಕೂಡ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾದ ಮೇಲೂ ಕೂಡ ಯಾವುದೇ ಘಟನೆಗಳು ಆಗುವಂಥಾದ್ದಕ್ಕೆ ಅವಕಾಶ ಕೊಟ್ಟಿಲ್ಲ. ಆದುದರಿಂದ ಈಗ ನಾನು

ಹೇಳುವಂತಹ ವಿಚಾರಗಳನ್ನು ಸರ್ಕಾರ ಗಮನಹರಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಮಾನ್ಯ ಸಿಂಧ್ಯರವರೇ, ತಾವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ) :— ಮಾನ್ಯ ಉಪಾಧ್ಯಕ್ಷರೆ, ನಾಳೆ ಬೆಳಿಗ್ಗೆ ಒಂದು ಗಂಟೆ ಮುಂಚಿತವಾಗಿ ಸಭೆಯನ್ನು ಕರೆಯಿರಿ, ತಾವು 10 ಗಂಟೆಗೆ ಸಭೆಯನ್ನು ಕರೆಯಿರಿ, ಆಗ ನಮಗೂ ಈ ಚರ್ಚೆಯಲ್ಲಿ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು 11 ಗಂಟೆಗೆ ಉತ್ತರ ಕೊಡಲಿ.

ಉಪಾಧ್ಯಕ್ಷರು :— ನೀವು ಮಾತನಾಡಿ ನಿಮಗೆ ಅರ್ಧ ಗಂಟೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಉಪಾಧ್ಯಕ್ಷರೆ, ನಾವು ಈ ಚರ್ಚೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಏನಾದರೂ ಸಲಹೆ ಕೊಡಬೇಕು. ಇದು ಈ ರಾಜ್ಯದ ಒಂದು ಮಹತ್ವವಾದಂತಹ ಚರ್ಚೆಯಾಗಿದ್ದು, ಇವೆಲ್ಲವೂ ಮಾಧ್ಯಮದಲ್ಲಿ ಪ್ರಕಟವಾಗಬೇಕೆಂಬುದು ನಮಗೆಲ್ಲರಿಗೂ ಇದೆ. ಇದನ್ನು ನಾನು ಆಷಾಢಭೂತಿತನಕ್ಕಾಗಿ ಮಾತನಾಡುವುದಕ್ಕೆ ತಯಾರಿಲ್ಲ, ನಾವು ಈ ಚರ್ಚೆಯಲ್ಲಿ ಮಾತನಾಡುವಂಥಾದ್ದು ಮಾಧ್ಯಮದಲ್ಲಿ ವರದಿಯಾಗಬೇಕು, ಅದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಆದರೆ ಈಗ ಸಮಯ 7 ಗಂಟೆ 15 ನಿಮಿಷಗಳಾಗಿದೆ ತಾವು ಮಾನ್ಯ ಸಿಂಧ್ಯಾರವರೆ ಚರ್ಚೆ ಮಾಡಿ ಎಂದರೆ ನಾನು ಅನೇಕ ವರ್ಷಗಳು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ತಾವು ಹತ್ತು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕೆಂದರೆ ಈ ಚರ್ಚೆಯಲ್ಲಿ ಏಕೆ ಭಾಗವಹಿಸಬೇಕು? ಇದಕ್ಕೆ ನಾನೇ ಒಂದು ಪ್ರೆಸ್ ಕಾನ್‌ಫರೆನ್ಸ್ ಕರೆದು ಹೇಳುತ್ತೇನೆ. ತಾವು ಬಿ.ಎ.ಸಿ. ಮೀಟಿಂಗ್ ಕರೆದು 7 ಗಂಟೆ 30 ನಿಮಿಷಕ್ಕೆ ಸಭೆಯನ್ನು ಮುಗಿಸಬೇಕೆಂದು ಹೇಳಿದ್ದಿರಾ? ಈಗ 7 ಗಂಟೆ 30 ನಿಮಿಷಗಳವರೆಗೆ ಕಾಲ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. ತಾವು ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಈ ರೀತಿ ಮಾಡಿದರೆ ಹೇಗೆ ಈ ಚರ್ಚೆಯಲ್ಲಿ ಏನೋ ಅಚೀವ್ ಮಾಡಿ ಬಿಡುತ್ತೇವೆಂದು ನಾವು ಅಪೇಕ್ಷೆ ಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಚರ್ಚೆ ಮಾಡಿ ಎಂದು ಹೇಳುತ್ತಾರೆ. ಆ ರೀತಿ ಒಣ ಚರ್ಚೆ ಮಾಡಿ ತೌಡು ಕುಟ್ಟುವಂತಹ ಕೆಲಸ ಮಾಡಲು ನಮಗೆ ಏನು ತೀಟೆ ಇದೆ. We also have better business to do. ಏನು ಬೇಡ ಬಿಡಿ. ಈಗಾಗಲೇ 7 ಗಂಟೆ 15 ನಿಮಿಷಗಳಾಗಿದೆ. ನನ್ನನ್ನು ನಮ್ಮ ಪಕ್ಷದ ನಾಯಕನೆಂದು ಇಲ್ಲಿ ಕೂರಿಸಿದ್ದಾರೆ. ನಮಗೆ ಬೆಳಿಗ್ಗೆ ಕೋ-ಆಪರೇಷನ್ ಬಿಲ್ ಬಗ್ಗೆ ಚರ್ಚೆ ಮಾಡಬೇಕೆಂದು ಕರೆಸಿದ್ದೀರಿ. ನಾವು ಮನೆಯಿಂದ ಬರಬೇಕೆಂದರೆ 9 ಗಂಟೆಗೆ ಬರಬೇಕು ಅಲ್ಲಿ 150 ಜನರು ನಮಗಾಗಿ ಕಾಯುತ್ತಾ ಇರುತ್ತಾರೆ ಮತ್ತೆ ನಾಳೆ

ಬೆಳಿಗ್ಗೆ ಏನು ಮಾತನಾಡಿದರೂ ಒಣ ಚರ್ಚೆ ಏನು ಓದಲಿಲ್ಲವೆಂದು ಹೇಳುತ್ತೀರಾ ನಾವು ಏನು ವಿಷಯವಿರುತ್ತದೆ ಅದನ್ನು ಓದಿಕೊಂಡು ಬರಬೇಕು. ನಾವು ಮನುಷ್ಯರೋ, ಮಿಷನ್‌ಗಳೊ, ದಯಮಾಡಿ ತಾವು ಇದನ್ನು ಪರಾಮರ್ಶಿಸಬೇಕು.

ಉಪಾಧ್ಯಕ್ಷರು :— ನಾವು ಇವತ್ತು ಎಷ್ಟು ಹೊತ್ತಾದರೂ ಈ ಚರ್ಚೆಯನ್ನು ಮುಗಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಬಿ.ಎ.ಸಿ. ಮೀಟಿಂಗ್‌ನಲ್ಲಿ ಹೇಳಬೇಕಾಗಿತ್ತು. ನೀವು ಯಾರನ್ನು ಕೇಳಿ ತೀರ್ಮಾನ ತೆಗೆದುಕೊಂಡಿದ್ದೀರಿ? ನನ್ನನ್ನು ಏನಾದರೂ ಕೇಳಿದ್ದೀರಾ? ಹೀಗೆ ಏಕಾಏಕಿ ತೀರ್ಮಾನವನ್ನು ತೆಗೆದುಕೊಂಡು ಬಿಟ್ಟರೆ ಹೇಗೆ? ನಾವು ಇವೆಲ್ಲವನ್ನು ಕೇಳಬೇಕಾಗುತ್ತದೆ. ನಾವು ಮಾತನಾಡುವುದು ಇರುತ್ತದೆ. ಚರ್ಚೆಯಲ್ಲಿ ನಿಯಂತ್ರಣ ಮಾಡುವಂಥಾದ್ದು ಅಧ್ಯಕ್ಷರ ಸ್ಥಾನದಲ್ಲಿರುವ ನಿಮಗೆ ಸಂಬಂಧಪಟ್ಟಿರುವಂಥಾದ್ದು. ಸರ್ಕಾರಕ್ಕೆ ನಾವು ಚರ್ಚೆ ಮಾಡಬೇಕೆಂದು ಇದ್ದರೆ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದಿಲ್ಲ. ನಾವು ಆ ರೀತಿಯಾಗಿ ಅತ್ತು ಕರೆದು ಈ ಚರ್ಚೆಯಲ್ಲಿ ಮಾತನಾಡುವಂಥಾದ್ದು ಏನು ಇಲ್ಲ. ಡಾ: ರಾಜ್‌ಕುಮಾರ್‌ರವರು ನೆಮ್ಮದಿಯಿಂದ ಇದ್ದಾರೆ, ನಾವು ನೆಮ್ಮದಿಯಾಗಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಉಪಾಧ್ಯಕ್ಷರೆ, ತಾವು ಈ ಚರ್ಚೆಯನ್ನು 5 ಗಂಟೆ 30 ನಿಮಿಷಕ್ಕೆ ಮುಗಿಸಬೇಕೆಂದು ಹೇಳಿದ್ದೀರಿ, ಮಾತನಾಡಬೇಕೆಂಬ ಇಚ್ಛೆ ಎಲ್ಲರಿಗೂ ಇರುತ್ತದೆ. ನಾವು ಮಾತನಾಡಬಾರದೆಂದು ಯಾರಿಗೂ ಅಡ್ಡ ಬರುವುದಿಲ್ಲ. ಆದರೆ, ತಾವು ಪಾರ್ಟಿವೈಸ್ ಟೈಮನ್ನು ನಿಗದಿ ಮಾಡಿ, ಅದರಲ್ಲಿ ನಾವು ಮೆಜಾರಿಟಿಯ ಮೇಲೆ ಇಂತಹ ಪಾರ್ಟಿಗೆ ಇಷ್ಟು ಸಮಯವೆಂದು ನಿಗದಿ ಮಾಡಿದಾಗ ಹೊಸಬರಿಗೂ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿ ಮೊದಲು ಮಾತನಾಡುವವರೆಲ್ಲರೂ ಗಂಟೆಗಟ್ಟಲೆ ಮಾತನಾಡಬೇಕೆಂದರೆ 5 ಗಂಟೆಯಾದರೂ ಇನ್ನು ಮೂರು ಜನರು ಮಾತನಾಡಿರಲಿಲ್ಲ. ಈಗ 7 ಗಂಟೆ 30 ನಿಮಿಷಗಳವರೆಗೂ ಕೊಡಬೇಕೆಂದು ಹೇಳುತ್ತೀರಿ. ತಾವು ಸಮಯವನ್ನು ನಿಗದಿ ಮಾಡಬೇಕೆಂದು ನನ್ನ ಅಭಿಪ್ರಾಯವಾಗಿದೆ. ಈ ರೀತಿಯಾದಾಗ ಅವರು ಯಾವುದೇ ಪಾರ್ಟಿಯಾಗಲಿ ಅದನ್ನು ಅವರೇ ಹಂಚಿಕೊಂಡು ಹತ್ತು ಜನರು ಬೇಕಾದರೂ ಮಾತನಾಡಲಿ, ಒಬ್ಬರೇ ಬೇಕಾದರೂ ಮಾತನಾಡಲಿ, ತಾವು ಈ ರೀತಿಯ ವ್ಯವಸ್ಥೆಯನ್ನು ತಂದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಉಪಾಧ್ಯಕ್ಷರೆ, ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಇದರ ವಿಚಾರವಾಗಿ ಸರ್ಕಾರಕ್ಕೆ ಸಲಹೆಗಳನ್ನು ಕೊಡಬೇಕೆಂದು ಇದ್ದೇನೆ, ಮಾತನಾಡಬೇಕೆಂದು ಇದ್ದೇನೆ. ಅದಕ್ಕೆ ಅಧ್ಯಕ್ಷರ ಪೀಠದಿಂದ ಅನ್ಯಾಯವಾಗುತ್ತಿದೆ. ನಾನು ಒಬ್ಬ ಚುನಾಯಿತ ಪ್ರತಿನಿಧಿಯಾಗಿದ್ದೇನೆ, ಪಕ್ಷದ ವತಿಯಿಂದ ಇಲ್ಲಿ ನಾಯಕನಾಗಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯರವರು ಪಕ್ಷದ ವತಿಯಿಂದ ನಾಯಕರು ಆಗಿದ್ದಾರೆ, ಅವರೇ ಚರ್ಚೆಯಲ್ಲಿ ಭಾಗವಹಿಸಬೇಕಾಗಿತ್ತು. ಅವರು ಬೇರೆ ಸ್ನೇಹಿತರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಉಪಾಧ್ಯಕ್ಷರೆ, ನಾನು ಇದು ಒಂದೇ ವಿಚಾರಕ್ಕೆ ಹೇಳುತ್ತಿಲ್ಲ, ಎಲ್ಲಾ ವಿಚಾರಕ್ಕೂ ಹೇಳುತ್ತಿದ್ದೇನೆ. ಈಗ ನಿಯಮ 69ರ ಅಡಿಯಲ್ಲಿ ರೈತರ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ, ಅದನ್ನು ಒಂದು ವಾರದಿಂದ ಅರ್ಜೆಂಟ್ ಮಾಡುತ್ತಿದ್ದೀರಿ, ಇದನ್ನು ಮುಗಿಸಿಬಿಡಿ ಎಂದು ಹೇಳುತ್ತಿದ್ದೀರಿ. ಇದನ್ನು ಇನ್ನು ಮುಗಿಸಲು ಆಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಉಪಾಧ್ಯಕ್ಷರೆ, ಇವರು ಕಾರ್ಯಕಲಾಪಗಳ ಪಟ್ಟಿಯ ಪ್ರಕಾರ ಯಾವುದನ್ನು ಚರ್ಚೆಗೆ ತೆಗೆದುಕೊಳ್ಳುತ್ತಿಲ್ಲ, ಈ ವಿಷಯ ಈ ಪಟ್ಟಿಯಲ್ಲಿದ್ದರೂ ಬೇರೆ ವಿಷಯಗಳಿಗೆ ಹೋಗುತ್ತಾರೆ. ಈ ರೀತಿಯಾದರೆ ಹೇಗೆ ಪೂರೈಸಬೇಕು? ಮಾನ್ಯ ಸಿಂಧ್ಯರವರು ಹಿರಿಯ ಸದಸ್ಯರಾಗಿದ್ದಾರೆ. ಇವರು ಗೈಡ್ ಮಾಡಬೇಕು, ತಾವೇ ಪಕ್ಷದ ಮುಖಂಡರು ಆಗಿದ್ದಾರೆ, ಈಗ ತೌಡು ಕುಟ್ಟುವಂತಹ ಕೆಲಸವೆಂದು ಹೇಳುತ್ತಾರೆ. ಅವರಿಗೆ ಗೌರವವನ್ನು ಸದನವೂ ಕೊಡುತ್ತಿದೆ, ಅವರು ಹೇಳುವಂತಹ ಮಾತುಗಳನ್ನು ಗಂಭೀರತೆಯಿಂದ, ಸೌಜನ್ಯದಿಂದ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಉಪಾಧ್ಯಕ್ಷರೆ, ನಾವು ರೂಲಿಂಗ್ ಪಾರ್ಟಿಯವರು ಒಂದು ಸಜೆಷನ್ ಹೇಳುತ್ತೇವೆ. ಇಲ್ಲಿ ವಿರೋಧಪಕ್ಷದವರು ಹೇಳುವಂಥಾದ್ದನ್ನು ಕೇಳುವಂಥಾದಕ್ಕೆ ಇರುವುದು. ಇಲ್ಲಿ ಒಂದು ವಿಚಿತ್ರ ಸನ್ನಿವೇಶವನ್ನು ವಿರೋಧಪಕ್ಷದವರೇ ಸೃಷ್ಟಿ ಮಾಡುತ್ತಾರೆ. ಮಾನ್ಯ ಸಿಂಧ್ಯರವರು ಹೇಳಿದಂತಹ ಮಾತನ್ನು ಒಪ್ಪುತ್ತೇವೆ, ಅವರು ಇಲ್ಲಿ ಪಕ್ಷದ ವತಿಯಿಂದ ಉಪನಾಯಕರು ಆಗಿದ್ದಾರೆ, ಅವರೇ ಚರ್ಚೆಯಲ್ಲಿ ಭಾಗವಹಿಸಬೇಕಾಗಿತ್ತು. ಆಗ ಪ್ರಚಾರವೂ ಸಿಗುತ್ತಿತ್ತು, ಅವಕಾಶವೂ ಸಿಗುತ್ತಿತ್ತು. ಈಗ 7 ಗಂಟೆಯಾಯಿತು, 7.30 ಗಂಟೆಯಾಯಿತೆಂದು ಹೇಳುತ್ತಾರೆ. ಈ ರೀತಿ ವಿರೋಧಪಕ್ಷದವರ ವಿಚಿತ್ರವಾದಂತಹ ವರ್ತನೆಯಿಂದ ಆಡಳಿತ ಪಕ್ಷದವರಿಗೆ ತೊಂದರೆಯಾಗುತ್ತಿದೆ. ಅಧ್ಯಕ್ಷರೆ,

7.20 ಪಿ.ಎಂ.

ಸಭಾಧ್ಯಕ್ಷರು ವಂಚನೆ ಮಾಡಿದ್ದಾರೆನ್ನುವ ಮಾತನ್ನು ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದರು ಅದನ್ನು ಕಡತದಿಂದ ತೆಗೆಸಬೇಕು. ಅಧ್ಯಕ್ಷರು ನಮಗೆ ವಂಚನೆ, ಮೋಸ ಮಾಡಿದ್ದಾರೆಂದು ಗುರುತರವಾದ ಅಪಾದನೆಯನ್ನು ಮಾಡಿದ್ದಾರೆ, ತಾವು ಸಾಕಷ್ಟು ಕಾಲಾವಕಾಶವನ್ನು ವಿರೋಧಪಕ್ಷದವರಿಗೆ ಕೊಟ್ಟಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್ :— ಈ ಚರ್ಚೆ ನಡೆಯುತ್ತಿರುವುದು, ಸದನ ಸರಿಯಾಗಿ ನಡೆಯಬೇಕು, ಸಕಾಲದಲ್ಲಿ ನಡೆಯಬೇಕೆಂಬುದು ಒಳ್ಳೆಯ ವಿಚಾರ. ಆದರೆ ಇಲ್ಲಿರುವ ನಿಯಮದ ಪ್ರಕಾರ ಆಯಾ ಪಕ್ಷದ ಸದಸ್ಯರ ಸಂಖ್ಯೆ ಎಷ್ಟು, ಅವರಿಗೆ ಮೀಸಲಾದ ಸಮಯವೆಷ್ಟು? ಈ ಸದನದ ಎಲ್ಲಾ ಸದಸ್ಯರಿಗೂ ಸಮಾನವಾದ ಹಕ್ಕಿದೆ, ತಾವು ಪ್ರತಿಯೊಂದು ಪಕ್ಷಕ್ಕೂ ಸಮಯವನ್ನು ನಿಗದಿಪಡಿಸಿ, ಆಳುವ ಪಕ್ಷದ ಸದಸ್ಯರಿಗೆ ಸಮಯಕೊಡುವುದು ಈ ಒಂದು ಸದನದಲ್ಲಿ ಸಂಪ್ರದಾಯವಿದೆ, ಆದರೆ ಅದನ್ನು ಬಿಟ್ಟು ಕೆಲವರೆ ಈ ಸದನದಲ್ಲಿ ಪ್ರತಿಯೊಂದು ವಿಷಯದ ಬಗ್ಗೆಯೂ ಸಾಕಷ್ಟು ಸಮಯವನ್ನು ಪಡೆದು ಅದೇ ಮುಖಂಡರು ಮಾತನಾಡುತ್ತಿದ್ದಾರೆ, ಈ ಕಡೆಯ ಎಲ್ಲಾ ಹೊಸ ಸದಸ್ಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿಲ್ಲ. ಆದುದರಿಂದ, ನಿಯಮದ ಪ್ರಕಾರ ಆಯಾ ಪಕ್ಷಗಳಿಗೆ ಸಮಯವನ್ನು ನಿಗದಿಪಡಿಸಿ ಆಯಾ ಸಮಯವನ್ನು ಸಂಬಂಧಿಸಿದ ಪಕ್ಷದವರಿಗೆ ಕೊಡಿ, ಅದೇ ರೀತಿಯಾಗಿ ಆಳುವ ಪಕ್ಷದವರಿಗೂ ಸಮಯವನ್ನು ಹಂಚಿ ಸಕಾಲದಲ್ಲಿ ಈ ಸದನ ನಡೆಯುವುದಕ್ಕೆ ಮಾನ್ಯ ಸಭಾಧ್ಯಕ್ಷರು ಅನುವು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಇನ್ನು ಮುಂದೆ ಹಾಗೆ ಮಾಡೋಣ, ಶ್ರೀನಿವಾಸಗೌಡರು ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ಉಪಾಧ್ಯಕ್ಷರೆ, ಆ ಪಕ್ಷದ ನಾಲ್ಕೈದು ಜನ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ, ಕಾಲಾವಕಾಶವೆಷ್ಟು ಕೊಡಲಾಗಿದೆ ಎನ್ನುವ ಬಗ್ಗೆ ಕಡತವನ್ನು ತೆಗೆಯಿರಿ ಆಳುವ ಪಕ್ಷದ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :— ಡಾ: ರಾಜ್‌ಕುಮಾರ್ ಅಪಹರಣದ ಬಗ್ಗೆ ಬಹಳಷ್ಟು ಚರ್ಚೆ ಮಾಡಬೇಕೆಂದು ನಮ್ಮ ಪಕ್ಷದವರು ಕೇಳಿದ್ದೆವು, ರಾಜ್‌ಕುಮಾರ್‌ರವರ ಬಿಡುಗಡೆಯಾಗುವುದು ಮುಖ್ಯ. ಆದಾದ ಮೇಲೆ ಚರ್ಚೆ ಮಾಡೋಣವೆಂದು ಸರ್ಕಾರದವರು ಹೇಳಿದ್ದರಿಂದ ಇವತ್ತು ಚರ್ಚೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಡಾ: ರಾಜ್‌ಕುಮಾರ್‌ರವರ ಬಿಡುಗಡೆಗೆ ಮುಂಚೆ ಚರ್ಚೆ ಮಾಡಿದ್ದರೆ ನಮ್ಮ ಸಲಹೆ ಮಾರ್ಗಸೂಚನೆಗಳನ್ನು ಕೊಡಲು ಸಾಧ್ಯವಾಗುತ್ತಿತ್ತು, ಆಗ ಅವರ ಸುರಕ್ಷಿತ ಬಿಡುಗಡೆಗೋಸ್ಕರ ನಾವೆಲ್ಲರೂ ಸುಮ್ಮನಿದ್ದೆವು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ, ಡಾ: ರಾಜ್‌ಕುಮಾರ್‌ರವರ ಸುರಕ್ಷಿತ ಬಿಡುಗಡೆಗೆ ಶ್ರಮಿಸಿದ ಎಲ್ಲಾ ಸಂಧಾನಕಾರರಿಗೂ ನನ್ನ ಕೃತಜ್ಞತೆಗಳು, ಆದರೂ ಅವರ ರಾಜಕೀಯ ಅಥವಾ ರಾಜಕೀಯ ಧೋರಣೆಯನ್ನು ನಾನು ಸಮರ್ಥಿಸುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಬಯಸುತ್ತೇನೆ, ಯಾವುದೇ ಭಯ ಹಾಗೂ ಒಲವಿಲ್ಲದೆ ರಾಷ್ಟ್ರವಿರೋಧ ಶಕ್ತಿಗಳನ್ನು ಹತ್ತಿಕ್ಕುವುದು ನನ್ನ ದೃಷ್ಟಿಕೋನವಾಗಿದೆ

ಎಂದು ಹೇಳಿದ್ದಾರೆ. ಕೊನೆಯವರೆವಿಗೂ ಡಾ: ರಾಜ್‌ಕುಮಾರ್‌ರವರು ಬಿಡಿಸಿಕೊಂಡು ಬಂದವರ್‍ಯಾರು ಎಂದು ಸ್ಪಷ್ಟವಾಗಿ ಮುಖ್ಯಮಂತ್ರಿಗಳು ಹೇಳಲಿಲ್ಲ. ಇದಕ್ಕೆ ಎರಡು ರಾಜ್ಯಗಳ ಸಂಧಾನಕಾರರಾದ ಗೋಪಾಲ್‌ರವರು ಕಾರಣರೇ ಅಥವಾ ನೆಡುಮಾರನ್‌ರವರು ಕಾರಣರೇ ಅಥವಾ ಡಾ: ಭಾನು ಕಾರಣರೇ ಅಥವಾ ಈ ಗ್ರಾನೈಟ್ ಲಾಭಿ ಕಾರಣವೇ? ಅಥವಾ ವೀರಪ್ಪನಿಗೆ 25 ರಿಂದ 100 ಕೋಟಿ ರೂಪಾಯಿ ಹಣವನ್ನು ಕೊಟ್ಟು ಕರೆದುಕೊಂಡು ಬರಲಾಗಿದೆಯೇ? ಎಂಬ ಈ ಎಲ್ಲ ಪ್ರಶ್ನೆಗಳಿಗೆ ನನಗೆ ಉತ್ತರ ಸಿಗಲಿಲ್ಲ. ಮುಗಂ ಅಗಿ ಸಂಧಾನಕಾರರು ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದಿದ್ದಾರೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಕೊನೆಗಳಿಗೆಯಲ್ಲಿ ಗೋಪಾಲ್‌ರವರು ರಾಜ್‌ಕುಮಾರ್‌ರವರು ಕರೆದುಕೊಂಡು ಬರುತ್ತಾರೆಯೇ ಎಂದು ನಾವೆಲ್ಲಾ ಕತ್ತಲಲ್ಲಿ ಇರುವಂತಾಗಿತ್ತು. ಆದರೆ ಕೊನೆಯವರೆವಿಗೂ ಡಾ: ರಾಜ್‌ಕುಮಾರ್‌ರವರನ್ನು ಇಂತಹವರು ಬಿಡುಗಡೆ ಮಾಡಿಸಿಕೊಂಡು ಕರೆತಂದರು ಎನ್ನುವುದನ್ನು ಮುಖ್ಯಮಂತ್ರಿಗಳು ಹೇಳಲಿಲ್ಲ. ನಕ್ಕೀರನ್ ಗೋಪಾಲ್‌ರವರು 5 ಸಾರಿ ವೀರಪ್ಪನ್ ಹತ್ತಿರ ಹೋದರು, ರಾಜ್‌ಕುಮಾರ್‌ರವರನ್ನು ಮಾತನಾಡಿಸಿದರು, ವಿಡಿಯೊ, ಆಡಿಯೊ ಕ್ಯಾಸೆಟ್ ತಂದರು, ಅದರಲ್ಲಿ ಏನಿದೆ ಎನ್ನುವುದನ್ನು ಹೇಳಲಿಲ್ಲ, ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸುವ ದಿವಸ ಅವರನ್ನು ಹೊರಗಿಟ್ಟರು. ವೀರಪ್ಪನ್‌ನ ಹಿಂದಿನ ಚಾಳಿಗಳನ್ನು ನೋಡಿದಾಗ ಹಣ ಕೊಡದೆ ಯಾರನ್ನೂ ಬಿಟ್ಟಿಲ್ಲ, ಇವತ್ತು ಕೆಲವಾರು ಉದ್ಯಮಿಗಳಿಂದ ಹಣವನ್ನು ವಸೂಲ್ಮಾಡಿದ್ದಾರೆ. ನಾವು ಸರ್ಕಾರವನ್ನು ನಡೆಸಿರುವವರೆ, ಚುನಾವಣೆಗಳಲ್ಲಿ ಆ ಉದ್ಯಮಗಳವರು ಹಣ ಕೊಟ್ಟಿರುವವರೆ ಸುಮಾರು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಅವರೇ ಹೇಳುತ್ತಾರೆ. ಈ ಹಣವನ್ನೇನಾದರೂ ವೀರಪ್ಪನ್‌ಗೆ ಕೊಡಲಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ :— ನಿಮಗೆ ನಿಜವಾಗಿಯೂ ಖಚಿತವಾದ ವಿಷಯಗಳು ಗೊತ್ತಿದ್ದರೆ, ಯಾರು ಎಲ್ಲಿ, ಎಷ್ಟು ಎನ್ನುವುದನ್ನು ಹೇಳಬೇಕು, ಸುಮ್ಮನೆ ಹೇಳಿದರೆ ಬೆಲೆ ಇರುವುದಿಲ್ಲ. ನಿಮಗೆ ಯಾರು ಹೇಳಿದರು?

ಶ್ರೀ ಎಸ್.ಎಸ್. ಪಾಟೀಲ್ :— ಶ್ರೀನಿವಾಸಗೌಡರೆ, ದಯಮಾಡಿ ಈ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಬೇಡಿ, ಕೇಳಿದರೆ ಗಾಂಧೀಜಿ ಕಣ್ಣಿನಲ್ಲಿ ನೀರು ಬರುವುದಕ್ಕೆ ಪ್ರಾರಂಭವಾಗುತ್ತದೆ, ನೀವು ಕೇಳಿದರೆ ಅವರು ಇಲ್ಲವೆಂದೇ ಉತ್ತರ ಹೇಳುತ್ತಾರೆ. ಕೊಡಲಾಗಿದೆ ಎಂದು ಹೇಳುವುದಿಲ್ಲ, ಆದುದರಿಂದ ಗಾಂಧೀಜಿ ಫೋಟೊ ಮುಂದೆ ಮುಖ್ಯಮಂತ್ರಿಗಳಿಂದ ಸುಳ್ಳನ್ನು ಏತಕ್ಕೆ ಹೇಳಿಸಬೇಕು?

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಪಾಟೀಲ್‌ರವರೆ, ಸರ್ಕಾರ ನಡೆಸಿದವರು, ತಮಗೆ ಎಲ್ಲಾ ಗೊತ್ತಿದ್ದು ಹೀಗೆ ಹೇಳಿದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ :— ನಮ್ಮ ಸರ್ಕಾರ ಇರುವಾಗ ನಮ್ಮ ಚುನಾವಣೆಗೆ ಹಣ ಕೊಟ್ಟಂತಹವರ ಸುಮಾರು ನೂರು ಕೋಟಿ ರೂಪಾಯಿಗಳನ್ನು ವಸೂಲ್ಮಾಡಿದ್ದೇವೆಂದು ಹೇಳಿಕೊಂಡು ಓಡಾಡುತ್ತಿದ್ದಾರೆ, ನಾನೇನು ಆಧಾರವಿಲ್ಲದೆ ಮಾತನಾಡುವುದಿಲ್ಲ, ಒಬ್ಬ ಉದ್ಯಮಿ ನನ್ನ ಹತ್ತಿರ ಹೇಳಿದ್ದರಿಂದ ಇದನ್ನು ಹೇಳುತ್ತಿದ್ದೇನೆ, ಆ ನೂರು ಕೋಟಿ ರೂಪಾಯಿಗಳು ಎಲ್ಲಿ ಹೋಯಿತು?

(ಗೊಂದಲ)

ಶ್ರೀ ಬಿ. ಸೋಮಶೇಖರ್ :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ಅವರಿಗೆ ಸಂಪೂರ್ಣವಾದಂತಹ ಜವಾಬ್ದಾರಿ ಹಾಗೂ ಅಧಿಕಾರ ಇರುತ್ತದೆ. ಯಾವುದೇ ಸದಸ್ಯರು ಏನಾದರೂ ಆರೋಪ ಮಾಡಬೇಕಾದರೆ ಆ ಸದಸ್ಯರು ಅದಕ್ಕೆ ಪುರಾವೆಗಳನ್ನು ಒದಗಿಸಲೇಬೇಕು ಎನ್ನುವ ಹಾಗೆ ಇಲ್ಲ. ತಮಗೆ ಜ್ಞಾಪಕ ಇರಬಹುದು, ಒಬ್ಬರು ಸದಸ್ಯರು ಹೇಳಿದರು ಎಂದು ಅವರ ಮಾತನ್ನು ನಂಬಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ನಾನು ರಾಜೀನಾಮೆ ಕೊಟ್ಟಿದ್ದೇನೆ. ಅವರೇನು ಇಲ್ಲಿ ಬಂದು ಸಾಬೀತು ಮಾಡಿರಲಿಲ್ಲ. ಅವರು ಹೇಳುತ್ತಿರುವಂತಹ ವಿಚಾರ ಬಹಳ ಗಂಭೀರವಾದುದು. ನೀವು ಅದನ್ನು ಪ್ರೂವ್ ಮಾಡಬೇಕಾಗುತ್ತದೆ. ಅದು ಸರ್ಕಾರದ ಜವಾಬ್ದಾರಿ ಇದೆ. ಮಾನ್ಯ ಸದಸ್ಯರು ಆರೋಪ ಮಾಡತಕ್ಕಂಥ ಅಧಿಕಾರ ಇದೆ. ಅವರು ಒಬ್ಬ ಜವಾಬ್ದಾರಿ ಸದಸ್ಯರು.

ಶ್ರೀ ಕಾಗೋಡು ತಿಮ್ಮಪ್ಪ :— ತಾವು ಜವಾಬ್ದಾರಿಯಿಂದ ಮಾತನಾಡಬೇಕು. ನೀವು ಮೂರ್ಖತನದಿಂದ ರಾಜೀನಾಮೆ ಕೊಟ್ಟಿರಿ.

ಶ್ರೀ ಬಿ. ಸೋಮಶೇಖರ್ :— ಅವರು ಜವಾಬ್ದಾರಿ ಸದಸ್ಯರಿದ್ದಾರೆ. ಆರೋಪ ಮಾಡುತ್ತಿದ್ದಾರೆ. ಅದನ್ನು ಯಾವರೀತಿ ಅಲ್ಲಗಳೆಯಬೇಕು. ಅದಕ್ಕೆ ಏನು ಹೇಳಬೇಕು ಎನ್ನುವ ಜವಾಬ್ದಾರಿ ನಿಮ್ಮ ಮೇಲೆ ಬಿದ್ದಿದೆ. ಅದಕ್ಕೆ ಅವರು ಎವಿಡೆನ್ಸ್ ತೋರಿಸಬೇಕೆಂದು ಏನೂ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಉಪಾಧ್ಯಕ್ಷರೆ, ಪ್ರೆಸ್‌ನವರು ಒಬ್ಬರೂ ಇಲ್ಲ. ನಾನು ಏನು ಮಾತನಾಡುವುದು. ನಾವು ಹೇಳುವುದು ಜನರಿಗೆ ಗೊತ್ತಾಗಬೇಕು. ನಾವು ಇವರಿಗಾ ಹೇಳುವುದಕ್ಕಾ ಬಂದಿರುವುದು? ನಾವು ಏನು ಮಾತನಾಡಿದ್ದೇವೆ ಎಂದು ನಾಡಿನ ಜನಕ್ಕೆ ಗೊತ್ತಾಗಬೇಕು. ಪ್ರೆಸ್‌ನವರು ಒಬ್ಬರು ಉಳಿತಿಲ್ಲ. ಬರೀ ನಾವು ಕಾಗೋಡು ತಿಮ್ಮಪ್ಪನವರಿಗೆ ಹೇಳುವುದಕ್ಕೆ ಬಂದಿದ್ದೇವಾ? ಈ ರೀತಿಯಾದರೆ ನಾನು ಮಾತನಾಡುವುದಿಲ್ಲ. ಪ್ರೆಸ್‌ನವರು ಬಂದರೆ ಮಾತ್ರ ನಾನು ಮಾತನಾಡುತ್ತೇನೆ. ಇಲ್ಲದೆ ಇದ್ದರೆ ಮಾತನಾಡುವುದಿಲ್ಲ. ನನಗೆ ಇನ್ನು ಅನೇಕ ವಿಷಯಗಳನ್ನು ಮಾತನಾಡಬೇಕೆಂದು

ಆಸೆ ಇದೆ ಪ್ರೆಸ್‌ನವರು ಇಲ್ಲದೆ ನಾವು ಏನು ಮಾತನಾಡುವುದು? ದಯವಿಟ್ಟು ನೀವು ನನಗೆ ನಾಳೆಗೆ ಅವಕಾಶ ಮಾಡಿಕೊಡಿ. ನಾನು ಬಹಳ ಮಾತನಾಡುತ್ತೇನೆ. ಪ್ರೆಸ್‌ನವರು ಒಬ್ಬರೂ ಇಲ್ಲ. ನಾವು ಮಾತನಾಡಿದ್ದು ನಾಳೆ ಪತ್ರಿಕೆಯಲ್ಲಿ ಬರಬೇಕಲ್ಲ. ನಾವೂ ಸನ್ಯಾಸಿಗಳಲ್ಲ. ನಾವೂ ರಾಜಕಾರಣಿಗಳು. ನಾವು ಯಾವರೀತಿ ಮಾತನಾಡಿದ್ದೇವೆ ಎಂದು ನಾಲ್ಕು ಜನರಿಗೆ ಗೊತ್ತಾಗಬೇಕು. ನಮ್ಮ ಕ್ಷೇತ್ರದ ಜನರಿಗೆ ಗೊತ್ತಾಗಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಈ ಕಡೆ ನೋಡಿ, ನೀವು ಏನು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ. ದಯವಿಟ್ಟು ಅಡ್ಜರ್ನ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡುವಾಗ 5-30ಕ್ಕೆ ಪೂರ್ಣವಾಗಬೇಕೆಂದು ಇತ್ತು. ಈಗಾಗಲೇ ಏಳೂವರೆಯಾದರೂ ನಾವು ಕುಳಿತು ಕೇಳುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು 5-30ಕ್ಕೆ ಮುಗಿಸುತ್ತೇವೆಂದು ಹೇಳಿದ್ದರು, ಮುಗಿಸಿದರು.

ಉಪಾಧ್ಯಕ್ಷರು :— ಮಾನ್ಯ ಸುರೇಶ್ ಕುಮಾರ್‌ರವರೆ, ಆ ತರಹ ಇಂಟರ್‌ಪ್ರಿಟೇಷನ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಉಪಾಧ್ಯಕ್ಷರೆ, ತಾವು ಸದಸ್ಯರ ಭಾವನೆಗಳನ್ನು ನೋಡಿ ಸದನದ ಕಾರ್ಯಕಲಾಪವನ್ನು ನಿರ್ಧರಿಸುವುದು ಒಳ್ಳೆಯದು. ಇಲ್ಲಿ ಎಲ್ಲರ ಭಾವನೆಗಳು ತಮಗೆ ಗೊತ್ತಾಗುತ್ತಿದೆ. ತಮಗೆ ಸರ್ಕಾರದಿಂದ ಯಾವುದೋ ಸೂಚನೆ ಬಂದಿದೆ ಎನ್ನುವ ರೀತಿಯಲ್ಲಿ ಅದನ್ನು ಬಳಸುವ ರೀತಿಯಲ್ಲಿ ಕಾಣುತ್ತದೆ. ದಯವಿಟ್ಟು ಸದಸ್ಯರ ಭಾವನೆಗೆ ಅನುಗುಣವಾಗಿ ಸದನದ ಕಾರ್ಯಕಲಾಪಗಳನ್ನು ನಡೆಸಬೇಕು.

ಉಪಾಧ್ಯಕ್ಷರು :— ಈಗ ಸದನವನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ತನ್ನ ಕಲಾಪವನ್ನು ಸಂಜೆ 7 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ ದಿನಾಂಕ: 22-11-2000ದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)